# ಶೂದ್ರ

ಈ ಸಂಚಿಕೆಯಲ್ಲಿ :

**ನಜೀರ ಚಂದಾವರ--ಕೆ.ಎಸ್. ಗಂಗಾಧರ್-ಟಿ.ಎಂ. ಷಡಕ್ಷರಿ--ಸಾ.ಸಾ. ರಾಮಮೂರ್ತಿ--ಲತಾ ರಾಜಶೇಖರ್--ಪಿ. ಲಂಕೇಶ್--ಹರಿನಾರಾಯಣ ಆಚಾರ್ಯ--ಮಮತಾ ಜಿ. ಸಾಗರ್-ಜಿ.ವಿ. ಪೆಂಡಕೂರ್-ವರವರರಾವ್ ಕರೀಗೌಡ ಬೀಚನಹಳ್ಳಿ-ಅರವಿಂದಮಾಲಗತ್ತಿ-ಪ್ರತಿಭಾ ನಂದಕುಮಾರ್ ಕನಸಿಗೊಂದು ಕಣ್ಣು.**

ಬೆಲೆ : 4.00

ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 4 ಫೆಬ್ರವರಿ 1990 ಸಂಪುಟ : 16

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿಶಿವಶಂಕರ್–ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರಂ ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತಂ. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಒ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು 15 ಪೈಸೆಯ ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 5 ರೂ. ಹೆಚ್ಚುವರಿ ತುಂಬಿ.

ಮುಖಪುಟದ ರೇಖಾಚಿತ್ರದ ಕೃಪೆ : ಕೆ.ಕೆ. ಹೆಬ್ಬಾರ್

**ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ**

ವಾರ್ಷಿಕ ಚಂದಾ : 45-00 ರೂ. ಪುಸ್ತಕ ಭಂಡಾರಗಳಿಗೆ 50-00 ರೂ.
ಆಜೀವ ಚಂದಾ 400-00 ರೂ. (ನಾಲ್ಕು ಕಂತುಗಳಲ್ಲಿ)

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

# ಉತ್ಥಾನ

— ನಜೀರ ಚಂದಾವರ

ಏಳು ಹಗಲು-ರಾತ್ರಿಗಳು ಕಳೆದವು.

ಬೆಳಕ ಬೆನ್ನಟ್ಟುವ ಕತ್ತಲೆ-ಕತ್ತಲೆಯು ಕತ್ತರಿಸುವ ಬೆಳಕು.

ಈ ಮಧ್ಯೆ ಸೂರ್ಯ-ಚಂದ್ರ-ನಕ್ಷತ್ರಾದಿಗಳು ನೆಟ್ಟುಕೊಂಡವು ಆಕಾಶದ ಶೂನ್ಯದಲಿ. ನೀಲಿ ಮತ್ತು ಕಪ್ಪು ಛಾಯೆಗಳಲಿ ಬಾಯಿ ತೆರೆದ ಸಾಗರದ ತೆರೆಗಳು, ಅಲೆ ಅಲೆದು ನುಗ್ಗಿದವು-ಮಣ್ಣು, ಬೆಟ್ಟ-ಗುಡ್ಡ, ಚಿಗುರು-ಹಸಿರೆಲೆ, ಕಾಡು-ಮೇಡುಗಳಿಗೆ ಬಿರುಸು ನಡಿಗೆಯಲ್ಲಿ-ಹತಾಶೆಯಿಂದ ಹಿಂದಿರುಗಿದವು, ತನ್ನ ಒಡಲು ತುಂಬಿಕೊಂಡ ನೋವಿನ ಕಾವು-ಉಕ್ಕಿದ ರೀತಿ-ತೊರೆದು ಹೋದ ಗತಿ-ನೊರೆಯು ಗುರುತಿನಲ್ಲಿ.

ಹಾರಾಡಿದವು ಪಕ್ಷಿಗಳು ಕಲರವದಲಿ, ಸೋತು ಕೂತವು ನೆಲೆ ಹುಡುಕಿ. ಘರ್ಜಿಸಿದವು-ಓಡಿದವು, ಮೃಗಗಳು, ಆಯಾಸಗೊಂಡು ನಿಂತವು ಗುಂಪು ಕಟ್ಟಿ, ನೆರಳುಗಳ ಹುಡುಕಿ.

ಆಕಾಶ-ಭೂಮಿ ಮಧ್ಯೆ ಸುಳಿಯಿತು ಸುಳಿಗಾಳಿ-ಎಲೆಗಳ ಬಡಿದು-ಗುಡ್ಡಗಳಿಗೆ ಡಿಕ್ಕಿ ಹೊಡೆದು-ಧೂಳಿ ಹೊದ್ದು ತುಂಡಾಗಿ ನಿಟ್ಟುಸಿರಾಗಿ ಉರುಳಿದವು ಮಣ್ಣಲ್ಲಿ-ಬಿದ್ದಾಗ ನದಿಗಳಲಿ ಎದ್ದ ಅಲೆಗಳಲ್ಲಿ.

ಆತ ನಿದ್ದೆಗೆಟ್ಟ-ಏಳು ಹಗಲು-ರಾತ್ರಿಗಳಲಿ.

ಹಗಲು-ರಾತ್ರಿ, ರಾತ್ರಿ-ಹಗಲು-ನಿತ್ಯ ನೋಡುತ್ತ ಕೂತ. ಕತ್ತಲೆ-ಬೆಳಕು, ಬೆಳಕು-ಕತ್ತಲೆ-ಎರಡೂ ಬೆರೆತವು ಮತ್ತು ಬೆರೆಯುತ್ತಾ ಉರುಳಿದವು ಚಕ್ರದಂತೆ, ಆತನ ಇಚ್ಛೆಯಂತೆ.

ಎಲ್ಲ ಕ್ರಿಯೆ ನಡೆಯುತ್ತಿದ್ದವು. ಆದರೆ ಏನೋ ಕೊರತೆ ಆತನಿಗೆ-ತನ್ನ ಸೃಷ್ಟಿಯ ಸೊಗಸು ಸವಿಯಲು, ಆನಂದಿಸಲು, ಕೃತಜ್ಞನಾಗಲು....

ಆತ ನಿಟ್ಟುಸಿರಿಟ್ಟ-ಹಣೆ ತಿಕ್ಕಿಕೊಂಡ-ತಾನು ಸಂಯೋಜಿಸಿದ ಈ ಪರಿಪೂರ್ಣತೆಯಲ್ಲಿ ಅಪರಿಪೂರ್ಣ ಭಾವನೆ ಕಾಡುತ್ತಿರುವಾಗ....

ಏನೋ ತೋಚಿದವನಂತೆ-ದಿಕ್ಕೆಟ್ಟವನಂತೆ-ಕೈ ತಟ್ಟಿದ. ಓಡಿ ಬಂದರು ಸೇವಕರು-ಕೈ ಕಟ್ಟಿ ನಿಂತರು ಎದುರು. ಆತ ಆಲೋಚನಾಮಗ್ನನಾಗಿದ್ದ. ಇವರು ಚಿಂತಿತರಾಗಿ ಕೇಳಿದರು-"ಓ ದಯಾಮಯ ಕರುಣಾಕರನೇ-ಅಪ್ಪಣೆಯಾಗಲಿ ನಿನ್ನ ಈ ಚಮತ್ಕಾರಿಕ ವಸ್ತುವಿನ ನಿರ್ಮಾಣದಲ್ಲಿ ಇನ್ನೇನು ಉಳಿದಿದೆ ಬಾಕಿ-ಪೂರ್ತಿ ಮಾಡಲು-ಸರಿಪಡಿಸಲು"

ನಜೀರ ಚಂದಾವರ, ರಾಮನಗರ, ಶಿರಸಿ(ಉ.ಕ.) ೫೮೧೪೦೦

ಆತ ಹಣೆಯ ಗೆರೆ ಸಡಿಲು ಬಿಟ್ಟು ಹೇಳಿದ "ಹೋಗಿ, ಮಣ್ಣು ತನ್ನಿ, ಪುತ್ಥಳಿ ಮಾಡಿ, ನನ್ನ ಇಚ್ಛೆಗೆ ಒಪ್ಪುವಂತೆ"

ಆತನ ಆಜ್ಞೆಯಂತೆ ಮೂರ್ತಿ ಸಿದ್ಧವಾಯಿತು.

ಆತ ಎದುರು ನಿಂತು ನೋಡಿದ. ಮುಗುಳ್ನಕ್ಕ—"ನನ್ನ ಕಲ್ಪನೆಯ ಈ ನಮೂನೆಗೆ ಹಕ್ಕುದಾರ–ನನ್ನ ಆಣತಿಯ ಮಿತಿಯಲ್ಲಿ ಸರದಾರ." ಅವನ ಅಪ್ಪಣೆಯಂತೆ ಪಂಚಭೂತಗಳು ಇಳಿದವು ಮೂರುತಿಯಲಿ. ಆತ ಅದಕ್ಕೊಂದು ಜೀವ ಕೊಟ್ಟ.

ಆತ ಅವನನ್ನು ಉದ್ದೇಶಿಸಿ ಕರೆಕೊಟ್ಟ– "ಓ ನನ್ನ ಮೊದಲ ಪುರುಷನೇ–ನೀ ಈಗ ಸರ್ವ ಸ್ವತಂತ್ರ. ಆದರೆ ನನ್ನ ಅಪ್ಪಣೆ ಮೀರಿ ನಡೆಯಕೂಡದು" ಅದಕ್ಕೆ ಪುರುಷ ತಲೆ ಬಾಗಿದ.

—ವಿಕಾರದ ಹುಟ್ಟು—

## ಭಾಗ–2

ದಿನಗಳು ಸರಿದಂತೆ ಪುರುಷ ಅಂತರ್ಮುಖಿಯಾದ. ಆತ–ಒಡೆಯ–ಗಮನಿಸಿದ. ಕರೆ ಕಳಿಸಿ ಕೇಳಿದ–"ಹೇ, ಪುರುಷ ಯಾಕೆ ಈ ರೀತಿ ? ನನ್ನಿಂದ ನಿರ್ಮಿಸಲ್ಪಟ್ಟ ಈ ಸಕಲ ವಸ್ತುಗಳು ನಿನಗೆ ಸುಖ–ಸಂತೋಷ ನೀಡಿಲ್ಲವೆ ?"

ಅವನು ಮೂಕನಾಗಿದ್ದ. ತಲೆ ತಗ್ಗಿಸಿ ನಿಂತಿದ್ದ, ಸಕಲವನ್ನೂ ಅರಿತವನ ಮುಂದೆ ದೀನನಾಗಿ. ಆತ ಆಜ್ಞೆ ಮಾಡಿದ–"ನೀ ನಿದ್ದೆ ಹೋಗು". ಅವನು ನಿದ್ರಿಸಿದ.

ಆತನ ಕರೆಗೆ ಸೇವಕರು ಬಂದರು. ಅವರನ್ನು ಉದ್ದೇಶಿಸಿ ಹೇಳಿದ–"ಈ ನನ್ನ ಪುರುಷನಿಗೆ ಜೊತೆಗಾರ ಬೇಕು. ನೀವು ಈತನ ಪಕ್ಕೆಲುಬಿನಿಂದ ಒಂದು ಬಾಗಿದ ಎಲುಬು ತೆಗೆಯಿರಿ. ಮತ್ತಲ್ಲಿ ಮಾಂಸದಿಂದ ಮುಚ್ಚಿರಿ. ಎದೆಯಿಂದ ತುಂಡೊಂದು ತೆಗೆಯಿರಿ. ಮತ್ತಲ್ಲಿ ಒರಟು ಚರ್ಮ ಹಚ್ಚಿ ಮರೆಮಾಡಿ"

ಒಡೆಯನ ಆಜ್ಞೆ ಶಿರಸಾವಹಿಸಿ ನೆರವೇರಿಸಲ್ಪಟ್ಟಿತು.

ಒಡೆಯನ ಆಣತಿಯಂತೆ ಎಚ್ಚೆತ್ತ ಪುರುಷ ನೋಡಿದ ಸುತ್ತ–ತನ್ನ ಸನಿಹದಲ್ಲಿ ಮುಗುಳ್ನಗುತ್ತಿರುವ ಅನುಪಮ ಸುಂದರ–ತನ್ನನ್ನು ಮೀರಿಸಿದ–ಇನ್ನೊಂದು ಆಕಾರ.

ಅವನು ಎದ್ದು ನಿಂತ ಮೈಕೊಡವಿ, ತಲೆಕೊಡವಿಹೊರಟಿತು ಅವನಿಂದ ಉದ್ಗಾರ–ನಾಲ್ಕು ದಿಕ್ಕಿನಲಿ– "ಇದು ನೆರಳಲ್ಲ....ನನ್ನ ನೆರಳಲ್ಲ....ಖಂಡಿತ ನೆರಳಲ್ಲ....ಹೌದು ನೆರಳಲ್ಲ....ಖಂಡಿತಕ್ಕೂ ನೆರಳಲ್ಲ. ನನ್ನ ಶರೀರದಿಂದಲೇ ನಿರ್ಮಿತಗೊಂಡ, ಮೂಳೆ ಮಾಂಸದ ಒಂದು ಅಂಗ....ಯಾಕೆಂದರೆ ಒಡೆಯ ಆಗ ಹೇಳಿದ್ದ....'ನಿನ್ನ ಆಕಾರ ಕೇವಲ ನಿನಗೆ....ನಿನಗೆ ಮಾತ್ರ....ಓ ಇದು....ನನ್ನ ಶರೀರದ ಒಂದು ಮೂಳೆ, ಹಿಡಿಮಾಂಸದ

ಒಂದು ಅಂಗ....ನನ್ನ ಅವಲಂಬಿಸಬೇಕಾದ ಒಂದು ಅಂಗ....ಇದು ನನ್ನ ಅಂಗದ ಒಂದು ಚೂರು ಅಂಗ....ಹಾ! ಅಂಗ....ನನ್ನೊಂದಿಗೆ ನನ್ನಂಟಿಕೊಂಡಿರಬೇಕಾದ ಅಂಗ."

ಒಡೆಯನ ವಾಣಿ ಕೇಳಿಸಿತು–ಎಲೈ ಪುರುಷನೇ ನೀನೀಗ ಸಂತುಷ್ಟ ತಾನೆ?.... ಇಗೋ ನಿನಗಾಗಿ....ನಿನಗಾಗಿ ನಿನ್ನ ಶರೀರದಿಂದ ನಿರ್ಮಿಸಿದ್ದೇನೆ–ಜೊತೆಗಾರ್ತಿ–ನಿನ್ನ ಅರ್ಧಾಂಗಿನಿ–ಒಂದು ಸುಂದರ ಸ್ತ್ರೀ–ನನ್ನ ಆಜ್ಞೆ ಉಲ್ಲಂಘಿಸದೆ–ನನ್ನ ನಿಯಮ ಮೀರದೆ ಈ ನನ್ನ ಸೃಷ್ಟಿಯ ಆನಂದಿಸು–ಇದು ನಿನಗಾಗಿ, ನಿನ್ನ ಸಲುವಾಗಿ."

ಇವನು ತನ್ನ ಸಂಗಾತಿಯ ಕಂಡು ಸಂತೋಷಗೊಂಡ–ಕುಣಿದು ಕುಪ್ಪಳಿಸಿದ, ಕೈ ಹಿಡಿದು ಎತ್ತಿ ನಿಲ್ಲಿಸಿ, ದಿಟ್ಟಿಸಿದ. ತನ್ನಲ್ಲೇ ನುಡಿದ–ಇವಳು ನನ್ನ ಶರೀರದಿಂದ ನಿರ್ಮಿತಗೊಂಡ ಒಂದು ಅಂಗ–ನನ್ನ ಅಧೀನ ಇರಬೇಕಾದ–ನನ್ನ ಹಕ್ಕು ನಡೆಯಬಹುದಾದ, ನನ್ನ ಅವಲಂಬಿಸಿರಬೇಕಾದ ಅಂಗ–ಜೀವ. ಈಕೆ ನನ್ನ ಅರ್ಧಾಂಗಿನಿ.

— 'ಅಹಂ'ದ ಉದಯ—

## ಭಾಗ–3

ಅವರಿಬ್ಬರು ಕೈ ಕೈ ಹಿಡಿದು ನಡೆದರು–ತಿರುಗಿದರು–ಗಿಡ–ಮರ ಸುತ್ತಿ, ಬೆಟ್ಟ ಹತ್ತಿ, ಹರಿಯುವ ತೊರೆಯಲ್ಲಿ ಕಾಲು ಚಾಚಿ, ನಗ್ನರಾಗಿ–ಭಾವ ವಿಕಾರವಿಲ್ಲದೇ–ನಲಿದರು, ಮೆರೆದಾಡಿದರು–

ಹೆಜ್ಜೆ ಗುರುತು ನೋಡದೆ–ಸಪ್ಪಳವ ಕೇಳದೆ ಹಿಂದಿರುಗಿ ಕಾಲದ ಗತಿಯಲ್ಲಿ ಸೇರಿ.

ಒಂದು ದಿನ–ಅದೊಂದು ವಿಷಗಳಿಗೆ–ಅಗ್ನಿಪರೀಕ್ಷೆ ದುರ್ದೈವ ಬೆನ್ನಟ್ಟಿದಾಗ–ಶನಿಯು ಬಂದರು–ಯಾವ ಸ್ಥಳದಲ್ಲಿ, ಯಾವ ಮರದ ಬಳಿ ಸುಳಿಯದಿರಿ ಎಂದು ಒಡೆಯ ಎಚ್ಚರಿಸಿದ್ದನೋ ಅಲ್ಲಿ.

ಮರದ ಬಳಿ ಬಂದ ಇವರನ್ನ–ಮರ ಸುತ್ತಿಕೊಂಡ ಸರ್ಪಸೈತಾನ ಕಂಡು ನಕ್ಕಿತು, ತನ್ನ ಬಳಿ ಕರೆ–ಕರೆದು ನಕ್ಕಿತು ಮುಗ್ಧತೆ–"ನೀವು ನಿಮ್ಮ ಒಡೆಯನ ಸೃಷ್ಟಿ ಸೊಗಸು ಸವಿದಿದ್ದೀರಾ?"

ಎಚ್ಚೆತ್ತ ಪುರುಷ–ಗಲಿಬಿಲಿಯಲ್ಲಿ–ತೊದಲಿದ–ತಲೆಯಾಡಿಸಿ ಹೌದೆಂದ, ಸನ್ನೆಯಲಿ–ಸೊನ್ನೆಯಾಗಿ.

"ಈ ಮರದ ಹಣ್ಣು ತಿಂದಿದ್ದೀರಾ?" ಅವರು ಒಕ್ಕೊರಲಿನಿಂದ ಇಲ್ಲವೆಂದರು. "ಯಾಕೆ?" ಅದು ಪ್ರಶ್ನಿಸಲು–"ಒಡೆಯನ ಆಜ್ಞೆ–ಈ ಮರದ ಬಳಿ ಸುಳಿಯ ಕೂಡದು–ಅದರ ಹಣ್ಣು ತಿನ್ನಕೂಡದು" ಉತ್ತರ ಬಂದಿತು.

ಸೈತಾನ ಸರ್ಪ ನಕ್ಕು ಹೇಳಿತು—"ಈ ಮರದ ಹಣ್ಣಿನಷ್ಟು ರುಚಿ ಇನ್ನೊಂದಿಲ್ಲ. ನೀವೊಪ್ಪುವ ಆ ಒಡೆಯ ನಿಮ್ಮಿಬ್ಬರನ್ನು ಇದರಿಂದ ವಂಚಿತರನ್ನಾಗಿಸಿದ್ದಾನೆ—ನಿಮ್ಮನ್ನು ಅಂಧಃಕಾರದಲ್ಲಿಟ್ಟಿದ್ದಾನೆ—ತಿಂದು ನೋಡಿ. ಆತನಿಗೆ ತಿಳಿಯುವುದಿಲ್ಲ—ನನ್ನ ನಂಬಿ—ಆತ ನೋಡುತ್ತಿಲ್ಲ ನಿಮ್ಮನ್ನು. ನೀವು ತಿಂದಲ್ಲಿ ಈ ಹಣ್ಣನ್ನು-ಜ್ಞಾನೋದಯವಾಗುತ್ತದೆ."

ಸೈತಾನಸರ್ಪನ ಮರಳುಗೊಳಿಸುವ ಮಾತಿಗೆ ಮನಸೋತ ಸ್ತ್ರೀ ಆ ಹಣ್ಣು ಪಡೆದು ತಿನ್ನುತ್ತಾಳೆ. ಮಿಕ್ಕ ಅರ್ಧ ಹಣ್ಣನ್ನು ಪುರುಷನಿಗೆ ಕೊಡುತ್ತಾಳೆ. ಪುರುಷ ದಿಕ್ಕೆಟ್ಟು ಒಮ್ಮೆ ಹಣ್ಣನ್ನು ನೋಡುತ್ತಾ, ಇನ್ನೊಮ್ಮೆ ಸ್ತ್ರೀಯ ಮಂದಹಾಸ ದಿಟ್ಟಿಸಿ—ದ್ವಂದ್ವದಲ್ಲಿ—ಒಮ್ಮೆ ಸೈತಾನ—ಸರ್ಪದ ಕಡೆ, ಮಗದೊಮ್ಮೆ ಸುತ್ತಮುತ್ತ ನೋಡುತ್ತಾ ನಡಗುತ್ತಾ ಒಂದೇ ಸಮನೆ ಕಚ್ಚಿ ಕಚ್ಚಿ ತಿನ್ನುತ್ತಾನೆ—ಹೆಣ್ಣು ಬಿಟ್ಟ—ಮಿಕ್ಕ ಹಣ್ಣು ಸಿಪ್ಪೆ ಸಮೇತ—ಬೀಜ ಕೂಡ ಬಿಡದೇ ನುಂಗುತ್ತಾನೆ.

ಒಡೆಯನ ಆಜ್ಞೆ ಮೀರಿ—

— ದುರಾಸೆಗೆ ಬಲಿ –

## ಭಾಗ–4

ಒಡೆಯನ ಕರೆ ಬಂತು. ಹಿಂಜರಿದರು ಇವರು. ಪುನಃ ಪುನಃ ಕರೆದ ಆತ. ಸೊಂಟಕ್ಕೆ ಎಲೆಗಳ ಸುತ್ತಿ ಮರದ ಬದಿ—ಮರೆಯಲ್ಲಿ ಬಂದು ನಿಂತರು—ನಾಚುತ್ತಾ ಇವರು.

ಆತ ಕೇಳಿದ—"ನಾ ಕರೆದೆ—ಕರೆ ಕೇಳಿಸಲಿಲ್ಲವೆ ?" ಇವರು ತಲೆ ತಗ್ಗಿಸಿ ನಿಂತರು—ನಾಚಿದರು—ಮುದುಡಿದರು.

ಆತ –ಸರ್ವಾಂತರ್ಯಾಮಿ—ಊಹಿಸಿದ—ನಡೆದ ಘಟನೆ. "ನನ್ನ ಆಜ್ಞೆ ಮೀರಿ ನೀವು ತಿಂದಿದ್ದೀರಾ ಆ ಮರದ ಹಣ್ಣು—ನನ್ನ ಎಚ್ಚರಿಕೆ ತಳ್ಳಿ ಹಾಕಿ ? ಆ ಸೈತಾನ—ಸರ್ಪದ ಮಾತು ನಂಬಿದಿರಿ—ಮರುಳಾದಿರಿ ಅಲ್ಲವೆ ?"

ಇವರು ಹೌದೆಂದರು. ಪರಮಸತ್ಯ ಎದುರಿಗಿರುವಾಗ ಇವರಲ್ಲಿ ನಾಚಿಕೆ ಹುಟ್ಟಿಕೊಂಡಿತ್ತು. ಬೇಧಗಳು—ಬೇಧಭಾವನೆಗಳು ನಿಸರ್ಗದ ಎರಡು ಪ್ರತ್ಯೇಕ ಅಂಗಗಳೆಂದು ಬತ್ತಲೆಯಾಗಿದ್ದ ಅವರನ್ನು ಸುತ್ತಿಕೊಂಡಿತ್ತು, ನಖಶಿಖಾಂತ ನಾಚಿಕೆಯು.

ಆತ ಶಾಂತಚಿತ್ತನಾಗಿದ್ದ. ಒಮ್ಮೆಲೆ ಎದ್ದುನಿಂತ. ಆದೇಶಿಸಿದ— "ಹೋಗಿ—ಭೂಮಿಗೆ ಹೋಗಿ ಅನುಭವಿಸಿ, ನೀವು ಮಾಡಿದ ಪಾಪ—ತಪ್ಪಿಗೆ—ನನ್ನ ಆಣತಿ ಮೀರಿದ್ದಕ್ಕೆ—ಇಗೋ ಅನುಭವಿಸಿ ಅದರ ಫಲಾನುಫಲ. ಎಲೈ ಸ್ತ್ರೀಯೇ, ನೀ ಆ ಹಣ್ಣು ಮೊದಲು ತಿಂದು ಈ ನನ್ನ ಪುರುಷನಿಗೆ ಕೊಟ್ಟಿರುವಿ. ಲಾಲಸೆ—ದುರಾಸೆಗೆ ಸೋತವಳು

ನೀನು ಅನುಭವಿಸು ನೋವು." ಮೊದಲು–ನಾಲ್ಕು ಮಕ್ಕಳ ಹೆತ್ತು–ಹೊತ್ತು. ಆ ನೋವು ಮತ್ತು ನಿನ್ನ ಆಸೆ–ಆಕಾಂಕ್ಷೆ ಎಲ್ಲವೂ ಈ ನನ್ನ–ಈಗ ನಿನ್ನ ಪುರುಷನಿಗೆ ಸೇರಿದ್ದು. ಅವನು ಅಧಿಕಾರ ನಡೆಸುತ್ತಾನೆ, ನಿನ್ನ ಮೇಲೆ....ಹೋಗಿ....ಹೋಗಿ ಭೂಮಿಗೆ ; ಬೆವರು ಸುರಿಸಿ–ಆಗ ರೊಟ್ಟಿ ನಿಮಗೆ ಸಿಗುವುದು–ಎಲ್ಲಿಯವರೆಗೆ ಅಂದರೆ–ನೀವು ಮಣ್ಣಿನಿಂದಾದ ಜೀವಗಳು–ಮಣ್ಣಾಗುವವರೆಗೆ ಮಣ್ಣಾದ ಮೇಲೆ ನನ್ನ ಬಳಿ ಹಿಂದಿರುಗುವಿರಿ.

ಒಡೆಯನ ಆಜ್ಞೆಗೆ ತಲೆ ಬಾಗಿದರು ಅವರು.

ಭೂಮಿ ಸ್ಪರ್ಶದ ಮೊದಲ ಮೂಲ ಮಾನವರು.

ಗಂಡು–ಹೆಣ್ಣು ; ಪ್ರಕೃತಿ–ಪುರುಷ ಒಂದಾದರು.

ಕಾಲದ ಗತಿಗೆ ಸರಿಯುತ್ತಿದ್ದವು–ಹಗಲು–ರಾತ್ರಿಗಳು.

ಕಾಲದ ನಿಯಮಕ್ಕೆ–ಹುಟ್ಟಿದವು ನಾಲ್ಕು ಸಂತಾನ–ಗಂಡೆರಡು, ಹೆಣ್ಣೆರಡು.

— ಮೋಹ — ವ್ಯಾಮೋಹದ ಫಲ —

## ಭಾಗ–5

ಕಾಲದ ನಿಯಮ–ಒಡೆಯನ ಸೃಷ್ಟಿ–ಹಗಲಿನಲ್ಲಿ ಹುಟ್ಟಿದವು ಗಂಡು ಹೆಣ್ಣು. ರಾತ್ರಿಯಲ್ಲಿ ಅವಳಿಗೆ ಇನ್ನೊಂದು ಹೆರಿಗೆ. ಜನಿಸಿದವು ಗಂಡು–ಹೆಣ್ಣು.

ಹಗಲು ಹುಟ್ಟಿದ ಗಂಡು ಅಣ್ಣ. ರಾತ್ರಿಯ ಗಂಡು ತಮ್ಮ. ಹಾಗೆಯೇ ಹಗಲಿನ ಹೆಣ್ಣಿಗೆ ರಾತ್ರಿಯ ಹೆಣ್ಣು ತಂಗಿ.

ಹಗಲಿನ ಹೆಣ್ಣು ಅನುಪಮ ಸುಂದರಿ, ಬಯಸಿದ ಅವಳನ್ನು ಹಗಲಿನ ಗಂಡು.

ಆದರೆ ಒಡೆಯನ ಆಜ್ಞೆ–ಆದೇಶ–ನಿಯಮ–ಹಗಲಿನ ಗಂಡು ಕತ್ತಲಿನ ಹೆಣ್ಣನ್ನು ವರಿಸಬೇಕು. ರಾತ್ರಿಯ ಗಂಡು ಹಗಲಿನ ಹೆಣ್ಣಿಗೆ ಪತಿ.

ಹಿರಿಯನ ಆಸೆ ನೆರವೇರಲಿಲ್ಲ.

ಪ್ರೀತಿಗೆ ಅಡ್ಡಿ–ಮೋಹಕ್ಕೆ ತಡೆ–ಆಸೆಗೆ ಅಡೆತಡೆ.

o o o o

ಹೊಲ ಉಳುತ್ತಿದ್ದ ಅಣ್ಣ. ಮೇಕೆ ಕಾಯುವ ಕಾಯಕ ತಮ್ಮನಿಗೆ.

ಒಂದು ದಿನ–ಮೊದಲ ಪುರುಷ–ತಂದೆಗೆ ಕಾಣಿಕೆಯೊಂದು ಅರ್ಪಿಸುವ ಆಸೆ ಮಕ್ಕಳಿಗೆ–ಅಣ್ಣ ತಮ್ಮರಿಗೆ.

ತಮ್ಮ ಮೊದಲು ಮೇಕೆ ಹಾಲು ಮತ್ತು ಆಡಿನ ಚರ್ಮ ಕಾಣಿಕೆಯಾಗಿ ಕೊಡುತ್ತಾನೆ–ತಂದೆಗೆ, ಆತನ ಪ್ರಸನ್ನತೆಗೆ ಕೃತಾರ್ಥನಾಗುತ್ತಾನೆ.

ತಡವಾಗಿ ಬಂದ ಅಣ್ಣ–ತಾ ತಂದ ಕಾಣಿಕೆ ಮರಳಿ ಎತ್ತಿಕೊಳ್ಳುತ್ತಾನೆ–ತಂದೆ

ಅದನ್ನು ನಿರಾಕರಿಸಿದ್ದಕ್ಕೆ, ಸಿಟ್ಟಿನಿಂದ ಕೆಂಡವಾದ ಅಣ್ಣ ಗುರುಗುಟ್ಟುತ್ತಾನೆ–ತಮ್ಮ ಬೀಗುತ್ತಿರುವಾಗ.

ಬಯಸಿದ ಹೆಣ್ಣು ಸಿಕ್ಕಿಲ್ಲದ ಹತಾಶೆ–ಪ್ರೀತಿಯ ಕಾಣಿಕೆ ನಿರಾಕರಿಸಲ್ಪಟ್ಟ ನಿರಾಶೆ–ತಿರುಗುತ್ತದೆ ದ್ವೇಷಕ್ಕೆ.

— ಅಸೂಯೆ — ರೋಷಕ್ಕೆ ಕಾರಣ ದಾರಿ —

## ಭಾಗ–6

ಸಮಯ ಸಾಧಿಸಿದ ಅಣ್ಣ–ಒಂದು ದಿನ–ಕಲ್ಲಿಂದ ಜಜ್ಜಿ ಜಜ್ಜಿ, ಕತ್ತಿಯಿಂದ ತುಂಡು–ತುಂಡಾಗಿ–ಕೊಲ್ಲುತ್ತಾನೆ ತಮ್ಮನನ್ನು.

ಸತ್ತು ಬಿದ್ದ ತಮ್ಮನನ್ನು ದುರುಗುಟ್ಟಿ ನೋಡುತ್ತಾ ಕೂತವನಿಗೆ ಸಮಯ ಸರಿದಂತೆ ಹಣೆಯ ಸ್ಥಾನವನ್ನು ಹೆದರಿಕೆ ಕಿತ್ತುಕೊಳ್ಳುತ್ತದೆ, ಮನೆಯ ನೆನಪಾದಾಗ–ತಂದೆಯ ಎದುರು ಹೋಗಲು–ತಾಯಿಗೆ ಮುಖ ತೋರಿಸಲು.

ಕಂಗೆಟ್ಟ ತಲೆಗೆ ಕೈಯಿಟ್ಟು ಕೂತಾಗ–ಪಕ್ಕದಲ್ಲಿ, ಸತ್ತು ಬಿದ್ದ ಕಾಗೆಯೊಂದು ಕಣ್ಣು ತುಂಬುತ್ತದೆ. ಎಲ್ಲಿಂದಲೋ ಹಾರಿ ಬಂದ ಇನ್ನೊಂದ ಕಾಗೆ ನೆಲ ಕೆರೆಯುತ್ತದೆ, ಕಾಲಿನಿಂದ. ಮಣ್ಣು ಗುಡ್ಡೆಯಾದಾಗ ಕೆರೆದು ತೋಡಿದ ಹೊಂಡದಲ್ಲಿ ದೂಡುತ್ತದೆ ಸತ್ತ ಕಾಗೆಯನ್ನು–ಕಾಲುಗಳಿಗೆ ಬಲ ತಂದು–ಮಣ್ಣು ಮುಚ್ಚಿ. ತನ್ನ ಜೊತೆಗಾರರ ಗುಂಪಿಗೆ ಸೇರಲು ಕರೆಯುತ್ತಾ–ಕೂಗುತ್ತಾ–ರೆಕ್ಕೆ ಬಡಿದು–ಕೇಕೆ ಹಾಕಿ ಹಾರಿ ಹೋಗುತ್ತದೆ–ನೋಡುತ್ತಿರುತ್ತಾನೆ, ಅಣ್ಣ–ಮನ ತುಂಬುತ್ತದೆ.

ಮಿಂಚಿನಂತೆ–ಏನೋ ಹೊಳೆದವನಂತೆ ಎದ್ದು–ಜಿಗಿದು–ಕೈಹಾಕುತ್ತಾನೆ ಗುದ್ದಲಿ–ಪಿಕಾಸಿಗೆ, ಹೊಂಡ ತೋಡಿ ತಮ್ಮನ ಶವ ಹೂಳಿ ನೆಲ ಸವರುತ್ತಾನೆ–ಕಾಗೆಯ ಗೋರಿಯ ಪಕ್ಕದಲ್ಲಿ.

ರಾತ್ರಿಯಾದರೂ ಬರದಿರಲು ಚಿಕ್ಕ ಮಗ, ಕೇಳುತ್ತಾನೆ ದೊಡ್ಡವನಿಗೆ ತಂದೆ–"ಎಲ್ಲಿ ನಿನ್ನ ತಮ್ಮ ?"

"ಯಾಕೆ ಎಲ್ಲೋ ಕಳೆದಿರಬೇಕು–ಹುಡುಕುತ್ತಿರಬೇಕು–ಬರಬಹುದು, ನಸುಕು ಹರಿಯುವ ಮುನ್ನ"

ಮುಂಜಾನೆ ಅದೇ ಪ್ರಶ್ನೆಗೆ ಅದೇ ಉತ್ತರ.

ಕ್ಷಣ ಕ್ಷಣಕ್ಕೂ ಆತಂಕ ತಂದೆಗೆ, ತಾಯಿಗೆ, ತಮ್ಮನ ಮಡದಿಗೆ.

ಅಳುಕು ಅಂತರಂಗ ಕೊರೆಯುತ್ತಾ ಅಣ್ಣನಿಗೆ.

ತನ್ನನ್ನು ತಾನು ಸಮರ್ಥಿಸಿಕೊಳ್ಳಲು, ಸಾಚಾತನ ತೋರಿಸಿಕೊಳ್ಳಲು–ಹುಡುಕು[ತ್ತಾನೆ] ತ್ತಾನೆ ಅಣ್ಣ–ಹೊಸ ಹೊಸ–ಹಸಿ ಹಸಿ ಸುಳ್ಳು–ಸುಳ್ಳಿನ ಮಾಲೆ ಕಟ್ಟುತ್ತಾನೆ.

—ಹಣೆಗೆ–ಹೆದರಿಕೆಗೆ–ಸುಳ್ಳಿನ ಹುಟ್ಟು—

## ಭಾಗ–7

ಕಾಲಚಕ್ರ ಉರುಳಿತು–ತಡೆಯಿಲ್ಲದೆ.

––ವಿಕಾರ, ಅಹಂ, ಶೋಷಣೆ, ದುರಾಸೆ, ಕಾಮ, ವ್ಯಾಮೋಹ, ಈರ್ಷೆ, ಸಿಟ್ಟು, ಸುಳ್ಳು–ಇತ್ಯಾದಿಗಳು ಮೈಯಾದವು ಮನುಷ್ಯರಿಗೆ–

––ಅಸ್ತಿತ್ವ–ಪೈಪೋಟಿ–ಜಾತಿಗಳಾದವು–

––ದೋಷಾರೋಪಗಳು ವರ್ಗಗಳಾದವು–ಬಳುವಳಿ, ನಂಬಿಕೆಗಳು, ಧರ್ಮಗಳಾದವು–

ಒಡೆಯ ಕಣ್ಣು ಮುಚ್ಚಿ ಕೂತಿದ್ದಾನೆ.

ಪ್ರಥಮ ಪುರುಷ ರೋಧಿಸುತ್ತಿದ್ದಾನೆ–ಹುಡುಕುತ್ತಿದ್ದಾನೆ. ಕಣ್ಣೀರು ಒರೆಸಲು–ತನ್ನ ಶರೀರದ ಅಂಗ–ಅರ್ಧಾಂಗಿನಿ ಸ್ತ್ರೀಯನ್ನು–ತನ್ನ ಜೊತೆಗಾರ್ತಿಯನ್ನು–ಕೋಟಿ ಕೋಟಿ ಸ್ತ್ರೀಯರ ಮುಖಗಳ–ಹೆಜ್ಜೆಗಳ–ಮಧ್ಯೆ.

●

## ಸ್ಥಿತಿ–ಗತಿ

ಹನಿಗೆ ಚೆಲ್ಲಿದ ಬೀಜಗಳು
ಬಾಡಿಹೋದವು ಒಣಗಿ ಸತ್ವವಿಲ್ಲದೆ.
ಮಳೆಬಿದ್ದರೂ ಚಿಗುರೊಡೆಯಲಿಲ್ಲ.
ಹಸಿರು ಕಂಡ ಕೆಲವು
ಮಲಗಿದವು ಪೀಚು ತೆನೆಗಳ ಹೊರಗೆ.
ಹೆಸರಿಗೆ ಸುಗ್ಗಿ ; ಬಾಚಿದ್ದು ಧೂಳು ಮಾತ್ರ.
ಬೈಗು ಬೇಗಬಂದು ಮುಂಜಾನೆ ತಡವಾಗಿ
ನಾಗಂದಿಗೆಯ ಸರಕುಗಳು ಸುಂಕ ಕಂಡವು.
ತಪ್ಪೆಯಿಕ್ಕದ ಜಾನುವಾರಗಳು ಮನೆ ಮರೆತವು.
ಜಠರದ ಆಮ್ಲಕ್ಕೆ ನಲಿವು ;
ಸಮುದ್ರದಂತೆ ಉಕ್ಕಿ ಹರಿದು
ಹುಣ್ಣು ಹಣ್ಣು ಮಾಡಿ ಕೊರೆವ ತವಕ.
ಕೆಲಸವಿಲ್ಲದ ಕರುಳುಗಳು ಸುಮ್ಮನೆ

---

ಡಾ॥ ಕೆ.ಎಸ್. ಗಂಗಾಧರ ಎಂ.ಬಿ.ಬಿ.ಎಸ್., ಕಾಂತರಾಜಪುರ, ಹಾಸನ ಜಿಲ್ಲೆ,
ಚನ್ನರಾಯಪಟ್ಟಣ ತಾಲ್ಲೂಕು, ಪಿನ್ : 573159

ಓಡಾಡುತ್ತವೆ ಅತ್ತಿಂದಿತ್ತ—ಸೋಂಕು ತಟ್ಟಿಸಿಕೊಳ್ಳಲು.
ಸತ್ತು ಹೋಗಿವೆ ತಾಪಕ್ಕೆ ಸ್ರೋತ ತೊಗಲು ಗ್ರಂಥಿಗಳು
ಶೇಖರಿಸಿದ ಜೀವಸತ್ವಗಳ ಸ್ರವಿಸಿದ
ಎಲುಬು—ಯಕೃತ್ತುಗಳು ಈಗ ಪರದೇಶಿಗಳು.
ಕ್ಷಯ ಬಡಿದ ವೃಷಣಗಳು.
ವಿಲೋಮವಾದ ರೇತಸ್ಸಿನ ಗಾತ್ರ—ಪ್ರಭಾವಗಳು-
ಬಿಳಿಚಿದ ದೇಹಗಳು ನಿಶ್ಯಕ್ತಿಯ ಬಿಳಿಲುಗಳು.

ಇತ್ಯಾದಿ ಇತ್ಯಾದಿ ನಿತ್ಯದ ಗೋಜಲುಗಳು.
ಚರಿತ್ರಕಾರರು ಜಾಣತನದಲಿ ಮರೆತ
ಹೆಂಡದಂಗಡಿಯಲ್ಲಿ ಸತ್ಯವಾಗಿ ಕಾವ್ಯವಾಗಿ
ಹರಿಯುವ ಸಾರ್ವಕಾಲಿಕ ಸಂಕಷ್ಟಗಳು.
ಸಂಕ್ರಮಣ ತಲುಪದ
ಮತ್ತೇರಿದ ಚಿತ್ತಗಳ ಮತ್ತಿಳಿಸಿದ
ಗಗನಚುಂಬಿಯ ಬೊಜ್ಜುದೇಹಗಳ
ಭಾವಕಲಕದ ದುರ್ಬಲ ಬರ್ಬರತೆಗಳು.

—ಡಾ|| ಕೆ.ಎಸ್. ಗಂಗಾಧ

## ಅನವಕಾಶ

ಓದಿದ ನಗೆ ಹನಿ :
"ನಿನ್ನ ವಯಸ್ಸಿನಲಿ ಗಾಂಧಿ
ಆಫ್ರಿಕಾದಲ್ಲಿ ಲಾಯರ್ ಓದುತ್ತಿದ್ದರು ;
ನೀನೂ ಇದ್ದೀಯ...."
ಅಪ್ಪ ಗದರಿಸಿದ ಮಗನ ಮೇಲೆ ಕೆಕ್ಕರಿಸುತ್ತಾ,
"ನಿನ್ನ ವಯಸ್ಸಿನಷ್ಟರಲಿ
ಅವರಾಗಲೇ ಮಹಾತ್ಮರಾಗಿದ್ದರು ;
ಆದರೆ ನೀನು...."
ತಣ್ಣಗೆ ನುಡಿದ ಮಗ ಪ್ರಪಾತಕ್ಕೆ ತಳ್ಳಿದಂತೆ.

---

ಟಿ.ಎಂ. ಷಡಕ್ಷರಿ, ಒಳರೋಗಿಗಳ ವಿಭಾಗ, ಜನರಲ್ ಆಸ್ಪತ್ರೆ, ತಿಪಟೂರು-572202

ಹೌದು ; ನಾನು ನಾನೇ
ಒಬ್ಬನ ಬದುಕು ಮತ್ತೊಬ್ಬನ ಪ್ರತಿಕೃತಿಯಲ್ಲ.
ಅನುಕರಣೆ ಮಾತ್ರದಲೇ
ಒಳಗಿನ ಮೊಳಕೆ ಚಿಗುರುವುದಿಲ್ಲ.
ಬೀಜಕ್ಕೆ ಬೇಕು : ಫಲವತ್ತಾದ ನೆಲ
ಬಲಿವವರೆಗೂ ರಕ್ಷಣೆಯ ಛಲ.

ಇಂಥ ಮರುಧರೆಯಲ್ಲಿ
ಹುಡುಕುವುದೆಂತು ತಂಪುನೆಲವ
ಹಾಗೇನಾದರೂ ಸಿಕ್ಕಿ, ಚಿಗುರು ಕತ್ತೆತ್ತಿದರೆ
ದನ–ಕುರಿಗಳ ಹಾವಳಿ, ನೆಕ್ಕ್ಯಾವು ಬುಡಸಹಿತ
ಆದರೂ ಒಳಗಿನ ಛಲ ಪುಟಿದರೆ
ಬೆಳೆಯ ಬಹುದು ಒಂದಿಷ್ಟು ಕುರುಚಲಾಗಿ ಮಾತ್ರ.

ಸುತ್ತೆಲ್ಲಾ ಹಸನಾಗಿ
ಒಳಗಿನುಮ್ಮಸ್ಸಿಗೆ ಕುಮ್ಮಕ್ಕಿರದಿದ್ದರೆ
ಎಂಥ ಬೀಜದ ಕನಸೂ ಅರಳುವುದಿಲ್ಲ ;
ಭ್ರಾಂತಿಯ ಬಡಬಡಿಕೆಗೆ ಅರ್ಥವಿಲ್ಲ.

—ಟಿ.ಎಂ. ಷಡಕ್ಷರಿ

## ನಿಶವಂತರು

ಬೆಳಗಿನಿಂದ ಕುಡಿದದ್ದೆ ಹೆಂಡ
ನಾನೂನು ರಾಮಭಕ್ತ !
ನಿನಗೊಂದು ಸೀಸೆ, ನನಗೊಂದು ಸೀಸೆ
ತಾ, ತಕೊ ತಂಪುರಕ್ತ !

ಹೊಸವೆಂಬರಿದ್ದ ಗುರುತಿಲ್ಲದವನು
ಅವನಜ್ಜ ತಲೆಯ ಹೊಡೆದ....
ಹಳಸಿತ್ತು ರಕ್ತ, ಸರಿ ಬೇಡ ಅಂತ
ತಂದಿರುವೆ ತಲೆಯ ಮಾಂಸ !

ಸಾಸಾ ರಾಮಮೂರ್ತಿ, 24, ಗವಿಪುರ, ಎ.ಕೆ. ಕಾಲೋನಿ, ಬೆಂಗಳೂರು-560019

ನಿನಗೊಂದು ಕೈಯ್ಯಿ, ನನಗೊಂದು ಕೈಯ್ಯಿ
ತರಬಾರದಿತ್ತೆ ಬೋಟಿ ?
ಒಣಗಿತ್ತು ಕರುಳು ಇದು ಬೇಕೆ ಹೇಳು
ತರಲೇನು ಎರಡು ಕಾಲು ?

ಕಾಲೀಗ ಬೇಡ,
ಚಾರ್ವಿನರ್ ಹಚ್ಚು ;
ಇದನೆತ್ತು ಮುಗಿಸು ಮೊದಲು.
ಎಸೆಯುಬೇಡ ಅದು ಚಿಗುರು ಮೂಳೆ
ಆ ಕಣ್ಣನಿಚುಕಿ ತಿನ್ನು.

ಇದು ಎಂತ ಕಾಲ
ಇದು ಎಂತ ಜಾಲ
ತಲೆಹೊಡೆದು ಬದುಕುತಿರುವ....
ನಿಶದ ಮಾತು ನಿಜವಂತೆ–
ಹೌದೆ ?
ಮನುಷ್ಯನ್ನ ಮನುಷ್ಯ ತಿನುವ....

—ಸಾಸಾ ರಾಮಮೂರ್ತಿ

## ಹೇಗೆ ಹುಡುಕಲಿ....?

ಹೇಗೆ ಹುಡುಕಲಿ ಎಲ್ಲಿ ಹುಡುಕಲಿ
ಅರಳು ಮೊಗ್ಗಿಗೆ
ಗಂಧ ತುಂಬಿದ ನಿನ್ನ ?

ನಿನ್ನ ಕನಸಿನ ತೋಟದಲಿ
ನಾನು, ಆಗಾಗ ಸುಳಿದಿರಬಹುದು
ಅಲ್ಲಿ ಬಿಟ್ಟ ಹೂವುಗಳನ್ನು

ಲತಾ ರಾಜಶೇಖರ್, ನಂ. 756, ಆಶಿರ್ವಾದ್, 4ನೇ ಸ್ಟೇಜ್, ಟಿ.ಕೆ. ಲೇಔಟ್, ಕುವೆಂಪುನಗ
ಮೈಸೂರು–570023

ಬಿಡಿಸಿ ಮುಡಿಗೆ ಇಟ್ಟಿರಬಹುದು
ತಂಬೆಲರ ಹಾಡಿಗೆ
ಕೊರಳು ಸೇರಿಸಿರಬಹುದು
ಸರಿಯೆ.

ನಾನಾದರೊ, ಕಾವ್ಯ ದೀವಿಗೆಯು
ಕೈಯಲ್ಲಿ ಹಿಡಿದು
ಅಲೆಯುತ್ತಿರುವೆ ಅರಸಿ ನಿನ್ನನ್ನು
ಅಳಿದು ಹೋಗಿರುವ
ಹೆಜ್ಜೆಗಳ ಜಾಡನ್ನು ಹುಡುಕುತ್ತ
ಕಳೆದು ಹೋದ
ಕಾಲದ ಕತ್ತಲ ಓಣಿಗಳಲ್ಲಿ.

—ಲತಾರಾಜಶೇಖರ್

ಮಾನವಲೋಕದ ಪ್ರತಿಯೊಂದು ಜೀವಿಯಲ್ಲೂ ಅನುಕಂಪ, ಪ್ರೇಮ ಹುಟ್ಟದವರೆಗೆ ನಮಗೆ ನೀತಿನಿಯಮ ಅರ್ಥವಾಯಿತೆನ್ನಲಾಗದು. ಅತ್ಯುನ್ನತ ನೀತಿ ವಿಶ್ವವ್ಯಾಪಿ, ವಿಶ್ವತೋಮುಖಿ. ಜಗತ್ತಿನಲ್ಲಿರುವ ಪ್ರತಿಯೊಬ್ಬ ಜೀವಿಗೂ ನಮ್ಮಿಂದ ಸೇವೆ ಪಡೆವ ಹಕ್ಕಿದೆಯೆಂದು ನೆನಪಿಟ್ಟು ಶಕ್ಯವಿದ್ದ ರೀತಿಯಲ್ಲೆಲ್ಲ ಶ್ರದ್ಧಾಪೂರ್ವಕ ಲೋಕಸೇವೆ ಮಾಡಬೇಕು.

—ಗಾಂಧೀಜಿ

# ದೊರೆ ಈಡಿಪಸ್ ಮತ್ತು ಅಂತಿಗೊನೆ

— ಪಿ. ಲಂಕೇಶ್

೧

ಈಗಾಗಲೇ ಗ್ರೀಕ್ ನಾಟಕಗಳ ಬಗ್ಗೆ ಕನ್ನಡದಲ್ಲಿ ಬಿ.ಎಂ. ಶ್ರೀ, ಕ.ವೆಂ. ರಾಘವ ಚಾರ್ಯ ಅವರು ಸಾಕಷ್ಟು ವಿಸ್ತಾರವಾಗಿ ಮತ್ತು ಉಪಯುಕ್ತವಾಗಿ ಬರೆದಿರುವುದ ರಿಂದ ಈ ಎರಡು ನಾಟಕಗಳಲ್ಲಿ ನಿರ್ದೇಶಕರು ಗಮನಿಸಬೇಕೆಂದು ನಾನು ಬಯಸುವ ಕೆಲವು ಅಂಶಗಳನ್ನು ಮಾತ್ರ ಕಾಣಿಸುತ್ತೇನೆ; ಥೀಬ್ಸ್ ಪುರಾಣ ಈ ನಾಟಕಗಳ ಅಭ್ಯಾ ಸಕ್ಕೆ ಉಪಯುಕ್ತವೆಂದು ಸಂಕ್ಷಿಪ್ತವಾಗಿ 'ಮುನ್ನುಡಿ'ಯಾದ ಮೇಲೆ ಕೊಟ್ಟಿದೆ.

'ದೊರೆ ಈಡಿಪಸ್' ನನ್ನ ಪ್ರಕಾರ ವಿನ್ಯಾಸ ಮತ್ತು ನಾಟಕತ್ವದ ದೃಷ್ಟಿಯಿಂದ ಜಗತ್ತಿನ ಅತ್ಯುತ್ತಮ ನಾಟಕ. ಎಲ್ಲ ದೃಷ್ಟಿಯಿಂದ ಅತ್ಯುತ್ತಮ ಎಂದು ಅರಿಸ್ಟಾಟಲ್ ಕೂಡ ಹೇಳಿರುವುದನ್ನು ಪಾಶ್ಚಿಮಾತ್ಯ ರಂಗಭೂಮಿ ಬಲ್ಲವರಿಗೆ ಜ್ಞಾಪಿಸಬೇಕಿಲ್ಲ. ಆದರೆ ಶೇಕ್ಸ್‌ಪಿಯರ್ ಸಾಧಿಸಿದ ದಿಗ್ವಿಜಯ ಅರಿಸ್ಟಾಟಲ್‌ಗೆ ಗೊತ್ತಿರಲು ಸಾಧ್ಯವಿರ ಲಿಲ್ಲವಾದ್ದರಿಂದ ನಾವು ಆತನನ್ನೂ ಸೇರಿಸಿಕೊಂಡು ಹೇಳುವಾಗ ಶೇಕ್ಸ್‌ಪಿಯರ್ ಮತ್ತು ಸಾಫೋಕ್ಲಿಸ್ ನಡುವಿನ ಕೆಲವು ವ್ಯತ್ಯಾಸಗಳನ್ನು ಗುರುತಿಸಬೇಕಾಗುತ್ತದೆ.

ರಂಗವನ್ನು ಮತ್ತು ಪಾತ್ರಗಳನ್ನು ಬದುಕಿಗೆ ಹತ್ತಿರ ತರುತ್ತಲೇ ಅವಕ್ಕೆ ನಿಲುಕ ಬಲ್ಲಷ್ಟೂ ಅರ್ಥವನ್ನೂ ಕನಸನ್ನೂ ದಕ್ಕಿಸಿದ ಶೇಕ್ಸ್‌ಪಿಯರಿಗೆ ಸಮಾನನಾದ ನಾಟಕಕಾರ ಜಗತ್ತಿನಲ್ಲಿಯೇ ಇರಲಾರ; ಮೂರು ಐಕ್ಯಗಳನ್ನು ತೊರೆದು ಮುಖ್ಯವಾಗಿ ದೊರೆಗಳು ಮತ್ತು ಅವರಂಥವರ ಬದುಕಿಗೆ ಮೀಸಲಾಗಿದ್ದ ನಾಟಕದಲ್ಲಿ ಹಲವಾರು ಬಗೆಯ, ಅಂತಸ್ತಿನ ಜನರನ್ನು ತಂದು, ವಿವಿಧ ಬಗೆಯ ಮನಃಸ್ಥಿತಿಗಳನ್ನು ಮಂಡಿಸಿ, ಸಾಮಾ ಜಿಕ, ಧಾರ್ಮಿಕ, ವೈಯಕ್ತಿಕ ಎಲ್ಲವನ್ನೂ ಒಟ್ಟಿಗೇ ಹೇಳಬಲ್ಲ, ಅತ್ಯಂತ ಆತ್ಮೀಯ ವಾಗಿಯೂ ಅತ್ಯಂತ ಸಾರ್ವಜನಿಕವಾಗಿಯೂ ಬರೆಯಬಲ್ಲ ಶೇಕ್ಸ್‌ಪಿಯರ್ ಒಂದು ದೊಡ್ಡ ಪವಾಡ. ಆದರೆ ನಾವು ಶೇಕ್ಸ್‌ಪಿಯರನ ಅನನ್ಯತೆ ಗಮನಿಸುವಾಗ ಸಾಫೋ ಕ್ಲಿಸ್ ಮತ್ತು ಅವನಂಥ ಕವಿಗಳನ್ನು ಮರೆಯುವಂತಿಲ್ಲ. ಶೇಕ್ಸ್‌ಪಿಯರ್ ಬ್ರಹ್ಮನ ಸೃಷ್ಟಿಯಲ್ಲಿ ನಡೆದಾಡುವಾಗ ಸಿಕ್ಕುವ ಜೀವನೋತ್ಸಾಹಕ್ಕೆ, ಜೀವನಾನುಭವಕ್ಕೆ ಸಮ

---

**ಲಂಕೇಶ್‌ರವರ ಈ ಮುನ್ನುಡಿ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಅರ್ಥಪೂರ್ಣ ಎಂಬ ಕಾರಣಕ್ಕಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ. ಇದೇ ರೀತಿಯಲ್ಲಿ ಮುಂದೆ ಬೇರೆ ಬೇರೆ ಲೇಖಕರ ಮುನ್ನುಡಿಗಳನ್ನು ಪ್ರಕ ಟಿಸಲಾಗುವುದು.**

**—ಸಂ.**

---

ಪಿ. ಲಂಕೇಶ್, ಬಸವನಗುಡಿ, ಬೆಂಗಳೂರು-4

ನಾವ ಜೀವನ ಸ್ಪಷ್ಟತೆ ಸಿಕ್ಕುವುದಿಲ್ಲ. 'ಪ್ರಕೃತಿಗೆ ಕನ್ನಡಿ ಹಿಡಿಯುಲೆತ್ನಿಸುವ' ಶೇಕ್ಸ್ ಪಿಯರ್, ನಿಸರ್ಗದ ಹಾಗೆಯೇ, ತಾತ್ವಿಕವಾಗಿ ಅಸ್ಪಷ್ಟ: ಇದು ಬದುಕಿನ ಶಕ್ತಿಗಳಂತೆಯೇ. ಪದಾರ್ಥಗಳಂತೆಯೇ ಎಂದು ಹೇಳಿ ತಪ್ಪಿಸಿಕೊಳ್ಳಲಾಗುವುದಿಲ್ಲ. ಬೇರೆ ಮಾತಲ್ಲಿ ಹೇಳುವುದಾದರೆ, ತತ್ವಜ್ಞಾನದಿಂದ ಹೊರಡುವ ವಿಚಿತ್ರ ಸಂತೋಷ ಶೇಕ್ಸ್‌ಪಿಯರಲ್ಲಿ ಕಡಿಮೆ. ಶೇಕ್ಸ್‌ಪಿಯರಲ್ಲಿ ದೊರಕುವ ಸಂತೋಷದ ಬಹುಪಾಲು ನೋಡುವುದರಲ್ಲಿ, ತಿಳಿಯುವುದರಲ್ಲಿ ಇದೆಯೆಂದರೆ, ಸಾಫೋಕ್ಲಿಸ್ ನಾಟಕಗಳ ಸಂತೋಷ ಮುಖ್ಯವಾಗಿ ಬದುಕಿನ ಕ್ಲಿಷ್ಟತೆಯನ್ನು ಸ್ಪಷ್ಟಪಡಿಸುವುದರಲ್ಲಿ ಇದೆ. ಇನ್ನೊಂದು ಅರ್ಥದಲ್ಲಿ, ಒಂದು ಗೊತ್ತಾದ ಧಾರ್ಮಿಕ ಪರಿಸರದಲ್ಲಿ ಬರೆಯುವ ಸಾಫೋಕ್ಲಿಸ್‌ಗೆ ಸ್ಪಷ್ಟತೆ ಮತ್ತು ವಿನ್ಯಾಸಸೌಷ್ಟವ ಸಾಧ್ಯವಾಯಿತು; ಎಲ್ಲವನ್ನೂ ಹುಡುಕುತ್ತ ಸ್ಥಾಪಿಸಲೆಳಸುವ ಶೇಕ್ಸ್ ಪಿಯರ್ ಮೂಲಭೂತವಾಗಿ ರೊಮ್ಯಾಂಟಿಕ್ ಆಗಿದ್ದುಕೊಂಡು, ಒಂದು ಬಗೆಯ ಸಮಯ ಸ್ಫೂರ್ತಿಯನ್ನು ನೆಚ್ಚಿಕೊಂಡಿದ್ದು ಕ್ಲಾಸಿಕಲ್ ಸ್ಥಿತಿತದತ್ತ ಹೋರಾಡಬೇಕಾಯಿತು. ಆದ್ದರಿಂದಲೇ ಸಾಫೋಕ್ಲಿಸ್ ನಾಟಕಗಳ ಕಟ್ಟಡ ಮತ್ತು ಶೇಕ್ಸ್‌ಪಿಯರ್ ನಾಟಕಗಳ ತಹತಹ–ಎರಡೂ ಆಶ್ಚರ್ಯಕರ ಸಾಧನೆಗಳೆನಿಸುವುವು.

'ದೊರೆ ಈಡಿಪಸ್' ಹಲವು ಬಗೆಯಲ್ಲಿ ವಿಸ್ಮಯಕರ ಕೃತಿಯಾಗಿದೆ. ಮೊದಲನೆಯದಾಗಿ, ಈ ನಾಟಕದ ರಚನೆ. ಕೆಲವೇ ಗಂಟೆಗಳ ಘಟನೆಗಳನ್ನು ಇದು ನಮ್ಮ ಮುಂದಿಡುತ್ತದೆ. ನಾವು ನಾಟಕದೊಂದಿಗೆ ಮುಂದೆ ಹೋದಂತೆಲ್ಲ ಈಡಿಪಸ್‌ನ ಹಿಂದಿನ ವರ್ಷಗಳು ನಮ್ಮೆದುರು ಹಾಸಿಕೊಳ್ಳುತ್ತ ಹೋಗುತ್ತವೆ; ಆತನ ಅತ್ಯಂತ ರುದ್ರ ಗಳಿಗೆಗಳು ಅತ್ಯಂತ ಸ್ಪಷ್ಟ ಗಳಿಗೆಗಳಾಗುತ್ತ ಹೋಗುತ್ತವೆ. ಈ ವಿರೋಧಗಳನ್ನು ಗಮನಿಸಿದರೆ ಇಲ್ಲಿಯ ನಾಟಕತ್ವ ತಿಳಿಯುತ್ತದೆ. ಈಡಿಪಸ್ ರಾಜನಾದವನು; ಈತ ತನ್ನ ಅಸಂಖ್ಯ ಪ್ರಜೆಗಳೊಂದಿಗೆ ವ್ಯವಹರಿಸಬೇಕಾಗಿರುವಂತೆಯೇ ತನ್ನ ವೈಯಕ್ತಿಕ ಕಷ್ಟಗಳೊಂದಿಗೆ ಸೆಣಸಬೇಕಾಗಿದೆ; ಇದು ನಾಟಕದ ಧೋರಣೆಯ ವೈವಿಧ್ಯಕ್ಕೆ ಸಹಾಯ ಮಾಡುತ್ತದೆ. ಭಾಷಣ, ಸಂಭಾಷಣೆಯಿಂದ ಹಿಡಿದು ಅತ್ಯಂತ ಭಾವಗೀತಾತ್ಮಕ ವೈಯಕ್ತಿಕ ಅಭಿವ್ಯಕ್ತಿಯವರೆಗೆ ಈ ವೈವಿಧ್ಯ ಹಬ್ಬಿದೆ. ಸಹಸ್ರಾರು ಜನ ಪ್ರೇಕ್ಷಕರಿಗೆ, ಕುದುರೆಲಾಳದ ಆಕಾರದ ರಂಗಮಂದಿರದಲ್ಲಿ ಕೂರುತ್ತಿದ್ದ ಜನಸಾಮಾನ್ಯರಿಗೆ, ಮಾತಂಗಳನ್ನು ತಲುಪಿಸಲೇ ಬೇಕಾದ್ದರಿಂದ ತುಂಬುಗಂಟಲಲ್ಲಿ ಮಾತಾಡುವ ಶೈಲಿ ಇಲ್ಲಿದೆ: ರಂಗಮಂದಿರದ ಆಕಾರ ಮತ್ತು ವೈಶಾಲ್ಯ ವಸ್ತುವಿಗೆ ವಿಶಿಷ್ಟ ಸರಳತೆಯನ್ನೂ ಹೇಳಿಕೆಗೆ ಸ್ಪಷ್ಟತೆಯನ್ನೂ ತರುವುದರೊಂದಿಗೆ ಅನುಪಮ ಗಾಂಭೀರ್ಯವನ್ನೂ ವಿಧ್ಯುಕ್ತ ಕ್ರಿಯೆಯ ಗುಣವನ್ನೂ ತಂದಿದೆ. ಹೀಗೆ 'ದೊರೆ ಈಡಿಪಸ್' ನಾಟಕದ ಶ್ರೇಷ್ಠಗುಣ ರಚನೆಯಲ್ಲಿಯೇ ಇದೆ: ಕಾಲ, ಘಟನೆಗಳನ್ನು ಸಂಘರ್ಷಿಸುವುದರ ಮೂಲಕ; ಸಂಭಾಷಣೆ, ಭಾಷಣ, ಭಾವಗೀತಾತ್ಮಕತೆಯನ್ನು ಹೊಂದಿಸಿ ಕಟ್ಟುವುದರ ಮೂಲಕ, ತಾತ್ವಿಕ

ಜೀವನದೃಷ್ಟಿ ತಳೆಯುವುದರ ಮೂಲಕ (ತತ್ವ ಶಾಸ್ತ್ರದಲ್ಲಿ ಗ್ರಹಗಮನದ ಸಂಗೀತವಿದೆ ಅಂದದ್ದು ಪ್ಲೇಟೋ) – ಸೊಗಸಾದ ಲಯಬದ್ಧತೆ, ಗೇಯತೆ ಸಾಧಿಸಲಾಗಿದೆ. ಈ ಎಲ್ಲದರ ಪರಾಕಾಷ್ಠೆ ಮೇಳ: ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಅಸ್ಪಷ್ಟವಾಗಿ ತಟ್ಟುವ ಲಯವನ್ನು ಒಂದು ರೂಪಕ್ಕೆ ತರುವ, ಇಡೀ ಘಟನೆಯನ್ನು ಸ್ವೀಕರಿಸುವುದರ ಮೂಲಕ ಪ್ರೇಕ್ಷಕರು ಮತ್ತಷ್ಟು ತೀವ್ರವಾಗಿ ಸ್ವೀಕರಿಸುವಂತೆ ಮಾಡುವ, ಶ್ರವ್ಯತ್ವ ವನ್ನು ದಟ್ಟಗೊಳಿಸುವ ಸಾಧನ ಮೇಳ. ಜನ ಹಾಡುವುದನ್ನು, ನರ್ತಿಸುವುದನ್ನು, ಆ ಮೂಲಕ ಸುಖದುಃಖ ತೋಡಿಕೊಳ್ಳುವುದನ್ನು ಇನ್ನೂ ಮರೆಯದಿದ್ದ ಕಾಲದ ಮೇಳ ನಾಟಕಕಾರನಿಗೆ ಐಕ್ಯ ಸಾಧಿಸಲು ನೆರವಾಗುತ್ತದೆ; ಅದಕ್ಕಿಂತ ಹೆಚ್ಚಾಗಿ ನಾಟಕದ ಅರ್ಥ ಮತ್ತು ರಂಜಕತೆಯ ವ್ಯಾಪ್ತಿ ಹೆಚ್ಚಿಸುತ್ತದೆ; ರಂಗದ ಮೇಲೆ ವಿವಿಧ ಗುಂಪುಗಳಾಗಿದ್ದು ನಾಟಕವನ್ನು ಚಿತ್ರವತ್ತಾಗಿ ಮಾಡುತ್ತದೆ.

ಇನ್ನು ಈಡಿಪಸ್ ಪಾತ್ರದ ಬಗ್ಗೆ. ಇದನ್ನು ಒಂದು ವೈಯಕ್ತಿಕ ಮಾತಿನೊಂದಿಗೆ ವಿವರಿಸಬೇಕು. ನಮ್ಮ ನಿರ್ದೇಶಕರೊಬ್ಬರಿಗೆ ಈ ನಾಟಕ ಅನುವಾದಿಸುವ ಮಾತು ಕೊಟ್ಟು ಅರ್ಧ ಮುಗಿಸಿದ ಮೇಲೆ ಅವರು ಸಿಕ್ಕಾಗ ಅವರಿಗೆ ನಿರಾಶೆ ಉಂಟುಮಾಡ ದಿರಲು, "ಮುಗಿದಿದೆ, ಕಾಪಿ ಮಾಡ್ತಿದೇನೆ" ಅಂದಿದ್ದೆ. ಆದರೆ ನಾಟಕದ ನಡುವೆ ನಾನು ಸಿಕ್ಕಿಹಾಕಿಕೊಂಡು ಈಡಿಪಸ್ ಪಾತ್ರದೊಂದಿಗೆ ಸಾಗಲು ಭಯಗೊಂಡು ಸುಮ್ಮ ನಾಗಿದ್ದೆ; ಯಾಕೆಂದರೆ ಈಡಿಪಸ್‌ಗೆ ದೊರೆಯುವ ಶಿಕ್ಷೆ ಅನ್ಯಾಯದ್ದೆನ್ನಿಸಿತ್ತು; ಆತ ಚಿಕ್ಕ ಹುಡುಗನಾಗಿದ್ದಾಗ ಪಾಲಿಬಸ್‌ನಿಂದ ಓಡಿಹೋಗಿ ದೇವರ ನಿಯಮವನ್ನು ದಾಟ ಲೆಳಸಿದ್ದರೂ ಪ್ರಬುದ್ಧನಾದಮೇಲೆ ಅವನನ್ನು ಶಿಕ್ಷಿಸುವುದು ತೀರಾ ಕ್ರೂರವಾಗಿ ಕಂಡಿತ್ತು. ಈಡಿಪಸ್ ತಾನು ತಿಳಿದು ಮಾಡಿದ ತಪ್ಪೇನು? ತಪ್ಪು ಮಾಡಿದ್ದು ಅವನ ತಂದೆ ಲಾಯಿಸ್: ದೇವರ ಭವಿಷ್ಯವಾಣಿಯ ಪ್ರಕಾರ ತಂದೆಯನ್ನು ಕೊಂದು ತಾಯಿಯ ಜೊತೆಗೆ ಮಲಗುವುದಾಗಿ ಭಯಗೊಂಡು ಆ ದೇವವಾಣಿಯನ್ನು ಸುಳ್ಳು ಮಾಡಲು ಗುಡ್ಡಗಾಡಿಗೆ ಮಗುವನ್ನು ಸಾಗಿಸಿ ಕಾಲುಚುಚ್ಚಿ ಬಿಟ್ಟುಬಂದಿದ್ದ ಆತ. ಇದು ಲಾಯಿಸ್ ದೇವರಿಗೊಡ್ಡಿದ ಸವಾಲು; ಇದಕ್ಕೆ ಮುನಿದ ದೇವರು ತನ್ನ ನಿಯ ಮವನ್ನು ನೆರವೇರಿಸಿಯೇ ಬಿಟ್ಟ. ಈಡಿಪಸ್ ತನಗೆ ಗೊತ್ತಿಲ್ಲದೆಯೇ ತನ್ನ ತಂದೆಯನ್ನು ಕೊಂದು ಪತ್ನಿ ಪಳ ಮದುವೆಯಾದ; ಸ್ಫಿಂಕ್ಸ್‌ನ ಒಗಟು ಬಿಡಿಸಿದ್ದು ಆತ ರಾಜನಾಗಲು ಮತ್ತು ಇನ್ನೆಲ್ಲ ಭಾಗ್ಯ ಪಡೆಯಲು ನೆರವಾಯಿತು. ಈಡಿಪಸ್ ತನ್ನ ಪಾಪವನ್ನು ತನಗೆ ಗೊತ್ತಿಲ್ಲದೆ ಮಾಡಿದ್ದರೂ ದೇಶ ಕಷ್ಟಕೋಟಲೆಗಳಿಗೆ ಸಿಕ್ಕಿತು; ಇದಕ್ಕೆಲ್ಲ ಪರೋಕ್ಷವಾಗಿ ಮಾತ್ರ ಅವನು ಜವಾಬ್ದಾರ. ಇದಕ್ಕಾಗಿ ಈಡಿಪಸ್ ಏಕೆ ನೋವನ್ನ ನುಭವಿಸಬೇಕು?

ಇಲ್ಲಿಯೇ ಈಡಿಪಸ್ ನಾಟಕ ನಮಗೆ ಹತ್ತಿರವಾಗುವುದು : ದುಷ್ಟರನ್ನು ಶಿಕ್ಷಿಸುವ ಶಿಷ್ಟರನ್ನು ಪರಿಪಾಲಿಸುವ ನ್ಯಾಯವನ್ನು ಮೀರಿದ ತರ್ಕಾತೀತ ಶಕ್ತಿಯನ್ನು ತನ್ನ ಕೃತಿಯ ಕಟ್ಟಡದೊಳಗೆ ತಂದು ಸಾಫೋಕ್ಲಿಸ್ ಕವಿ ಶೇಕ್ಸ್‌ಪಿಯರಿಗೆ ಮತ್ತು ಆಧುನಿಕರಿಗೆ ಹತ್ತಿರವಾಗುತ್ತಾನೆ. ನಮ್ಮಲ್ಲಿ ಸಾವಿಗೆ ಹೇಗೆ ಉತ್ತರವಿಲ್ಲವೋ ಹಾಗೆ ಮುಪ್ಪು, ನೋವುಗಳಿಗೆ ಉತ್ತರವಿಲ್ಲ ; ಆಕಸ್ಮಿಕಗಳ ಮೇಲೆ ಕಟ್ಟಿದ್ದು ಬದುಕು. ನಮ್ಮೆಲ್ಲ ಆಶಾವಾದ, ತರ್ಕ, ವೈಭವ, ಮಹತ್ವಾಕಾಂಕ್ಷೆಗಳಿಗೆ ವಿಧಿಯು ಕುಹಕದ ಉತ್ತರ ನೋಡಿ ಮನುಷ್ಯ ವಿಸ್ಮಿತನಾಗುತ್ತಾನೆ. ಇವಕ್ಕಿಂತ ಮುಖ್ಯವಾಗಿ ಭೂಮಿಗೆ ಅಂಟಿಕೊಂಡು ಅಲ್ಲಿಯೇ ಹುಟ್ಟಿ ಅಲ್ಲಿಯೇ ತನ್ನ ಮೋಕ್ಷ ಪಡೆಯಲಾಗದ ಮನುಷ್ಯ ತನ್ನ ಹುಟ್ಟು ಮತ್ತು ಅದರ ಅರ್ಥ ಶೋಧಿಸುತ್ತ ಹೋಗುತ್ತಾನೆ. ಈ ದೃಷ್ಟಿಯಲ್ಲಿ ಈಡಿಪಸ್ ಸರ್ವಕಾಲದ ಸಂಕೇತ. ಆದ್ದರಿಂದಲೇ ಈಡಿಪಸ್‌ನದು ತ್ಯಾಗ ಕೂಡ : ತನ್ನ ರಾಜತ್ವ, ಅಧಿಕಾರ ಯಾವುದನ್ನೂ ಲೆಕ್ಕಿಸದೆ ತನ್ನ ಬಗ್ಗೆ ಸತ್ಯಕ್ಕಾಗಿ, ತನ್ನ ಮೂಲಕ್ಕಾಗಿ ಹುಡುಕಾಡುತ್ತಾನೆ ; ಪಾಪದ ನೆಪದಲ್ಲಿ ಆತ ಗಳಿಸಿಕೊಳ್ಳುವುದು ಪುಣ್ಯ. ಈಡಿಪಸ್ ತನ್ನವರು, ತನ್ನದು ಎಲ್ಲವನ್ನೂ ತೊರೆದು ಕಣ್ಣು ಕಳೆದುಕೊಂಡು ನಿಜಕ್ಕೂ ತಪಸ್ವಿಯ ಸ್ಥಿತಿ ಹೊಕ್ಕಂದು ಅವನಿಗೆ ಇನ್ನೊಂದು ಬಗೆಯ ವೈಭವ ದಕ್ಕುತ್ತದೆ. ಈ ವೈಭವದಲ್ಲಿಯೇ ಆತ ದೇವರ ನಿಯಮ ಗೆಲ್ಲುತ್ತಾನೆ, ತನ್ನ ತಂದೆಯ ಭಯವನ್ನು ವಿಜಯಕ್ಕೆ ಪರಿವರ್ತಿಸುತ್ತಾನೆ. ಮೇಲುನೋಟಕ್ಕೆ ಈಡಿಪಸ್ ಅನುಭವಿಸುವ ಶಿಕ್ಷೆಯಲ್ಲಿ ಸುಖ ಕಾಣುವ ಥೀಬ್ಸ್ ಪ್ರಜೆಗಳು ಈ ನಾಟಕದ ಮುಂದಿನ ಘಟನೆ ಹೇಳುವ "ಈಡಿಪಸ್ ಕೊಲೋನಸ್" ನಾಟಕದಲ್ಲಿ, ಮತ್ತೆ ದೇವರ ಅನುಜ್ಞೆಯ ಪ್ರಕಾರ, ಕುರುಡನಾಗಿರುವ ಈಡಿಪಸ್‌ನನ್ನು ಥೀಬ್ಸ್‌ಗೆ ಕರೆಯುತ್ತಾರೆ ; ಆತ ತಮ್ಮ ನಗರಕ್ಕೆ ಬಂದಿರುಗುವುದರಲ್ಲಿ ತಮ್ಮ ಸುಖವಿದೆಯೆಂದು ಗೋಗರೆಯುತ್ತಾರೆ ಇದೂ ಕೂಡ ಈಡಿಪಸ್‌ನ ಗೆಲುವನ್ನು ಸೂಚಿಸುತ್ತದೆ.

ದೈವಿಕತೆಯ ಹಿನ್ನೆಲೆ, ದೇವರ ನಿಯಮದ ಮಿತಿಯಲ್ಲಿ ಕ್ರಿಯೆ ನಡೆಯುವಂತೆ ಕಂಡರೂ "ದೊರೆ ಈಡಿಪಸ್" ಹೀಗೆ ಮನುಷ್ಯನ ಶೋಧನೆಯ ಜಯವೆನ್ನಿಸಿ, ಈ ಎಲ್ಲ ಶೋಧನೆಯ ದುರಂತದೊಂದಿಗೆ ಹೇಳುತ್ತ ನಮಗೆ ಅರ್ಥಪೂರ್ಣವಾಗುತ್ತದೆ. ಒಂದು ರೀತಿಯಲ್ಲಿ ನಿರಾಶೆ ಕವಿದ, ನಿರಪರಾಧಿಯನ್ನು ಶಿಕ್ಷಿಸುವ ಈ ನಾಟಕ ಇನ್ನೊಂದು ಕಾರಣಕ್ಕೂ ಮನುಷ್ಯತ್ವದ ಮತ್ತು ಮನುಷ್ಯಸಾಧ್ಯವಾದದ್ದರ ಆರಾಧನೆಯೆನ್ನಿಸುತ್ತದೆ. ವರ್ಣನೆಯಲ್ಲಿ ಶಕ್ತಿ ಇರುವಂತೆಯೇ ನಾಟಕದ ಶೈಲಿಯಲ್ಲಿ ತೇಜಸ್ಸಿದೆ ; ಈಡಿಪಸ್ ತನ್ನ ಮಿಡಿಕ್ಕೆ ತಾನೇ ಕೊಡಲಿಯೇಟು ಹಾಕಿಕೊಳ್ಳುವಾಗ ಸಹ ಜೀವನೋತ್ಸಾಹದಿಂದ ವಿಜೃಂಭಿಸುತ್ತಾನೆ. ಇದನ್ನು ನಾವು ಈಡಿಪಸ್‌ನ ಮದ ಅಥವಾ ಅಹಂಕಾರ ಎಂದು ಹೇಳಲು ಅವಕಾಶವಿದೆ: ಇವನ ಅಹಂಕಾರ ಈತ ಟೈರೀಸಿಯಸ್, ಕ್ರಿಯಾನ್, ಕುರುಬ–



ಮೂವ್ರ

ಇವರೊಂದಿಗೆ ಮಾತಾಡುವಾಗ ಗೊತ್ತಾಗುತ್ತದೆ; ರಾಜ್ಯದ ನ್ಯಾಯಕ್ಕಾಗಿ ದೇವರ ನ್ಯಾಯದ ಬಗ್ಗೆ ಕುರುಡಾದ ಈತ ಗಂಟಲೆತ್ತಿ, ಭಾಷೆಯ ಎಲ್ಲ ಶಕ್ತಿಯನ್ನು ಬಳಸಿ ಕೊಂಡು, ಮಾತಾಡುತ್ತಾನೆ. ಕಾವ್ಯ – ಈ ಜಗತ್ತಿನ ಗುಣಗಳಿಂದ ತನ್ನ ಸರಶಕ್ತಿ ಪಡೆ ಯುವ ಕಾವ್ಯ – ಈ ರೀತಿಯಲ್ಲಿ ತೀವ್ರವಾಗುತ್ತ ತನ್ನ ತೀವ್ರತೆಯಿಂದಲೇ ನೈತಿಕತೆ ಪಡೆಯುತ್ತ ಹೋಗುತ್ತದೆ. ಎಲ್ಲ ಮುಖ್ಯ ಕಾವ್ಯದ ವಿಚಿತ್ರ ಕೆಲಸ ಇಲ್ಲಿ ಗೊತ್ತಾಗು ತ್ತದೆ. ಹೇಳಿಕೆಯ ಅನೀತಿಯನ್ನು ಪರಿಣಾಮದ ನೀತಿಯನ್ನಾಗಿಸುವ ಗುಣ ದೊಡ್ಡ ಕಾವ್ಯದ್ದು. ಇದು ದುರಂತನಾಟಕದ 'ಕ್ಯಥಾರ್ಸಿಸ್'ನಲ್ಲಿ ಮುಖ್ಯವಾದದ್ದು; ಕಣ್ಣಿ ದ್ದಾಗ ಈಡಿಪಸ್ ಮಾಡುವ ಪಾಪ ಮತ್ತು ಕಣ್ಣು ಕಳೆದುಕೊಂಡ ಮೇಲೆ ಆತ ಗಳಿಸುವ ತೇಜಸ್ಸು – ಇವನ್ನು ಒಗ್ಗೂಡಿಸುವುದು ಈ ನಾಟಕದ ಕಾವ್ಯಗುಣ.

೨

'ದೊರೆ ಈಡಿಪಸ್' ನಾಟಕ ವಿಧಿಯ ಬಲೆಯಲ್ಲಿ ಸಿಕ್ಕ ಮನುಷ್ಯ ಅದರ ಆಟ ವನ್ನು ನಡೆಸಿಕೊಡುತ್ತಲೇ ಮಾನವತೆಯನ್ನು ಉಜ್ವಲಗೊಳಿಸಿ ತೋರುವ ಮೂಲಕ ವಿಧಿಯನ್ನು ಗೆಲ್ಲುವ ಚಿತ್ರಣ ಕೊಟ್ಟರೆ, 'ಅಂತಿಗೊನೆ' ವ್ಯಕ್ತಿ ಮತ್ತು ವ್ಯವಸ್ಥೆಯ ನಡು ವಿನ ಘರ್ಷಣೆ ಮಂಡಿಸುವುದರ ಮೂಲಕ ನಮ್ಮ ಮೂಲಭೂತ ಅನ್ನಿಸಿಕೆಯೊಂದನ್ನು ಮುಂದಿಡುತ್ತದೆ. ಅಂತಿಗೊನೆ ಮತ್ತು ಕ್ರೆಯಾನ್ ನಡುವಿನ ಜಗಳಕ್ಕೆ ಕಾರಣವೇನೆಂದು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಅಂತಿಗೊನೆಯ ಅಣ್ಣಂದಿರಾದ ಪಾಲಿನೈಕಸ್ ಮತ್ತು ಎತೆಯೋಕ್ಲೆಸ್ ಯುದ್ಧದಲ್ಲಿ ಸತ್ತಿದ್ದಾರೆ. ಕಿರಿಯನಾದ ಎತೆಯೋಕ್ಲೆಸ್ ದೇಶ ಕ್ಕಾಗಿ ಹೋರಾಡಿದವನೆಂಬ ಕಾರಣಕ್ಕೆ ಅವನಿಗೆ ಶವಸಂಸ್ಕಾರದ ಮರ್ಯಾದೆ ದೊರೆತು ದೇಶವನ್ನು ನಾಶಪಡಿಸಲು ದಂಡೆತ್ತಿಬಂದನೆಂಬ ಕಾರಣಕ್ಕೆ ಪಾಲಿನೈಕಸ್‌ನ ಶವ ಬಯ ಲಲ್ಲಿ ಬಿದ್ದು ನಾಯಿನರಿಗಳ ಪಾಲಾಗಿದೆ. ಹಾಗೆ ಎಸೆಯುವುದರ ಮೂಲಕ ಕ್ರೆಯಾನ್ ತನ್ನ ಉದ್ದೇಶಕ್ಕೇ ವಿರುದ್ಧವಾದ ಕೃತ್ಯ ನಡೆಸಿದ್ದಾನೆ: ಮನುಷ್ಯನ ಮನಸ್ಸು ಮತ್ತು ದೇಹದ ಆರೋಗ್ಯಕ್ಕೆ ಒಳಿತಲ್ಲದ ಕೆಲಸ ಇದು – ಯಾಕೆಂದರೆ ಹೆಣ ಕೊಳೆತು ನೋಟಕ್ಕೆ ಭೀಕರವಾಗಿದೆ; ದೇಶದ ಪರಂಪರೆಗೆ ವಿರುದ್ಧವಾದ ಕೆಲಸ ಇದು—ಯಾಕೆಂದರೆ ಮನುಷ್ಯನ ಜಗತ್ತಿನಲ್ಲಿ ದ್ರೋಹ ಅನ್ನಿಸಿಕೊಳ್ಳಬಲ್ಲ ಕೃತ್ಯ ದೇವರ ಜಗತ್ತಿನಲ್ಲಿ ಹಾಗಿರದೆ ಇರಲಿಕ್ಕೆ ಸಾಕು: ಸತ್ತವನನ್ನು ಕ್ಷಮಿಸಿ ಶವಸಂಸ್ಕಾರ ನಡೆಸಿ ಹೇಡ್ಸ್‌ಗೆ ಕಳಿಸಿಕೊಡ ಬೇಕಾದ್ದು ಮನುಷ್ಯರ ಕರ್ತವ್ಯ. ವ್ಯವಸ್ಥೆಯನ್ನು ಕಾಪಾಡುವ ನೆಪದಲ್ಲಿ ದೇಶಪ್ರೇಮ ವೆಂದು ಕ್ರೆಯಾನ್ ಬಣ್ಣಿಸಿಕೊಳ್ಳುವ ಹುಂಬತನದಿಂದ, ಕೊಬ್ಬಿನಿಂದ ಹೆಣದ ಬಗ್ಗೆ ಕ್ರೌರ್ಯ ತೋರಿ ಪರಂಪರೆಯನ್ನು ಮುರಿದಿದ್ದಾನೆ; ಗ್ರೀಕರು ಯಾವುದನ್ನು ದೇವರ ನಿಯಮವೆನ್ನುತ್ತಾರೋ ಅದನ್ನು ಉಲ್ಲಂಘಿಸಿದ್ದಾನೆ. ದೇಶಪ್ರೇಮ, ಅತಿಯಾದರೆ ಅದು

ಹೇಗೆ ಮಾನವರೆಲ್ಲರ, ದೇವತೆಗಳೆಲ್ಲರ ವಿರುದ್ಧ ಹೋಗಬಹುದು ಎಂಬುದು ಇದರಿಂದ ಗೊತ್ತಾಗುತ್ತದೆ. ವ್ಯವಸ್ಥೆ ಮುಖ್ಯ, ಆದರೆ ತೆರುವಬೆಲೆ ವಿಪರೀತವಾಗಿದ್ದಾಗ ಅಲ್ಲ; ಮನುಷ್ಯನ ಶಕ್ತಿಯು ಎಲ್ಲೆ ದಾಟಿದಾಗ ಅಲ್ಲ. ಕ್ರಿಯಾನನ ಆಜ್ಞೆಯನ್ನು ಉಲ್ಲಂಘಿಸುವ ಅಂತಿಗೊನೆಗೆ ಕೂಡ ಹಲವು ಬಗೆಯ ಪ್ರೇರಣೆಗಳಿವೆ. ಅವಳ ಮನಸ್ಸಿನಲ್ಲಿ ತನ್ನ ತಂದೆ ತನ್ನಲ್ಲಿ ಮತ್ತು ಇಡೀ ವಂಶದಲ್ಲಿ ಹರಿಯುತ್ತಿರುವುದು ಭಾರವಾದ ನೆನಪಾಗಿ ಉಳಿದಿದೆ; ತಂದೆಯ ಶಾಪದಿಂದಾಗಿ ಅಣ್ಣಂದಿರು ಸತ್ತ ಸಂಗತಿಯನ್ನು ಆಕೆ ಮರೆತಿಲ್ಲ; ಜನರ ಕಣ್ಣಿನಲ್ಲಿ ಇಳ್ಳಾಗಿ, ಬದುಕಿನಲ್ಲಿ ಸುಖ ಕಾಣದೆ ಬೆಳೆದಿದ್ದಾಳೆ. ಈ ಎಲ್ಲ ಕಾರಣದಿಂದಾಗಿ ಜನರೆದುರು ಘನತೆಯುಳ್ಳ ಕೆಲಸವೊಂದನ್ನು ಮಾಡಬೇಕೆಂಬುದೇ ಅವಳು ಪಾಲಿನೈಕಸ್‌ನನ್ನು ಹೂಳುವುದರ ಸಾಮಾಜಿಕ ಮುಖವುಳ್ಳ ಪ್ರೇರಣೆ; ಆತ್ಮಹತ್ಯೆ ಮಾಡಿಕೊಳ್ಳುವುದು ಅನಿವಾರ್ಯ ಸ್ಥಿತಿಯಾಗಿದ್ದಾಗ ಅದನ್ನು ಹುತಾತ್ಮ ಗುಣಕ್ಕೆ ತಿರುಗಿಸುವುದು ಅವಳ ಆತ್ಮವಂಚನೆ. ಅಷ್ಟು ಆರೋಗ್ಯಕರವಲ್ಲದ ಈ ಮಾನಸಿಕ ಹಿನ್ನೆಲೆಯೊಂದಿಗೆ ಕ್ರಿಯಾನನ ವ್ಯವಸ್ಥೆಯನ್ನು ಪ್ರಶ್ನಿಸುವ, ದೇವರ ನಿಯಮಕ್ಕೆ ಬದ್ಧಳಾಗಿರುವ ಬಹು ಸಮರ್ಥ, ಸುಸಂಗತ ಕಾರಣಗಳನ್ನು ಮುಂದೊಡ್ಡಿ ಹಠ ಮಾಡುತ್ತಾಳೆ. ಕ್ರಿಯಾನ್ ಕಾನೂನು, ದೇಶಪ್ರೇಮದ ಹೆಸರಲ್ಲಿ ತಪ್ಪು ಮಾಡುವಂತೆ ಈಕೆ ದೇವರ ನಿಯಮದ ಹೆಸರಲ್ಲಿ ಅಹಂಕಾರಿಯಾಗಿದ್ದಾಳೆ; ಆತ್ಮಹತ್ಯೆಯ ಗೂಢ ಆಶೆಗೆ ಶಾಸನೋಲ್ಲಂಘನೆಯ ಬಂಡಾಯದ ರೂಪ ಕೊಡುತ್ತಾಳೆ. ಇಬ್ಬರದೂ ಒಂದು ಬಗೆಯಲ್ಲಿ ಇಹದ ವೈಭವದ ಅಪೇಕ್ಷೆಯೇ. ಇಲ್ಲಿ ಈ ಇಬ್ಬರ ದುರಂತವಿದೆ; ಇಬ್ಬರೂ ತಪ್ಪು ಮಾಡುತ್ತಾರೆ ಮತ್ತು ತಮ್ಮ ಕೃತ್ಯದ ಹಿಂದಿನ ಪ್ರೇರಣೆಗಳನ್ನು ತಿಳಿದುಕೊಳ್ಳಲು ಅಸಮರ್ಥರಾಗಿದ್ದಾರೆ. ಈ ಇಬ್ಬರ ಮುಖಾಮುಖಿಯ ಮೂಲಕ ಸಾಫೋಕ್ಲಿಸ್ ಮುಖ್ಯ ಸಮಸ್ಯೆಯೊಂದನ್ನು ಪೃಥಕ್ಕರಿಸುತ್ತಾನೆ: ಮುಂದೆ ಶೇಕ್ಸ್‌ಪಿಯರ್ ತನ್ನ ಆಂಟೋನಿ ಮತ್ತು ಬ್ರೂಟಸ್ ಮೂಲಕ ಕೇಳಿದಂತೆ, ದೇಶ ಮತ್ತು ಸ್ವಂತ ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದರೆ ಮನುಷ್ಯ ಯಾವುದಕ್ಕೆ ಒಲಿಯಬೇಕು? ದೇಶದ ವ್ಯವಸ್ಥೆ ಆರಿಸಿಕೊಂಡು ಕ್ರಿಯಾನ್ ದೇಶಕ್ಕೆ ವಿರುದ್ಧವಾದದ್ದು ಮಾಡಿದ್ದಾನೆ; ಸ್ವಂತ ಅಣ್ಣನ ಬಗ್ಗೆ ಪ್ರೇಮ ಮತ್ತು ಅಮೂರ್ತ ದೇವರಾಣತಿ ಆರಿಸಿಕೊಂಡ ಅಂತಿಗೊನೆ ತನ್ನ ಅಹಂಕಾರದಿಂದಾಗಿ ಸಾವನ್ನಪ್ಪುತ್ತಾಳೆ. ದೇವರ ನಿಯಮದತ್ತ ಕಾಳಜಿಯುಳ್ಳ ವೈಯುಕ್ತಿಕ ಪ್ರೇಮ ಮುಖ್ಯವೆಂದು ಸಾಫೋಕ್ಲಿಸ್ ಹೇಳುವಂತೆ ತೋರುತ್ತದೆ: ಇದನ್ನು ಕ್ರಿಯಾನನ ಸತ್ಯದೃಷ್ಟಿಯಾಗಲಿ, ಅಂತಿಗೊನೆಯ ಹಟಮಾರಿತನವಾಗಲಿ ಇಲ್ಲದ ಹೀಮ್‌ಮೋನನ ಮೂಲಕ ಕವಿ ಹೇಳಿದ್ದಾನೆ. ಮೇಲುನೋಟಕ್ಕೆ ಬಹಳ ಜಾಣನಾದ ಮುತ್ಸದ್ದಿಯಂತೆ ಕಾಣುವ ಈತ ನಿಜಕ್ಕೂ ಋಜುತ್ವ ಉಳ್ಳ ಆರೋಗ್ಯವಂತ; ತನ್ನ ತಂದೆ ಕ್ರಿಯಾನ್ ಮತ್ತು ಪ್ರೇಯಸಿ ಅಂತಿಗೊನೆ ಇಬ್ಬರ



ಕೂದ್ರ

ದೋಷದಿಂದಲೂ ಮುಕ್ತನಾದವನು. ಈತ ಕ್ರಿಯಾನನೆದುರು ಧೈರ್ಯದಿಂದ ಮಾತಾಡಿ ಅವನ ಕ್ರಮಗಳನ್ನು ಅಲ್ಲಗಳೆಯುತ್ತಾನೆ; ಅವನೊಬ್ಬನಿಗೇ ದೇಶದ ಪ್ರಜೆಗಳ ಮನಸ್ಸು ತೆರೆದುಕೊಳ್ಳುವುದು; ಅವನೊಬ್ಬನಿಗೇ ಮನುಷ್ಯನ ಅರಿವಿನ ಶಕ್ತಿಯ ಮಿತಿ ಗೊತ್ತಿರುವುದು. ಅವನು ತಂದೆ ತನ್ನ ಮಾತಿಗೆ ಕಿವಿಗೊಡದಿದ್ದಾಗ ತಂದೆಯ ಭ್ರಷ್ಟ ವ್ಯವಸ್ಥೆಗಿಂತ ಪ್ರೇಯಸಿ ಅಂತಿಗೊನೆಯೊಂದಿಗೆ ಸಾಯುವುದು ಉತ್ತಮವೆಂದು ನಿರ್ಧರಿಸುತ್ತಾನೆ. ಅಂತಿಗೊನೆಯ ಮೌಲ್ಯಗಳನ್ನು ಆತ ಒಪ್ಪಿದರೂ ಅದಕ್ಕಿಂತ ಮುಖ್ಯ ವಾಗಿ ಅವಳ ಬಗೆಗಿನ ಪ್ರೇಮಕ್ಕಾಗಿ ಆತ ಸತ್ತಂತೆ ನಮಗನ್ನಿಸುತ್ತದೆ. ಯಾಕೆಂದರೆ ಅಂತಿಗೊನೆಯ ಮೌಲ್ಯಗಳು ಅವಳ ಸಾಕ್ಷಿಪ್ರಜ್ಞೆಯ ಬಣ್ಣದೊಂದಿಗೆ ಮಿಳಿತವಾಗಿವೆ. ಸಾಕ್ಷಿಪ್ರಜ್ಞೆ ಕೂಡ ಒಂದು ರೀತಿಯಲ್ಲಿ ಪರಿಸರದ ಫಲ; ಯಾವುದು ಸರಿ, ಯಾವುದು ತಪ್ಪು, ಯಾವುದು ಮುಖ್ಯ, ಯಾವುದು ಅಮುಖ್ಯ ಎಂಬುದನ್ನು ವ್ಯಕ್ತಿ ಕೇಳಿಕೊಳ್ಳು ವಂತೆ, ಆತ ಸಾರ್ವತ್ರಿಕವಾದದ್ದನ್ನು ಸಂದೇಹಿಸಿ ನೋಡುವಂತೆ ಈ ಪ್ರಜ್ಞೆ ಮಾಡು ತ್ತದೆ. ಈ ಸಂದೇಹ ಹಟಕ್ಕೆ ತಿರುಗಿದಾಗ ವ್ಯಕ್ತಿಯ ಅಡಿ ತಪ್ಪುತ್ತದೆ; ಸಾಕ್ಷಿಪ್ರಜ್ಞೆಯ ಹೆಸರಿನಲ್ಲಿ ತಪ್ಪು ಆರಂಭವಾಗುತ್ತದೆ. ಅಂತಿಗೊನೆಯ ಸಾಕ್ಷಿಪ್ರಜ್ಞೆ ಈ ಬಗೆಯದು. ಆದರೆ ಹಯ್‌ಮೋನ್ ಬಗೆ ಬೇರೆ. ಎಲ್ಲವನ್ನೂ ತರ್ಕಬದ್ಧವಾಗಿ ಸಂಯಮದಿಂದ ಯೋಚಿಸಿ ಜಗತ್ತಿನ ತುಡಿತ ಮತ್ತು ಪರಮಾತ್ಮನ ನಿಯಮಕ್ಕೆ ವ್ಯಕ್ತಿಯ ಇಷ್ಟವನ್ನು ಹೊಂದಿಸಿಕೊಂಡು ಆತ್ಮತ್ಯಾಗಕ್ಕೆ ಸಿದ್ಧನಾಗುವ ಹಯ್‌ಮೋನನ ಸಾಕ್ಷಿಪ್ರಜ್ಞೆ ಸಾಫೋ ಕ್ಲಿಸ್ ಒಪ್ಪುವಂಥದು. ಆದರೆ ಸಾಕ್ಷಿಪ್ರಜ್ಞೆಯ ಪರಿಶುದ್ಧತೆ ಕೂಡ, ಒಂದು ಪರಿಸರದ ಪಾಪದಿಂದಾಗಿ. ವ್ಯಕ್ತಿಗೆ ನೆರವಾಗುವುದಿಲ್ಲ. ಇಲ್ಲಿ ಮನುಷ್ಯನ ಮಿತಿಯ ಸ್ಪಷ್ಟೀಕರಣ ಇದೆ. ಈಡಿಪಸ್ ದುರಂತಕ್ಕೆ ಮನಕರಗುವಂತೆ ಈ ಹಯ್‌ಮೋನನ ಬಲಿಗೆ ಪ್ರೇಕ್ಷಕರ ಮನಸ್ಸು ಒಲಿಯುತ್ತದೆ; ಇವನ ತ್ಯಾಗದಿಂದಾಗಿ ಅಂತಿಗೊನೆಯ ಸಾವಿಗೆ ಕೂಡ ಒಂದು ಬಗೆಯಲ್ಲಿ ಅರ್ಥ ಬರುತ್ತದೆ: ಅವಳ ಎಲ್ಲ ಘೋಷಿತ ಉತ್ತಮಿಕೆಯ ಹಿಂದೆ ಪ್ರೀತಿಗೆ ಯೋಗ್ಯವಾದ ವ್ಯಕ್ತಿತ್ವವಿರುವುದು ತಿಳಿಯುತ್ತದೆ. ಹಯ್‌ಮೋನ್ ಈ ಕೃತಿಯ ತೀವ್ರಗಾಮಿಗಳ ನಡುವಿನ 'norm' ಇವನ ಮೂಲಕ ಪ್ರೇಮದ ಅಸಾಮಾನ್ಯ ಶಕ್ತಿಯ ಪರಿವೆ ನಮಗೆ ದೊರಕುತ್ತದೆ.

ನಮಗೆ ಇವತ್ತಿಗೂ 'ಅಂತಿಗೊನೆ' ತೀರಾ ಹತ್ತಿರದ ಕೃತಿಯಾಗಿ ಕಾಣಲು ಕಾರಣ ಇದೆ. ಸಾಫೋಕ್ಲಿಸ್ ದ್ವಂದ್ವಗಳನ್ನು ತೂಗಿಸಿ ನಾಟಕ ಕಟ್ಟುವುದರಲ್ಲಿ ಅಸಾಮಾನ್ಯ ಸಾಮರ್ಥ್ಯ ತೋರಿದ್ದಾನೆ: ವ್ಯಕ್ತಿ ವ್ಯಕ್ತಿಯ ನಡುವಿನ ವೈಷಮ್ಯವನ್ನು ಮಾತ್ರವಲ್ಲ, ಒಬ್ಬನೇ ವ್ಯಕ್ತಿಯೊಳಗಣ ವೈಷಮ್ಯಗಳನ್ನು ತೂಗಿ ನಾಟಕವಾಗಿ ಕಡೆದಿದ್ದಾನೆ. ನಾವು ಕ್ರಿಯಾನನ ಕಡೆಗಾಗಲಿ ಅಂತಿಗೊನೆಯ ಕಡೆಗಾಗಲೀ ಸಲೀಸಾಗಿ ಒಲಿಯಲು ನಾಟಕಕಾರ

ಬಿಟ್ಟಿಲ್ಲ; ಉದ್ದಕ್ಕೂ ತನ್ನ ಬೌತಿಕ ಹಾಜರಿಯಿಂದ ಮುಖ್ಯವಾಗಿ ಕಾಣುವ ಕ್ರಿಯಾನ್ ಉದ್ದಕ್ಕೂ ತನ್ನ ತಳಮಳದಿಂದಾಗಿ ನಮ್ಮ ಮನಸ್ಸಿನಲ್ಲಿ ಸ್ಥಾಪಿತವಾಗುವ ಅಂತಿಗೊನೆಗೆ ನಾಯಕತ್ವದ ಸ್ಥಾನ ಬಿಟ್ಟುಕೊಡುತ್ತಾನೆ. ನಾಗರಿಕತೆ ನಡೆದು ಬಂದ ಬಗೆಯನ್ನೇ ಸೂಚಿಸುವ ಪರಂಪರೆ, ಆಧುನಿಕತೆಯ ಘರ್ಷಣೆ ಈ ಕೃತಿಯಲ್ಲಿದೆ; ಬೌತಿಕವಾದದ್ದರೊಂದಿಗೆ ಆಧ್ಯಾತ್ಮಿಕ ಅಂಶ ಹೆಣೆದುಕೊಂಡಿದೆ; ನಾವು ಅರಿತು ಮಾಡುವುದರೊಂದಿಗೆ ಅರಿಯದ ಪ್ರೇರಣೆ ಘರ್ಷಿಸಿ ನಾಟಕ ಕಟ್ಟಿಕೊಳ್ಳುತ್ತದೆ. ಸಾಫೋಕ್ಲಿಸ್ ಇಲ್ಲಿ ಸರಳಗೊಳಿಸಿ ಹೇಳಲಾರ—ಅವನ ಪ್ರಕಾರ ಮಾನವನ ಜ್ಞಾನವೆಂದರೆ ಅರ್ಥ ನಮ್ಮ ಅರಿವಿಗೆ ನಿಲುಕುವಂಥ, ನಿಲುಕದಂಥ ಎಲ್ಲದನ್ನೂ ತಿಳಿಯುವ ಪ್ರಯತ್ನ. ಈ ಜ್ಞಾನ ಮಾತ್ರ ಅವನಿಗೆ ನೆಮ್ಮದಿ ತರಬಲ್ಲದು. ಈಡಿಪಸ್ ನಾಟಕದಲ್ಲಿ ಈ ಜ್ಞಾನದಾಹ ಈಡಿಪಸ್‌ನ ಶೋಧನೆಯೊಂದಿಗೆ ಪ್ರೇಕ್ಷಕ ಒಂದಾಗುವುದರಲ್ಲಿ ಹಿಂಗುತ್ತದೆ, ಮನುಷ್ಯನ ಮಿತಿ ಮತ್ತು ವೈಭವಕ್ಕೆ ಪ್ರೇಕ್ಷಕನ ಮನಸ್ಸು ಹಿಗ್ಗುತ್ತದೆ. ಅಂತಿಗೊನೆಯಲ್ಲಿ ಯಾವ ಮುಖ್ಯ ಪಾತ್ರವೂ ಈ ಪರಿವಿಗೆ ವಾರಸುದಾರನಾಗುವುದಿಲ್ಲ; ಇದು ಒಟ್ಟು ನಾಟಕರೂಪು ಪ್ರೇಕ್ಷಕನಲ್ಲಿ ಉಂಟುಮಾಡುವ ಅನುರಣನದಿಂದ ಸಾಧ್ಯವಾಗಬೇಕು; ಇದರಿಂದ ಅವನ ಭಾವನೆಗಳ ಶುದ್ಧೀಕರಣ ಆಗಬೇಕು. ಹಾಗೆ ಮಾಡುವುದು 'ಅಂತಿಗೊನೆ'ಯ ವೈಶಿಷ್ಟ್ಯಗಳಲ್ಲಿ ಒಂದು.

೩

ಇನ್ನು ನನ್ನ ಅನುವಾದದ ಬಗ್ಗೆ ಎರಡು ಮಾತು ಹೇಳಬೇಕು.

ಈ ಎರಡು ನಾಟಕಗಳನ್ನು ಪ್ರದರ್ಶಿಸುವುದಕ್ಕಾಗಿ ನಾನು ಅನುವಾದ ಮಾಡಿದೆ. ನಾಟಕ ನೋಡುವಾಗ ನಾಟಕದ ಧರ್ಮ ಮುಖ್ಯವಾಗುತ್ತದೆ; ನಾಟಕದ ವಿವರಗಳು ಕೂಡ ಒಟ್ಟಾರೆಯ ಲಯಕ್ಕೆ ಹೊಂದಿಕೊಂಡು ಸಮರ್ಪಕವಾಗಿದ್ದರೆ ಸಾಕೆನ್ನಿಸುತ್ತದೆ. ಆದರೆ ನಾಟಕ ಓದುವಾಗ ನಾವು ಮೂಲದೊಂದಿಗೆ ಹೋಲಿಸುವ ಕೆಲಸ ಆರಂಭವಾಗುತ್ತದೆ. ಹೀಗೆ ಹೋಲಿಸುವ ನನ್ನ ಓದುಗರು ಅಲ್ಲಲ್ಲಿ ತಪ್ಪು ಕಾಣಲು ಸಾಧ್ಯವಿದೆ—ಮೂಲದ ವಾಕ್ಯರಚನೆ ಹೀಗಿರಲಿಲ್ಲ, ಮೂಲದ ರೂಪಕ ಈ ಗುಣದ್ದಲ್ಲ, ಎನ್ನಲು ಅವಕಾಶವಿದೆ. ಆದರೆ ಈ ಎರಡಕ್ಕಿಂತ ಮೂಲದ ಉದ್ದೇಶ ಸಂದರ್ಭ ಮತ್ತು ಲಯ ಮುಖ್ಯವೆಂದಿಟ್ಟುಕೊಂಡು ನಾನು ಕನ್ನಡಿಸಿದ್ದೇನೆ. ಸ್ನೇಹಿತರೊಬ್ಬರು 'ದೊರೆ ಈಡಿಪಸ್'ನ 'ಲಪಟಾಯಿಸಲು ಯತ್ನಿಸಿದೆ' ಮಾತಿಗೆ ಬದಲು ಕೊಂಚ ಗಂಭೀರ ಮಾತು ಬಳಸಬೇಕಿತ್ತು ಎಂದರು; ಆದರೆ ಗಿರೀಶ್ ಮತ್ತು ನನಗೆನ್ನಿಸಿದಂತೆ ಆ ಸಂದರ್ಭಕ್ಕೆ ತಕ್ಕ ಶಕ್ತಿ ಮತ್ತು projection ಉಳ್ಳ ಪದ ಅದು. ಇಂಥವೇ ನಾಲ್ಕಾರು ಮಾತು ಅಲ್ಲಲ್ಲಿ ಬರಬಹುದಾದ್ದರಿಂದ ಈ ಉದಾಹರಣೆ ಕೊಟ್ಟಿದ್ದೇನೆ. ಇಲ್ಲಿ ಪೂರ್ತಿಯಾಗಿ ಮುಕ್ತ



ಶೂದ್ರ

ಛಂದಸ್ಸಿನ ಸಾಮರ್ಥ್ಯವನ್ನು ನಂಬಿರುವ ನಾನು ಗ್ರೀಕ್ ಮೂಲದ ಕೆಲವು ಮಾತುಗಳನ್ನು ವಿವರಣಾತ್ಮಕ ಕನ್ನಡದಲ್ಲಿ ಹೇಳಿ ಒಟ್ಟಾರೆ ನಡಿಗೆಗೆ ಹೊಂದಿಸಿದ್ದೇನೆ. ಈಡಿಪಸ್ ಆರಂಭದಲ್ಲೇ ಹೇಳುವ 'ಆಲಿವ್' ಪದ ಪ್ರೇಕ್ಷಕರ ಕಿವಿಗೆ ಕಿರಿಕಿರಿ ಉಂಟುಮಾಡೀತೆಂದು 'ಜೀವವೃಕ್ಷ' ಎಂದು ಬರೆದಿದ್ದೇನೆ; ಥೀಬ್ಸ್ ಜನರ ಆರ್ಥಿಕ, ಧಾರ್ಮಿಕ ಬದುಕಿನಲ್ಲಿ ಮುಖ್ಯವಾಗಿದ್ದ ಈ ಮರಕ್ಕೆ ಜೀವವೃಕ್ಷ ಎಂಬ ಅರ್ಥವೂ ಇದೆ. ಸಾಮಾನ್ಯವಾಗಿ ಹಾಡುವುದಕ್ಕಿಂತ ಹೇಳುವುದಕ್ಕಾಗಿ ನಾನು ಅನುವಾದಿಸಿರುವ ಮೇಳ ಗೀತಗಳಲ್ಲಿ ಮೂಲದ ಹೆಸರುಗಳು ಲಯವನ್ನು ಕೆಡಿಸುವಂತೆ ಕಂಡರೂ ಒತ್ತನ್ನು ಸರಿಯಾಗಿ ಹಾಕಿದರೆ ಅಷ್ಟು ತೊಂದರೆಯಾಗುವುದಿಲ್ಲ. ಮತ್ತೊಂದು ಮಾತು, ಪಾತ್ರಗಳು ಆಡುವ ಮಾತುಗಳಿಗಿಂತ ಮೇಳಗಳು ಹೇಳುವ ಹಾಡುಗಳು ಅನುವಾದಕ್ಕೆ ಕಷ್ಟ. ನಮ್ಮಲ್ಲಿ ಸಿಕ್ಕುವ ಛಂದೋ ರೂಪಗಳಲ್ಲಿ ಕೆಲವನ್ನು ಬಳಸಿಕೊಂಡು, ಅನೇಕಸಲ ಮೂಲದಿಂದ ಕೊಂಚ ದೂರಸರಿದು ಈ ಹಾಡುಗಳನ್ನು ಕನ್ನಡಿಸಿದ್ದೇನೆ. ಇವುಗಳ ನಡಿಗೆಯಲ್ಲಿ ಕಾಣುವ ವೈವಿಧ್ಯ ಕೂಡ ನನ್ನ ನಾಟಕ ಪ್ರಜ್ಞೆಯನ್ನು ಅವಲಂಬಿಸಿದೆಯಲ್ಲದೆ, ಗ್ರೀಕ್ ಮೂಲದಲ್ಲಿರಬಹುದಾದ ವೈವಿಧ್ಯವನ್ನಲ್ಲ. ಒಂದೇ ಗತಿಯಲ್ಲಿ ಪದ್ಯಸಾಗಿದರೆ ಕೇಳುವವರ ಕಿವಿಯ ಚುರುಕು ಕಡಿಮೆಯಾಗುತ್ತದೆಂದು ಬೇರೆಬೇರೆ ಓಟದ ರೂಪಗಳನ್ನು ಬಳಸಿದ್ದೇನೆ. ಆ ಮೇಳಗೀತೆಗಳ ಮುಖ್ಯೋದ್ದೇಶಕ್ಕೆ ಚ್ಯುತಿ ಬಂದಿರಲಾರದೆಂದು ನನಗನ್ನಿಸಿದೆ.

ಗ್ರೀಕ್ ಗೊತ್ತಿಲ್ಲದ ನಾನು ಕೆಲವು ಇಂಗ್ಲಿಷ್ ಭಾಷಾಂತರಗಳನ್ನು ಬಳಸಿ ಈ ರೂಪಗಳನ್ನು ಸಿದ್ಧಪಡಿಸಿದ್ದೇನೆ. ಸಾಫೋಕ್ಲಿಸ್ ಶೈಲಿಯ ಸೂಕ್ಷ್ಮತೆಯನ್ನು ನಿರ್ಲಕ್ಷಿಸಿದವರು, ತೀರಾ ಸೂಕ್ಷ್ಮವಾಗಿ ಅನುವಾದಿಸಲೆತ್ನಿಸಿ ನಾಟಕತ್ವ ನಿರ್ಲಕ್ಷಿಸಿದವರು, ಗದ್ಯದಲ್ಲಿ ಅನುವಾದಿಸಲು ಹೋಗಿ ಕೆಟ್ಟ ಗದ್ಯದಲ್ಲಿ ಎಲ್ಲವನ್ನೂ ಹೇಳಲೆತ್ನಿಸಿದವರು, ತೀರಾ ನಿರ್ಗಳವಾಗಿ ಹೇಳಿ ಭಾವಗೀತಾತ್ಮಕತೆ ಮುಟ್ಟಿನವರು—ಹೀಗೆ ಭಾಷಾಂತರಗಳ ಹಲವಾರು ತಪ್ಪುಗಳಿಗೆ ಸಾಫೋಕ್ಲಿಸ್ ಗುರಿಯಾಗಿದ್ದಾನೆ. ನಾನು ಮುಖ್ಯವಾಗಿ—ಫೇಬರ್ ಪ್ರಕಾಶನದ ಡಡ್ಲಿ ಫಿಟ್ಸ್ ಮತ್ತು ರಾಬರ್ಟ್ ಫಿಟ್ಜರಲ್ಡ್ ಮಾಡಿದ್ದು, ಮಾಡರ್ನ್ ಲೈಬ್ರರಿಯವರ ಆರ್.ಸಿ. ಜೆಬ್ ಅವರ ಗದ್ಯಾನುವಾದ, ಪೆಂಗ್ವಿನ್‌ನವರು ಪ್ರಕಟಿಸಿರುವ ಇ.ಎಫ್. ವ್ಯಾಟ್ಲಿಂಗ್ ಅವರ ಅನುವಾದ, ಮೆಂಟಾರ್ ಬುಕ್ಸ್ ಪ್ರಕಾಶನದ ಜೆ.ಟಿ. ಶೆಪರ್ಡ್ ಮತ್ತು ಮೆಂಟಾರ್ ಕ್ಲಾಸಿಕ್ಸ್‌ನಲ್ಲಿ ಪ್ರಕಟವಾದ ಪಾಲ್ ರಾಶ್ ಅವರ ಅನುವಾದ—ಇಷ್ಟನ್ನು ನೋಡಿ ಪಾತ್ರ, ಸಂದರ್ಭಗಳ ತುಡಿತ ಗೊತ್ತುಹಚ್ಚಲು ಯತ್ನಿಸಿದ್ದೇನೆ; ಶ್ರೀ ಕ.ವೆಂ. ರಾಘವಾಚಾರ್ಯ ಅವರು ಮಾಡಿರುವ ಅನುವಾದಗಳು ನನಗೆ ಅಲ್ಲಲ್ಲಿ ನೆರವಾಗಿವೆ.

ಒಂದು ಸಂದರ್ಭದಲ್ಲಿ ಮಾತ್ರ ನಾನು ತೆಗೆದುಕೊಂಡ ಸ್ವಾತಂತ್ರ್ಯ ಒಪ್ಪಿಕೊಳ್ಳ



ಶೂದ್ರ

ಬೇಕು. 'ಅಂತಿಗೊನೆ'ಯ ಪ್ರೇಮವನ್ನು ಕುರಿತ ಮೇಳಗೀತೆ ಆದ ಮೇಲೆ ಅಂತಿಗೊನೆ ಪ್ರವೇಶಿಸಿ ಮೇಳದೊಂದಿಗೆ ಲಯಬದ್ಧ ಕಾವ್ಯಶೈಲಿಯಲ್ಲಿ ಮಾತಾಡುತ್ತಾಳೆ — ಕ್ರೆಯಾನ್ ಪ್ರವೇಶದವರೆಗೆ. ನಾನು ಅವಳ, ಮೇಳದ ಬಳಕೆಗಾಗಿ ರಚಿಸಿದ ಪದ್ಯಗಳು ಸರಿಯಾಗಿ ಕಾಣಲಿಲ್ಲ — ಕೇಳಲಿಲ್ಲ — ಎಂದು ಮುಕ್ತ ಕಾವ್ಯಶೈಲಿಯಲ್ಲಿ ಮಾತಾಡಿಸಿದ್ದೇನೆ; "ಮಗನ ಶವ ಹೊತ್ತು ಕ್ರೆಯಾನ್ ಪ್ರವೇಶಿಸಿ" ಕ್ರೆಯಾನ್, ಮೇಳ ಮತ್ತು ದೂತ ಕಾವ್ಯ ಶೈಲಿಯಲ್ಲಿ ಮಾತಾಡುತ್ತಾರೆ - ಹಾಗೇ ಅನುವಾದಿಸಲು ಯತ್ನಿಸಿದ್ದೇನೆ. ಈ 'ಅಂತಿಗೊನೆ' ಈಗತಾನೇ ಸಿದ್ಧವಾಗಿ ರಂಗದ ಪರೀಕ್ಷೆಗೆ ಒಳಪಟ್ಟಿಲ್ಲವಾದ್ದರಿಂದ ಇದರಲ್ಲಿ ಯಾವುದು ಸಮರ್ಥನೀಯ ಎಂದು ನಿರ್ಧರಿಸುವುದು ನನಗೆ ಕಷ್ಟವಾಗಿದೆ.

ಗ್ರೀಕ್ ನಾಟಕದ ಮಟ್ಟಿಗಂತೂ ಕರಾರುವಾಕ್ಕಾಗಿ ಮೂಲದ ಅರ್ಥಕ್ಕೆ ಮಾತ್ರ ಪ್ರಾಮಾಣಿಕವಾಗಿರಬಲ್ಲ ಅನುವಾದ ಅನುವಾದವೇ ಅಲ್ಲ. ಯಾಕೆಂದರೆ ಈ ನಾಟಕದ ಲಯ, ರೂಪವೇ ಅದರ ಸ್ವಾರಸ್ಯ ಮತ್ತು ಅರ್ಥವಂತಿಕೆ ಎರಡೂ ಆಗಿರುತ್ತವೆ. ಅವನ್ನು ಹಿಡಿಯಬಲ್ಲವ ಮಾತ್ರ ಗ್ರೀಕ್ ನಾಟಕದ ಹೇಳಿಕೆಗೆ ಕಿವಿಗೊಟ್ಟಿದ್ದಾನೆ— ಮತ್ತು ಕೇಳುವಂತೆ ಮಾಡುತ್ತಾನೆ. ನನ್ನ ಈ ಪ್ರಯತ್ನ ಎಷ್ಟು ಸಫಲವೋ ನೋಡಿದವರು ಹೇಳಬೇಕು.

## "ಅವಧೇಶ್ವರಿ"-ಒಂದು ವಿಶ್ಲೇಷಣೆ

— ಯಂ. ಹರಿನಾರಾಯಣ ಆಚಾರ್ಯ

"ಅವಧೇಶ್ವರಿ" ಶಂಕರ ಮೊಕಾಶಿ ಪುಣೇಕರ್‌ರವರ ಒಂದು ಮಹತ್ವಪೂರ್ಣ ಕಾದಂಬರಿಯಾಗಿದೆ. ವೇದಕಾಲೀನ ಕಥೆಯೊಂದನ್ನಾಧರಿಸಿರುವ ಇದು ಒಂದು ರಾಜಕೀಯ ಕಾದಂಬರಿ ಎಂದು ಕರೆಯಲ್ಪಟ್ಟಿದೆ. ಆದರೆ ಕಾದಂಬರಿಯ ಕಥೆಯ ಸಂದರ್ಭದಲ್ಲಿ ರಾಜಕೀಯವು ಒಂದು ರಾಜ್ಯದ ಉಳಿವಿನ ಪ್ರಕ್ರಿಯೆಯಾಗಿರುವುದರಿಂದ ಮತ್ತು ರಾಜ್ಯದ ಉಳಿವಿನೊಂದಿಗೆ ಒಂದು ವಂಶದ ಉಳಿವೂ ಗಾಢವಾಗಿ ಬೆಸೆದುಕೊಂಡಿರುವುದರಿಂದ ಈ ಕಾದಂಬರಿಯ ಸಂದರ್ಭದಲ್ಲಿ 'ರಾಜಕೀಯ' ಎನ್ನುವ ಪದವು ಹೆಚ್ಚು ಸಮಗ್ರವಾದ ಅರ್ಥವನ್ನು ಹೊಂದಿದೆ. ಇತಿಹಾಸಪೂರ್ವ ಕಥೆಯೊಂದು ಆಧುನಿಕ ಮನಸ್ಸೊಂದರಿಂದ ನೋಡಲ್ಪಟ್ಟಾಗ ಹೊಂದಬಹುದಾದ ಎಲ್ಲಾ ಬದಲಾವಣೆಗಳೊಂದಿಗೆ "ಅವಧೇಶ್ವರಿ"ಯು ಒಂದು ರಾಜ್ಯದ ಮತ್ತು ಒಂದು ವಂಶದ ಉಳಿವಿನ (survival) ಹೋರಾಟದ ಕಥೆಯೇ ಆಗಿದೆ. ಕಾದಂಬರಿಯು ಈ ಉಳಿವಿನ ಹೋರಾಟದ

---

ಯಂ. ಹರಿನಾರಾಯಣ ಆಚಾರ್ಯ, ಇಂಗ್ಲಿಷ್ ಉಪನ್ಯಾಸಕರು, ಶ್ರೀ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜು, ರಾಮಕುಂಜ ಪೋಸ್ಟ್, (ವಯಾ) ಉಪ್ಪಿನಂಗಡಿ, ದಕ್ಷಿಣ ಕನ್ನಡ

ಪ್ರೇರಕ ಶಕ್ತಿಗಳನ್ನು ಹಾಗೂ ಹೋರಾಟದ ಪ್ರಕ್ರಿಯೆಯನ್ನು ಆಳವಾಗಿ ವಿಶ್ಲೇಷಿಸುತ್ತದೆ. ನಮ್ಮ ಇತಿಹಾಸದ ಹಿನ್ನೆಲೆಯಲ್ಲಿರುವ, ಉಳಿವಿನ ಒಂದು ಮೂಲಭೂತ ಸಮಸ್ಯೆಯಾಗಿರುವ ಈ ಕಥೆಯು, ಸಾವಿರಾರು ವರ್ಷಗಳನ್ನು ದಾಟಿ ಬಂದಿರುವಂತಹ, ಉಳಿವಿನ ಸಹಜ ಸವಾಲುಗಳನ್ನು ಗೆದ್ದು ಬಂದು ಬೇರೆಯೇ ಸಮಸ್ಯೆಗಳನ್ನು ಎದುರಿಸುತ್ತಿರುವ ನಮ್ಮ ಮೇಲೆ ನಮ್ಮ ಈಗಿನ ಸ್ಥಿತಿಯ ಮೇಲೆ ಮಾಡಿರುವ ವ್ಯಂಗ್ಯ ವ್ಯಾಖ್ಯೆಯಾಗಿದೆ.

"ಅವಧೇಶ್ವರಿ" ಕಾದಂಬರಿಯು ಒಂದು ರಾಜ್ಯದ ಹಾಗೂ ಒಂದು ವಂಶದ ಅಥವ ಕುಟುಂಬದ ಉಳಿವಿನ ಪ್ರಕ್ರಿಯೆಯನ್ನು ಮತ್ತು ಅದರ ಪ್ರೇರಕ ಶಕ್ತಿಗಳನ್ನು ವಿಶ್ಲೇಷಿಸುತ್ತದೆ. ಈ ಪ್ರೇರಕಶಕ್ತಿಗಳಲ್ಲಿ ಮೊದಲನೆಯದು ಬಹಳ ಪ್ರಬಲವಾದ ಸ್ತ್ರೀ ಶಕ್ತಿ; ಎರಡನೆಯದು ಪುರುಷ ಪರಾಕ್ರಮ. ಯು.ಆರ್. ಅನಂತಮೂರ್ತಿಯವರು "ಒಡಲಾಳ" ಕಾದಂಬರಿಯನ್ನು ವಿಶ್ಲೇಸುತ್ತಾ ಹೇಳುತ್ತಾರೆ; ಯಾವ ರೀತಿ libido ಮನುಷ್ಯನ ಎಲ್ಲಾ ಚಟುವಟಿಕೆಗಳ ಪ್ರೇರಕ ಶಕ್ತಿಯಾಗಿದೆಯೋ ಅದೇ ರೀತಿ ಪಾಲನೆಯೂ ಒಂದು ತೀವ್ರವಾದ ಪ್ರೇರಕ ಶಕ್ತಿಯಾಗಿದೆ. ಉಳಿವನ್ನು ಸಾಧ್ಯವಾಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಈ ಪಾಲನಾ ಶಕ್ತಿಯನ್ನು ಪುರುಕುತ್ಸಾನಿಯು ಪ್ರತಿನಿಧಿಸುತ್ತಾಳೆ. ಅಣ್ಣ ಮತ್ತು ಗಂಡನಾಗಿರುವ ಪುರುಕುತ್ಸನು ಸುಖ ಲೋಲುಪನಾದಾಗ ಮತ್ತು ತನ್ನ ವಂಶದ ಹಾಗೂ ರಾಜ್ಯದ ಉಳಿವಿನ(survival) ಜವಾಬ್ದಾರಿಯನ್ನು ತ್ಯಜಿಸಿದಾಗ ಈ ಜವಾಬ್ದಾರಿ ಎಲ್ಲವೂ ಪುರುಕುತ್ಸಾನಿಯ ಮೇಲೆಯೇ ಬೀಳುತ್ತದೆ. ಪುರುಕುತ್ಸಾನಿಯು ಉಳಿವಿನ ಬಹಳ ಪ್ರಬಲ ಶಕ್ತಿಯಾಗಿರುವ ಸ್ತ್ರೀ ಶಕ್ತಿಯ ಪ್ರತೀಕವಾಗಿದ್ದಾಳೆ. ಪುರುಕುತ್ಸಾನಿಗೆ ಸರಿ, ತಪ್ಪುಗಳ ಗೊಡವೆ ಇಲ್ಲ. ತನ್ನ ರಾಜ್ಯದ ರಕ್ಷಣೆ ಹಾಗೂ ತನ್ನ ವಂಶದ ಮುಂದುವರಿಕೆ—ಇವು ಮಾತ್ರ ಪುರುಕುತ್ಸಾನಿಯ ಎಲ್ಲಾ ರಾಜಕೀಯ ಚಟುವಟಿಕೆಗಳನ್ನು ಪ್ರೇರೇಪಿಸುವ ಮುಖ್ಯ ಕಾಳಜಿಗಳಾಗಿವೆ. ಪುರುಕುತ್ಸಾನಿಯ ರಾಜ್ಯರಕ್ಷಣೆಯ ಹೋರಾಟಕ್ಕೆ ಪರಾಕ್ರಮದ ಲೇಪವಿಲ್ಲ. ತನ್ನ ಸುತ್ತ ಇರುವ ಕಾಲಿಯಾ ತಾರ್ಕ್ಷ್ಯರಂತಹ ಪುರುಷರನ್ನು ದಾಳಗಳನ್ನಾಗಿ ಬಳಸಿಕೊಂಡು ಆಕೆ ಹೂಡುವ ಚಾಣಾಕ್ಷ ತಂತ್ರಗಳೇ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ನೈತಿಕ ಎಚ್ಚರ ಆಕೆಯ ಚಟುವಟಿಕೆಗಳನ್ನು ಬಾಧಿಸುವುದಿಲ್ಲ. ಉಳಿಯುವಿಕೆಯ ಪ್ರಕ್ರಿಯೆಯ ತೀವ್ರತೆಯನ್ನು ಮಾತ್ರ ಆಕೆಯ ಚಟುವಟಿಕೆಗಳಲ್ಲಿ ಕಾಣಬಹುದು. ಈ ಉಳಿಯುವಿಕೆಯ ತೀವ್ರ ಕಾಳಜಿಯ ಜೊತೆಗೆ ಆಕೆಯ ಎಲ್ಲಾ ಯುದ್ಧಗಳ ಹಿಂದೆ ತನ್ನ ಲೈಂಗಿಕತೆಯ ತೃಪ್ತಿಯ ನಿರೀಕ್ಷೆ ಇದೆ. ದಶಾರ್ಣದ ರಾಜನಾದ ಭದ್ರಬಾಹುವಿನ ಕಿರಿಯ ರಾಣಿಯ ಮಗನಾದ ಕುಳ್ಳ ಭದ್ರಾಂಗು ಅಯೋಧ್ಯೆಯ ಮೇಲೆ ದಂಡೆತ್ತಿಬಂದು

ಪುರುಕುತ್ಸನನ್ನು ಅಪಹರಿಸಿದ ಮೇಲೂ ಆತ ಮತ್ತೆ ಅಯೋಧ್ಯೆಯ ಮೇಲೆ ದಾಳಿ ಮಾಡಿ ತನ್ನನ್ನು ಬಲವಂತವಾಗಿ ಮದುವೆಯಾದಾನೇ ಎನ್ನುವುದು ಪುರುಕುತ್ಸಾನಿಯ ನಿರೀಕ್ಷೆ. ತನ್ನ ರಾಜ್ಯದ ರಕ್ಷಣೆ ಮತ್ತು ತನ್ನ ಲೈಂಗಿಕತೆಯ ತೃಪ್ತಿ — ಇವು ಪುರುಕುತ್ಸಾನಿಯ ಎಲ್ಲಾ ಚಟುವಟಿಕೆಗಳ ಹಿಂದಿರುವ ಕಾಳಜಿಗಳಾಗಿವೆ. ಈ ಕಾಳಜಿಗಳನ್ನು ಹೊಂದಿರುವ ಆಕೆ ಉಳಿವಿನ ಪ್ರಬಲ ಪ್ರೇರಕ ಶಕ್ತಿಯಾದ ಸ್ತ್ರೀ ಶಕ್ತಿಯ ಪ್ರತೀಕವಾಗಿದ್ದಾಳೆ.

ಉಳಿವಿನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಇನ್ನೊಂದು ಮುಖ್ಯ ಪ್ರೇರಣೆ ಪುರುಷಶಕ್ತಿ. ಪುರುಕುತ್ಸಾನಿಯ ಮಗ ತ್ರಸದಸ್ಯು ಈ ಪುರುಷಶಕ್ತಿಯನ್ನು ಪ್ರತಿನಿಧಿಸುತ್ತಾನೆ. ಈ ಪುರುಷ ಶಕ್ತಿಯ ಮುಖ್ಯ ಗುಣ ಸ್ತ್ರೀಶಕ್ತಿಯಲ್ಲಿಲ್ಲದ ಪರಾಕ್ರಮ. ಆದರೆ ಇದರ ಜೊತೆಗೆ ಸ್ವವಿಮರ್ಶೆಯೂ ಅವಿಭಾಜ್ಯವಾಗಿ ಸೇರಿಕೊಂಡಿದೆ. ತ್ರಸದಸ್ಯು ಬಹಳ ದೊಡ್ಡ ಪರಾಕ್ರಮಿ. ಶಂಬರಾಸುರನನ್ನು ಆತ ಒಬ್ಬಂಟಿಯಾಗಿ ಬಾಧಿಸುತ್ತಾನೆ. ಆದರೆ ಪರಾಕ್ರಮಶೀಲತೆಯನ್ನು ಸಾಧ್ಯವಾಗಿಸುವ ಇಚ್ಛಾಶಕ್ತಿಯ ಬಳಕೆಯ ಹಿನ್ನೆಲೆಯಲ್ಲಿಯೇ ಸರಿ, ತಪ್ಪುಗಳ ಎಚ್ಚರವಿದೆ, ಕಾಳಜಿ ಇದೆ; ಸ್ವವಿಮರ್ಶೆ ಇದೆ. ಆದುದರಿಂದಲೇ ಕಾದಂಬರಿಯಲ್ಲಿ ಕಾಣುವ ಎಲ್ಲಾ ಪುರುಷ ಪಾತ್ರಗಳೂ existentialist anxietyಯನ್ನು ಅನುಭವಿಸುತ್ತವೆ. ಕಾಲಿಯಾ ತನ್ನ ತಂದೆಯಾದ ಪುರುಕುತ್ಸನ ತೃಪ್ತಿಗೋಸ್ಕರ ತನ್ನ ಖಾಸ ತಂಗಿಯೇ ಬಯ್ಯಲ್ಪಡುವುದನ್ನು ನೋಡಿದಾಗ, ದುರ್ಗಸಿಂಹನು ತನ್ನಿಂದಾಗಿ ತನ್ನ ದಾಸಿಯ ಕಾಲು ಮುರಿಯಲ್ಪಟ್ಟಿರುವುದನ್ನು ನೋಡಿದಾಗ ತಾರ್ಕ್ಷ್ಯ ತ್ರಸದಸ್ಯು ಕಾಶೀದೇಶದ ಕೋಟೆಯೊಳಗೆ ಸಿಲುಕಿಕೊಂಡಿರುವುದನ್ನು ಪುರುಕುತ್ಸಾನಿಗೆ ತಿಳಿಸಲು ಅಯೋಧ್ಯೆಗೆ ಹೋಗುತ್ತಿರುವಾಗ ಈ existentialist anxietyಯನ್ನು ಎದುರಿಸುತ್ತಾರೆ.

ಇದು ಕಾದಂಬರಿಯ ಪುರುಷಪಾತ್ರಗಳಿಗೇ ವಿಶಿಷ್ಟವಾದುದು. existentialist anxietyಯನ್ನು ಅನುಭವಿಸುವ ಏಕೈಕ ಸ್ತ್ರೀ ಪಾತ್ರ ಭದ್ರಬಾಹುವಿನ ಕಿರಿಯರಾಣಿ. ಗರ್ಭವತಿಯಾಗಿದ್ದ ತನಗೆ ವಿಷ ಉಣಿಸಿದ ದುರ್ಗಸಿಂಹನನ್ನು ಋಷಿಗಳ ಆಶ್ರಮದಲ್ಲಿ ನೋಡಿದಾಗ ಏನೂ ತಪ್ಪು ಮಾಡದ ತನ್ನ ಮಗ ಏಕೆ ಶಿಕ್ಷೆಯನ್ನನುಭವಿಸಬೇಕು ? ಎನ್ನುವ ಮೂಲಭೂತ ಪ್ರಶ್ನೆಯನ್ನು ಋಷಿಗಳ ಮುಂದಿಡುತ್ತಾಳೆ.

ಆದರೆ ಈ existentialist anxiety ಯನ್ನು ಅತೀ ತೀವ್ರವಾಗಿ ಅನುಭವಿಸುವವನು ತ್ರಸದಸ್ಯು. ವೃಷ್ಯಭಟ್ಟನು ತ್ರಸದಸ್ಯುವನ್ನು ಸಿಂಹಭಟ್ಟನ ಮಗನೆಂದು ಅಪಹಾಸ್ಯ ಮಾಡುವಾಗ ತ್ರಸದಸ್ಯುವಿಗೆ ತನ್ನ ಅಸ್ತಿತ್ವದ ಬಗೆಗಿನ ಮೂಲಭೂತ ಪ್ರಶ್ನೆಗಳು ಉದ್ಭವಿಸುತ್ತವೆ. — "ನಾನು ಯಾರು ?" ಇತ್ಯಾದಿ. ತ್ರಸದಸ್ಯುವನ್ನು

ಕಾಡುವ ಈ ಪ್ರಶ್ನೆಗಳು ಕೇವಲ ಸೈದ್ಧಾಂತಿಕ ಪ್ರಶ್ನೆಗಳಲ್ಲ. ಬದಲು ಅವು ಆತನ ವಾಂಶಿಕ ಅಸ್ತಿತ್ವದ ಬಗೆಗಿನ ಗೋಪ್ಯತೆಗಳಿಂದ ಪ್ರಾರಂಭವಾಗುವ ಪ್ರಶ್ನೆಗಳು. ಅವು ಅಂತಿಮವಾಗಿ ಆತನನ್ನು ಜೀವನದುದ್ದಕ್ಕೂ ಕಾಡುವ ಅಸ್ತಿತ್ವವಾದೀ ಪ್ರಶ್ನೆಗಳಾಗುತ್ತವೆ.

ಪುರುಕುತ್ಸಾನಿಯುದು ಸರಿ ತಪ್ಪುಗಳ ಗೊಡವೆ ಇಲ್ಲದೆ, ಕಾಳಜಿ ಇಲ್ಲದೆ ರಾಜ್ಯವನ್ನು, ತನ್ನ ಅಧಿಪತ್ಯವನ್ನು ಉಳಿಸಿಕೊಳ್ಳುವುದು ಮಾತ್ರ ಉದ್ದೇಶವಾದರೆ ತ್ರಸದಸ್ಯುವಿನದು ತನ್ನ ಪರಾಕ್ರಮದ ಕಾರಣದಿಂದ ತಾನು ಪಡೆದಿರುವ ಸ್ಥಾನದ ಸರಿತ್ವವನ್ನು ಮತ್ತು ತನ್ನ ಪರಾಕ್ರಮದ ಬಳಕೆಯ ಸರಿತ್ವವನ್ನು ದೃಢೀಕರಿಸಿಕೊಳ್ಳುವುದು ಉದ್ದೇಶವಾಗಿದೆ. ಪುರುಕುತ್ಸಾನಿಗೆ ನ್ಯಾಯ ಅನ್ಯಾಯದ, ಸರಿ ತಪ್ಪುಗಳ ಕಾಳಜಿ ಇಲ್ಲ. ತನ್ನ ಮತ್ತು ಸಿಂಹಭಟ್ಟನ ಸಂಬಂಧದ ಬಗ್ಗೆ ಆಕೆಗೆ ಯಾವುದೇ ಪಾಪ ಪ್ರಜ್ಞೆ ಇಲ್ಲ. ಮುಂದೆ ಕಾಶಿಯೊಂದಿಗಿನ ಯುದ್ಧಕ್ಕೆ ಅಣಿಯಾಗುವಾಗ ಆಕೆ ತನಗೆ ಲೈಂಗಿಕ ಸುಖವನ್ನು ಕೊಡುವಂತೆ ತಾರ್ಕ್ಷ್ಯನನ್ನು ಯಾವುದೇ ಅಳುಕಿಲ್ಲದೆ ಕೇಳುತ್ತಾಳೆ.

ತ್ರಸದಸ್ಯುವಿನದು ಇದಕ್ಕಿಂತ ಸಂಪೂರ್ಣ ವಿಭಿನ್ನ ನಡುವಳಿಕೆಯಾಗಿದೆ. ವೃಷ್ಯಭಟ್ಟನಿಂದ ನಡೆಸಲ್ಪಡುತ್ತಿದ್ದ ತನ್ನ ರಥವು ಮಗುವೊಂದನ್ನು ಗಾಯಗೊಳಿಸಿದಾಗ ನಿಷ್ಪಕ್ಷಪಾತ ರೀತಿಯಲ್ಲಿ ತಪ್ಪಿತಸ್ಥನಾರೆಂಬುದು ತೀರ್ಮಾನವಾಗಬೇಕೆಂದು ಬಯಸುತ್ತಾನೆ. ಈ ಚಿಕ್ಕ ತಪ್ಪಿನ ವಿಚಾರಣೆಗೋಸ್ಕರ ಕಾಶೀರಾಜನೇ ಬರಬೇಕಾಗುತ್ತದೆ. ನ್ಯಾಯದಕಾಳಜಿ ಇಲ್ಲದ, ಪುರುಕುತ್ಸಾನಿಗೆ ಇದೆಲ್ಲವೂ ಅನಗತ್ಯ ತೊಂದರೆಗಳಾಗಿ ಕಾಣುತ್ತವೆ. ತ್ರಸದಸ್ಯುವಿಗೆ ಮಾತ್ರ ಈ ನ್ಯಾಯ ತೀರ್ಮಾನ ಬಹಳ ಪ್ರಮುಖವಾದ, ತನ್ನ ನೈತಿಕತೆಯ ಸತ್ಯತೆಯ ಪರೀಕ್ಷೆಯಾಗುತ್ತದೆ. ಮತ್ತು ಈ ನ್ಯಾಯ ತೀರ್ಮಾನವನ್ನು ಒತ್ತಾಯಿಸಿದ ತನ್ನ ಕ್ರಿಯೆಯ ಔಚಿತ್ಯದ ಬಗ್ಗೆಯೂ ಅವನಿಗೆ ಗೊಂದಲವಿದೆ. ಈ ವಿಚಾರಣೆಯನ್ನು ತಾನು ಒತ್ತಾಯಿಸಿರುವುದರ ಹಿಂದೆ ತನ್ನನ್ನು ಹೀಯಾಳಿಸುವ ವೃಷ್ಯಭಟ್ಟನನ್ನು ಶಿಕ್ಷಿಸುವ ಪರೋಕ್ಷ ಉದ್ದೇಶವೂ ಇದೆಯೋ ಏನೋ ಎಂಬಿತ್ಯಾದಿ ಸಂಶಯಗಳು ಆತನನ್ನು ಕಾಡುತ್ತವೆ. ತ್ರಸದಸ್ಯುವಿನexistentialist anxietyಯು ಈ ರೀತಿ ಸ್ವಪ್ರಜ್ಞೆಯಾಗಿ, ಆತ್ಮನಿರೀಕ್ಷೆಯಾಗಿ ಪ್ರಕಟಗೊಳ್ಳುತ್ತದೆ. ತನ್ನ ವಾಂಶಿಕ ಅಸ್ತಿತ್ವದ ಬಗೆಗಿನ, "ತಾನು ಯಾರು ?" ಎನ್ನುವ ತ್ರಸದಸ್ಯುವಿನ ಪ್ರಶ್ನೆಯು ಆತನ ಸ್ವವಿಮರ್ಶೆಯ ಅತ್ಯುನ್ನತ ಸ್ತರವಾಗಿದೆ.

ಈ ರೀತಿ ಯಾವುದೇ ನೈತಿಕ ಕಾಳಜಿ ಇಲ್ಲದ, ಆದರೆ ಬಹಳ ಪ್ರಬಲವಾದ ಸ್ತ್ರೀ ಶಕ್ತಿ ಮತ್ತು ಸ್ವಪ್ರಜ್ಞೆಯಿಂದ ಕೂಡಿದ ಪುರುಷ ಪರಾಕ್ರಮಗಳ ನಡುವಿನ ಮುಖಾಮುಖಿಯಾಗಿ ಅಯೋಧ್ಯೆಯ ರಾಜವಂಶದ ಮತ್ತು ರಾಜ್ಯದ ಉಳಿವಿನ ರಾಜಕೀಯ

ಹೋರಾಟವು ಪ್ರಕಟಗೊಳ್ಳುತ್ತದೆ. ಈ ಮುಖಾಮುಖಿಯಲ್ಲಿ ಪುರುಕುತ್ಸಾನಿಯೇ ಹೆಚ್ಚು ಪ್ರಬಲಳಾಗಿರುವಂತೆ ತೋರುತ್ತದೆ. ತನಗರಿವಿಲ್ಲದೆಯೇ ಪುರುಕುತ್ಸಾನಿಯ ತಂತ್ರ ಜಾಲದಲ್ಲಿ ತಾನು ದಾಳದಂತೆ ಬಳಸಲ್ಪಡುತ್ತಿರುವ ಸಂಶಯ ಬಂದಾಗ ತ್ರಸದಸ್ಯು ಅಸಹನೀಯನಾಗುತ್ತಾನೆ. ಬದುಕಿನ ಉಳಿಯುವಿಕೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಲೇ ತಾನು ಅರ್ಧದೇವನಾಗಿರುವ ಕನಸು ಕಾಣುತ್ತಾ ತನ್ನ ಹುಟ್ಟಿನ ವಾಸ್ತವಿಕ ಸತ್ಯದಿಂದ ಕುಟುಕಿಸಲ್ಪಡುವ ತ್ರಸದಸ್ಯುವಿನ ಚಿತ್ರಮಾತ್ರ ಅಸ್ತಿತ್ವವಾದವು ಹೇಳುವ human situationನ ಬಹಳ ಮಾರ್ಮಿಕ ಅಭಿವ್ಯಕ್ತಿಯಾಗಿದೆ. ನಕ್ಷತ್ರಗಳನ್ನು ನಿರೀಕ್ಷಿಸುತ್ತಲೇ ಚೇಳುಗಳಿಂದ ಕುಟುಕಿಸಲ್ಪಡುತ್ತಿರುವ ಆನೆಯು ಈ human situationಗೆ ಬಹಳ ಗಾಢವಾದ ಪ್ರತಿಮೆಯಾಗಿದೆ. ಮತ್ತು ತ್ರಸದಸ್ಯುವಿನ ಈ ತೊಳಲಾಟ ಮಾತ್ರ ಇಂದಿಗೂ ಸತ್ಯವಾಗಿದೆ.

"ಅವಧೇಶ್ವರಿ"ಯು ಈ ಮಾನಸಿಕ ತೊಳಲಾಟಗಳನ್ನು ಚಿತ್ರಿಸಿದರೂ ಅಂತಿಮವಾಗಿ ಅದು ಒಂದು ರಾಜ್ಯದ ಮತ್ತು ವಂಶದ ಉಳಿಯುವಿಕೆಯ ಹೋರಾಟದ ವಿಜಯದ ಕಥೆಯಾಗಿದೆ. ಪುರುಕುತ್ಸಾನಿಯ ತಂತ್ರ ಮತ್ತು ತ್ರಸದಸ್ಯುವಿನ ಪರಾಕ್ರಮ–ಇವೆರಡೂ ಒಟ್ಟು ಸೇರಿ ಕಾಶೀ ರಾಜ್ಯವನ್ನು ಹೈಹಯರಿಂದ ಮತ್ತು ಧಿಯೋದಾಸನಿಂದ ಬಿಡುಗಡೆಗೊಳಿಸುವಲ್ಲಿ ಯಶಸ್ವಿಯಾಗುತ್ತವೆ. ಅಯೋಧ್ಯೆಯು ಜಯಶಾಲಿಯಾಗುತ್ತದೆ. ಬದುಕಿನ ಪ್ರವಾಹದ ಹಿನ್ನೆಲೆಯಲ್ಲಿಯೇ ತ್ರಸದಸ್ಯುವಿನ ಅಸ್ತಿತ್ವವಾದೀ ಪ್ರಶ್ನೆಗಳು ಮಿನುಗುತ್ತವೆ. ಬದುಕಿನ ಪ್ರವಾಹದ ಗತಿಯನ್ನು ನೈತಿಕವಾಗಿ ವೀಕ್ಷಿಸುತ್ತಾ existentialist anxietyಯನ್ನು ಅನುಭವಿಸುವ ತ್ರಸದಸ್ಯು ಮುಂತಾದವರು ಸಾವಿರಾರು ವರ್ಷಗಳ ಕಾಲ ಉಳಿಯುವಿಕೆಗೋಸ್ಕರ ಹೋರಾಡಿಬಂದಿರುವ ನಮ್ಮ ಇತಿಹಾಸದ ಒಂದು ದಂಡೆಯಲ್ಲಿದ್ದಾರೆ. ಉಳಿಯುವಿಕೆಯ ಸಹಜ ಸವಾಲುಗಳನ್ನು ಗೆದ್ದು ಇತಿಹಾಸದ ಇನ್ನೊಂದು ದಂಡೆಯಲ್ಲಿರುವ, ಅಸ್ತಿತ್ವದ ನಿರರ್ಥಕತೆಯನ್ನು ಅನುಭವಿಸುತ್ತ existentialist anxietyಯನ್ನು ಎದುರಿಸುತ್ತಿರುವ ನಮ್ಮ ಈಗಿನ ಸ್ಥಿತಿಯ ಮೇಲೆ "ಅವಧೇಶ್ವರಿ"ಯು ಒಂದು ಗಂಭೀರ, ವ್ಯಂಗ್ಯವ್ಯಾಖ್ಯೆಯಾಗಿದೆ.

ಓದಿ: **ಶೃಂಗಾರ ಲಹರಿ**
**ಪ್ರೊ|| ಎಂ.ಎಚ್. ಕೃಷ್ಣಯ್ಯ**

# ಕೊಳಲುಗಳು

ನಿನ್ನ ಕೊಳಲು
ಬಲಿಷ್ಠ ಗೂಳಿಯ ತೊಡೆ ಮೂಳೆಯಲಿ ಕೊರೆದು
ಬಿಸಿಲ ಬಿರುಸಿಗೆ ಬರಡಾದ ಗುಡ್ಡದ ಬದಿಯಲ್ಲಿ
ಹೊಳಪ ಪಡೆದದ್ದು

ಗಾಳಿಯಲಿ ತೂರಾಡುವ ಬಿದಿರು ಮೆಳೆಯನು ಕಡಿದು
ಹುಣ್ಣಿಮೆಯ ಬಟ್ಟಲಿಗೆ ಬಾಯಿಟ್ಟು ಕನಸು ಕಾಣುತ್ತಾ
ಅಡ್ಡಾದಿಡ್ಡಿ ಹರಿವ ಹಳ್ಳದ ದಡದಿ
ಕೊರೆದು ಮಾಡಿದ್ದು
ಅವನ ಕೊಳಲು.

ನುಡಿಸುತ್ತೀರಿ ಜತೆಯಾಗಿ ಮುಸ್ಸಂಜೆ ಹೊತ್ತಲ್ಲಿ
ಮುಗಿಲ ತೀರವ ತೊರೆದು ಹೊರಟ ತೆಪ್ಪವ ಹಿಡಿದು
ಮರೆಯಾಗದಂತೆ ತಡೆವುದಕ್ಕೆಂಬಂತೇ
ನುಡಿಸುತ್ತೀರಿ ಜತೆಯಾಗಿ ಮುಸ್ಸಂಜೆ ಹೊತ್ತಲ್ಲಿ.

ಆದರೆ, ದುಗುಡ ತುಂಬಿದ ನಿನ್ನ ಸ್ತೋತ್ರಗಳು
ತಲುಪೀತೆ ವಾಯುದೇವತೆಗಳಿಗೆ, ಭೂ ದೇವತೆಗಳಿಗೆ
ವನದೇವತೆಗಳಿಗೆ, ಮರಳದೇವತೆಗಳಿಗೆ; ಹೇಳು ಮತ್ತೆ ?

ಮರುಭೂಮಿಯತ್ತ ಓಡೋಡಿ
ಹಿಂತಿರುಗಿ ಮತ್ತೆ, ಜಗಿಯುತ್ತ ಅತ್ತ ಇತ್ತ
ಹಸಿವು ದಾಹದಿ ಸೋತು ಸುಸ್ತಾಗಿ

ಹಣ್ಣೂ ಹೆರದ, ಎಲೆಯೂ ಹೊರದ
ನೆರಳನ್ನೂ ಕಳೆದುಕೊಂಡ
ಬೋಳು ಮರದಡಿ ಬಂದು ದೊಪ್ಪನೆ ಬೀಳುವ
ಹುಚ್ಚು ಗಾಳಿಯ ನೆನಪ ನುಡಿಸುತ್ತದೆ
ನಿನ್ನ ಕೊಳಲು.

ಹಾದು ಹೋಗುವ ಹಕ್ಕಿಯ ಭಾರಕ್ಕೇ
ಬಗ್ಗಿ ಕುಗ್ಗುವ ಬಿದಿರು–

---

ಅನು: ಮಮತಾ. ಜಿ. ಸಾಗರ, ನಂ. 13, 'ಅಶ್ವಿನಿ', ಕೆನರಾ ಬ್ಯಾಂಕ್ ಕಾಲೋನಿ, 10ನೇ ಕ್ರಾಸ್,
3ನೇ ಬ್ಲಾಕ್, ಈಸ್ಟ್, ಜಯನಗರ–560 011

ಮಂಗುವಿನ ಕೈಗೆ ಸಿಕ್ಕು ಬಂಧಿಯಾಗಿ
ಪಟಪಟನೆ ರೆಕ್ಕೆ ಬಡಿವ ಹಕ್ಕಿಯಲ್ಲ;
ಅದು ಗುಂಪಿಂದ ಹೊರ ಬಂದ ಒಂಟಿಹಕ್ಕಿ.
ಕೆಳಗೆ ಓಡುವ ನೀರಲ್ಲಿ ತನ್ನ ಬಿಂಬವ ಕಂಡು
ನೋವ ಮರೆಯುವ ಹಕ್ಕಿಯ ನೆನಪ ನುಡಿಸುತ್ತದೆ
ಅವನ ಕೊಳಲು.

ನುಡಿಸುತ್ತೀರಿ ಜತೆಯಾಗಿ ಮುಸ್ಸಂಜೆ ಹೊತ್ತಲ್ಲಿ
ನೋವು ತುಂಬಿದ ನಿನ್ನ ರಾಗಗಳಲ್ಲಿ
ಪರದೇಶಿಯಂತೆ
ತಾವು ಕಳೆದು ಕೊಂಡ ಭೂತಕಾಲಗಳಿಗಾಗಿ
ಹಾತೊರೆಯುತ್ತವೆ
ನಿಮ್ಮಿಬ್ಬರ ಕೊಳಲು.

— ಜೀನ್ ಜೋಸೆಫ್ ಲ್ಯಬೋರಿಯೋ

## ಫರ್ಮಾನ (ಜೀವನಾಡಿ)

ಹೇಳಲಿಲ್ಲ ಅಂದೀರಿ–ಕೇಳಲಿಲ್ಲಾ ಅಂದೀರಿ
ಈ ಮೂಲಕ ಯುಕ್ತ ಜನರಿಗೆ
ತಿಳಿಸುವುದೇನೆಂದರೆ–

ಯಾವ ಮನೆಯಲ್ಲೂ ಒಲೆ ಹಚ್ಚಬಾರದು
ಎಲ್ಲೋ ಬೆಂಕಿ ಕಾಣಿಸಿದರೂ ಪ್ರಭುತ್ವಕ್ಕೆ
ಅಪಾಯವಾಗುವ ಸಂಭವ–ಇರೋದರಿಂದ
ಯಾವ ಮನೆಯಲ್ಲೂ ಒಲೆ ಹಚ್ಚಬಾರದು.

ಯಾರೂ ಜೋರಾಗಿ ಉಸಿರಾಡಬಾರದು
ಉಸಿರಾಟದ ತಿದಿಗಳು ವಿದ್ರೋಹದ ಭಾವನೆಗಳನ್ನು
ಬಡಿದೆಬ್ಬಿಸುವ ಸಂಭವ ಇರೋದರಿಂದ
ಯಾರೂ ಜೋರಾಗಿ ಉಸಿರಾಡಬಾರದು.

ಯಾರೂ ನೀರು ಕುಡಿಯಬಾರದು
ರಾಜವಿರೋಧಿ ಭಾವನೆಗಳು

ತೆಲುಗಿನಿಂದ : ಜ.ವಿ. ಪೆಂಡಕೂರ್, ರಾಮನಗರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ

ಹಳ್ಳ ಕೊಳ್ಳಗಳ ಮೂಲಕ
ಜಲಾಶಯಗಳನ್ನು ಸೇರುವ ಸಂಭವ ಇರೋದರಿಂದ
ಯಾರೂ ನೀರು ಕುಡಿಯಬಾರದು.

ಹೊಟ್ಟೆಗಿಲ್ಲದೆ ಸತ್ತರೆ ಪರವಾ ಇಲ್ಲ
ಆದರೆ ನಿರಾಹಾರ ದೀಕ್ಷೆ–ಅನ್ಯಾಯ
ಮತ್ತು ಅಪರಾಧ
ಅಪರ್ಶಕ್ಕಿಂತ ಮುಂಜಾಗರೂಕತೆಯೇ
ಒಳ್ಳೇದು
ಅದಕ್ಕಾಗಿ ಮುಂಜಾಗರೂಕತಾ ಪ್ರತಿಬಂಧ ಕಾನೂನು

ದೇಶವೆಂದರೆ ಜನರಲ್ಲ
ದೇಶವೆಂದರೆ ಪ್ರಧಾನಮಂತ್ರಿ
ದೇಶವೆಂದರೆ ಬೆಟ್ಟ ಗುಡ್ಡಗಳಲ್ಲ
ದೇಶವೆಂದರೆ ಪಾರ್ಟಿ
ಆಢಳಿತ ಪಾರ್ಟಿ–

ಪಾರ್ಟಿಗೆ ವಿಧೇಯನಾದವನೇ
ಪೇಟ್ರಿಯಟ್–ದೇಶಭಕ್ತ

ಸಮಾಜದ ಶ್ರೇಯಸ್ಸಿಗೇ ಆಗಲಿ
ಶಾಸನವನ್ನು ವಿರೋಧಿಸಿದವನು ವಿದ್ರೋಹಿ
ಧರ್ಮಕ್ಕಾಗಿಯೇ ಆಗಲಿ
ಸರಕಾರವನ್ನು ವಿರೋಧಿಸುವವನು ದೇಶದ್ರೋಹಿ
ಭಯೋತ್ಪಾದಕ.

ತಿಳಿಯಿತೆ? ತಿಳಿಯಿತೆ?
ಹೇಳಲಿಲ್ಲ ಅಂದೀರಿ–ಕೇಳಲಿಲ್ಲ ಅಂದೀರಿ

—ವರವರರಾವ್

(ಇದು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಬರೆದದ್ದು)

# ವಿಯೋಗ

**ಡಾ|| ಕರೀಗೌಡ ಬೀಚನಹಳ್ಳಿ**

ನಾನು ಬೆಂಗಳೂರಿನಿಂದ ನಮ್ಮೂರಿಗೆ ಹೋದಾಗ ಬಯಲುಸೀಮೆಯಲ್ಲಿ ಬೇಸಿಗೆ ಕಾಲ ಆರಂಭವಾಗಿ ಆಗಲೇ ಅನೇಕ ದಿನಗಳು ಕಳೆದಿದ್ದುವು. ಊರಲ್ಲೆಲ್ಲಾ ಬೇಸಿಗೆಯ ಧೂಳು ಆವರಿಸಿತ್ತು. ಗಾಳಿ ಒಂದೇ ಸಮನೆ ಬೀಸುತ್ತಿತ್ತು. ಆದರೂ ಬೇಸಿಗೆಯ ಸೂರ್ಯ ನೆಲಕ್ಕೆ ಕೆಂಡ ಕಕ್ಕುತ್ತಿದ್ದ. ಮರಗಿಡಗಳೆಲ್ಲಾ ಆಗತಾನೆ ಚಿಗುರುತ್ತಿದ್ದವು. ಮನೆಯಿಂದ ಹೊರಗೆ ಬಂದರೆ ಬಿಸಿಲು ಕಣ್ಣಿಗೆ ರಾಚುತ್ತಿತ್ತು. ಮನೆಯೊಳಗೆ ಕೂತರೆ ಸೆಕೆ, ಬೆವರು. ಮೂಲೆಯಲ್ಲಿ ಅವ್ವ ಮಲಗಿ ನರಳುತ್ತಿದ್ದಳು. ಅವಳ ಕೈ ಬಾವು ಅವಳ ಪ್ರಾಣ ಹಿಂಡುತ್ತಿತ್ತು. ಆಕೆಯ ದುಃಖ ಕೇಳುತ್ತಾ ಕೂತ ನನಗೆ ಅಲ್ಲಿ ಕೂರಲಾಗದೆ, ಮನೆಯಲ್ಲಿ ಬೇರೆ ಯಾರೂ ಕಾಣದಿದ್ದರಿಂದ ಹೊಲದತ್ತ ಹೊರಟೆ.

ನಿಮ್ಮ ಅವ್ವನಿಗೆ ಉಷಾರಿಲ್ಲವೆಂದೂ, ಆಕೆ ಬದುಕುವುದು ಗ್ಯಾರಂಟಿ ಇಲ್ಲವೆಂದೂ, ನೀನು ಕೂಡಲೇ ಬಂದು ನೋಡಿಕೊಂಡು ಹೋಗಬೇಕೆಂದೂ ನನಗೆ ಬಂದಿದ್ದ ಓಲೆ ತಿಳಿಸಿತ್ತು. ಹಾಗೂ, ಯಾರೋ ಹಿರಿಯರು, ಅನುಭವಸ್ಥರು ಕೂಡಲೇ ಬೆಂಗಳೂರಿಗೆ ಹೋಗಿ ದೊಡ್ಡಾಸ್ಪತ್ರೆಗೆ ತೋರಿಸಿದರೆ ನಿಮ್ಮ ಕಾಯಿಲೆ ಗುಣವಾದರೂ ಆಗಬಹುದೆಂದು ಅವ್ವನಿಗೆ ತಿಳಿಸಿದರಂತೆ. ಆದರೆ ಅಲ್ಲೇ ಯಾರೋ ಗಿಡಮೂಲಿಕೆ ಪಂಡಿತರೊಬ್ಬರು ಔಷಧಿ ಕೊಡುತ್ತಿದ್ದಾರೆಂದೂ, ಅವರಲ್ಲೇ ಅವರು ಆಕೆಯನ್ನು ಗುಣಪಡಿಸುವುದಾಗಿ ಖಾತ್ರಿ ನೀಡಿರುವರೆಂದೂ ಅದೇ ಓಲೆಯಲ್ಲಿ ತಿಳಿಸಿದ್ದರು.

ಆ ಓಲೆಯಿಂದ ಅವ್ವನ ಕಾಯಿಲೆ ಏನು ಎಂಬುದರ ಬಗ್ಗೆ ಸಾಕಷ್ಟು ವಿವರಗಳು ಇರದಿದ್ದರಿಂದ ಆಕೆಗೆ ಏನಾಗಿದೆ ಎಂದು ಒಂದು ಹೆಜ್ಜೆ ಊರಿಗೇ ಹೋಗಿ ನೋಡಿಕೊಂಡು ಬಂದುಬಿಡುವ ಎಂಬ ನಿರ್ಧಾರದಿಂದ ಒಂದುವಾರ ಕಛೇರಿಗೆ ರಜಾ ಹಾಕಿ ನಾನು ಊರಿಗೆ ಬಂದುದು.

ಮನೆಯಿಂದ ನಾನು ಹೊಲದತ್ತಿರ ಬಂದಾಗ ಮಧ್ಯಾಹ್ನದ ಸೂರ್ಯ ಪಡುವಣ ದಿಕ್ಕಿಗೆ ವಾಲಿದ್ದ. ಹೊಲದಲ್ಲಿ ಯಾರೋ ಐದಾರು ಜನ ಯುವಕರು ಇನ್ನೂ ಮರ ಕಡಿಯುತ್ತಿದ್ದರು. ಆಗಲೇ ಕಡಿದು ರಾಶಿ ಹಾಕಿದ್ದ ಕೆಲವು ಮರಗಳು ಮುಗಿಲೆತ್ತ

---

‘ಶೂದ್ರ’ ಏರ್ಪಡಿಸಿದ್ದ ಶ್ರೀ ಕೃಷ್ಣ ಆಲನಹಳ್ಳಿಯ ನೆನಪಿನ ‘ಸಂಕ್ರಾಂತಿ’ ಕಥಾ ಸ್ಪರ್ಧೆಯಲ್ಲಿ ಡಾ|| ಕರೀಗೌಡ ಬೀಚನಹಳ್ಳಿ ಹಾಗೂ ಡಾ|| ಅರವಿಂದ ಮಾಲಗತ್ತಿಯವರು ತಲಾ ಒಂದೊಂದು ಸಾವಿರದ ಬಹುಮಾನವನ್ನು ಪಡೆದಿದ್ದಾರೆ. ಬಹುಮಾನ ಪಡೆದ ಈ ಎರಡೂ ಕಥೆಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

—ಸಂ.

---

ಡಾ|| ಕರೀಗೌಡ ಬೀಚನಹಳ್ಳಿ, 31, ‘ಗಂಧವತಿ’, 80 ಅಡಿ ರಸ್ತೆ, 2ನೇ ಹಂತ, ಕೆಂಗೇರಿ ಉಪನಗರ, ಬೆಂಗಳೂರು-560 060

ರಕ್ಕೆ ಮಲಗಿದ್ದವು. ನಾನು ಹತ್ತಿರಕ್ಕೆ ಹೋಗಿ ನಿಂತಾಗ ಮರ ಕಡಿಯುತ್ತಿದ್ದವರೆಲ್ಲಾ ನನ್ನನ್ನು ನೋಡುತ್ತಿರಬೇಕಾದರೆ ಅವರಲ್ಲಿ ಒಬ್ಬ ಯುವಕ ತಲೆಎತ್ತಿ ನನ್ನನ್ನು ಯಾರು, ಏನು ಎನ್ನುವಂತೆ ನನ್ನ ಮುಖ ನೋಡಿದ. ನಾನು ಚಂದ್ರಣ್ಣನ ತಮ್ಮ ಎಂದು ಮಾತನ್ನು ಆರಂಭಿಸುತ್ತಿದ್ದಂತೆಯೇ "ಓ, ನೀವೇನಾ ಚಂದ್ರಣ್ಣನ ತಮ್ಮ. ಬೆಂಗಳೂರಿನಲ್ಲಿರೋರು...."ಎಂದ ಒಂದೇ ಉಸಿರಿಗೆ. ಆತನ ಮಾತಿನಿಂದ ಇನ್ನೊಬ್ಬ ತನ್ನ ತಲೆ ಎತ್ತಿ ನನ್ನ ನೋಡಿ "ಬನ್ನಿ ಸಾ. ಯಾವಾಗ ಬಂದ್ರಿ ?" ಎಂದು ಕೇಳಿದ. "ಮಧ್ಯಾಹ್ನ ಬಂದೆ" ಎನ್ನುತ್ತಾ ಕಡಿದು ಬಿದ್ದಿದ್ದ ಮರದ ದಿಮ್ಮಿಯ ಮೇಲೆ ಹೋಗಿ ಕೂರುತ್ತಾ "ಯಾವೂರ್ನೋರು ನೀವು ?" ಎಂದು ಪ್ರಶ್ನಿಸಿದೆ.

"ನಾವು ದುರ್ಗದ ಶಾ ಮಿಲ್ನೋರು" ಎಂದ ಅವರಲೊಬ್ಬ. "ಎಷ್ಟಕ್ಕೆ ಕೊಂಡು ಕೊಂಡ್ರಿ ಈ ಮರಗಳನ್ನೆಲ್ಲಾ" ಎಂದು ಆತನನ್ನು ಕೇಳಿದ್ದಕ್ಕೆ ಅವರಲ್ಲಿ ಮತ್ತೊಬ್ಬ "ಹದಿನೈದು ಸಾವಿರ ರೂಪಾಯಂತೆ" ಎಂದ. ಇನ್ನೊಬ್ಬ "ಹದಿನೈದಲ್ವಂತೆ ಕಣಲೇ, ಇಪ್ಪತ್ತು ಸಾವಿರ ಅಂತೆ" ಎನ್ನುತ್ತಾ ಆತನನ್ನು ದಬಾಯಿಸಿದ. "ಎಷ್ಟು ಲೋಡಾಗ್ತದೆ" ಎಂದು ಕೇಳಿದ್ದಕ್ಕೆ ಒಬ್ಬ "ಇಪ್ಪತ್ತೈದು" ಅಂದರೆ ಇನ್ನೊಬ್ಬ "ಮುವತ್ತೈದಾಗ್ತದೆ" ಅಂದ.

ಅವರಲ್ಲಿ ಒಬ್ಬ ಇದುವರೆಗೂ ನಾನು ಗಮನಿಸಿದಂತೆ ಮೌನವಾಗಿ ಮರ ಕಡಿಯುತ್ತಲೇ ಇದ್ದ. ಆತ ತನ್ನ ಏಟು ನಿಲ್ಲಿಸಿ "ಏನ್ ಕೆಲಸದಲ್ಲಿ ಇದ್ದೀರಿ ಸಾರ್, ಬೆಂಗಳೂರ್ನಲ್ಲಿ" ಎಂದು ಆಗ ನನ್ನ ಪ್ರಶ್ನಿಸಿದ. ಆತನಿಗೆ ಯಾಕೋ ನನ್ನ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿದ್ದಂತಿತ್ತು. ನಾನು ಇರುವ ನನ್ನ ಕೆಲಸದ ಬಗ್ಗೆ ಆತನಿಗೆ ಹೇಳಿದೆ. ಆತ ನನಗೆ ತಿಂಗಳಿಗೆ ಸಂಬಳ ಎಷ್ಟು ಬರುತ್ತದೆಂದು ಕೇಳಿದ. ನಾನು ಅದಕ್ಕೆ ಅವನಿಗೆ ಉತ್ತರಿಸಲು ಆಗದೆ ನನ್ನ ಕೆಲಸದ ಬಗ್ಗೆ ಇರುವ ಕೆಲವು ತೊಂದರೆಯ ಬಗ್ಗೆ ಆತನಿಗೆ ಹೇಳಿದೆ. ಆದರೆ ಅದು ಆತನಿಗೆ ಅರ್ಥವಾದಂತೆ ಕಾಣಲಿಲ್ಲ. "ನಿಮ್ಮಣ್ಣ ಮದುವೆ ಮಾಡಿಕೊಳ್ಳಿ ಅಂದ್ರೆ ನೀವು ಈಗಲೇ ಆಗೋದಿಲ್ಲ ಅಂತಾ ಇದ್ದೀರಂತೆ. ಯಾಕ್ ಸ್ವಾಮಿ ?" ಎಂದಾಗ ನನಗೆ ಆತನಿಗೆ ಏನು ಹೇಳಬೇಕೆಂಬುದು ತೋಚಲಿಲ್ಲ. ಅವರ ಮಾತಿನಿಂದ ಈಗಾಗಲೇ ನನ್ನ ಬಗ್ಗೆ ನನ್ನಣ್ಣ ಏನೇನೋ ಹೇಳಿರಬೇಕು ಎಂಬ ಅನುಮಾನ ಮಾತ್ರ ನನ್ನಲ್ಲಿ ಉಂಟಾಗಿತ್ತು.

"ಈ ಮರಗಳನ್ನೆಲ್ಲಾ ಯಾಕೆ ಈಗ ಮಾರಬೇಕಿತ್ತು ನಮ್ಮಣ್ಣ" ಎನ್ನುತ್ತಾ ವಿಷಯಕ್ಕೆ ಬಂದೆ.

ಅವರಲ್ಲೊಬ್ಬ "ಈ ಮರಗಳಿಂದ ಹೊಲದಲ್ಲಿ ಯಾವ ಬೆಳೆಯೂ ಆಗ್ತಿರಲಿಲ್ಲವಂತೆ ಸಾರ್. ಅದ್ಕೇ ಮಾರಿದ್ರಂತೆ ನಿಮ್ಮಣ್ಣ" ಎಂದ.

"ಬೆಳೆ ಆಗದೆ ಇರುವುದಕ್ಕೂ ಹೊಲದಲ್ಲಿ ಮರಗಳಿರುವುದಕ್ಕೂ ಏನು ಸಂಬಂಧ" ಎಂದೆ.

"ಸಂಬಂಧವಿದೆ ಸಾ. ಮರಗಳ ನೆರಳಿನಲ್ಲಿ ಯಾವ ಫಸಲೂ ಫಲಿಸುವುದಿಲ್ಲ. ಅವುಗಳ ನೆರಳು ಬೆಳೆಗೆ ಒಳ್ಳೆಯದಲ್ಲ" ಎಂದ ಒಬ್ಬ.

ಅವರ ತರ್ಕ ನನಗೆ ಒಂದೂ ಅರ್ಥವಾಗದೆ ಸುಮ್ಮನಾದೆ. ಅಷ್ಟರಲ್ಲಿ ಇನ್ನೊಬ್ಬ "ನಿಮ್ಮ ಅವ್ವಾರಿಗೆ ಈಗ ಹೇಗಿದೆ ಸಾರ್ ?" ಎಂದು ಕೇಳಿದ.

"ಹಾಗೇ ಇದೆ. ತುಂಬಾ ಬಾಧೆಯಂತೆ" ಅಂದೆ.

"ಅವತ್ತು ಅವರಾಗಿಯೇ ಅದ್ನ ಮಾಡಿಕೊಂಡ್ರು ಸಾರ್" ಎಂದ ಆತ.

ನನಗೆ ಮನೆಯಲ್ಲಿ ಆಗಲೇ ಅಪ್ಪ ತನ್ನ ನೋವಿನ ಬಗ್ಗೆ ಹೇಳಿದ್ದರೂ ಅವರ ಬಗ್ಗೆ ವಿವರ ಬಯಸಿದ್ದೆ. ನಾನು ಕುತೂಹಲದಿಂದ ಆತನನ್ನು ಹೇಗಾಯ್ತು? ಆಕೆಗೆ ಅವತ್ತು!" ಎಂದೆ.

"ಅದು ಅವತ್ತು ನಡೆದದ್ದು ಹೀಗೆ ಸಾ" ಎನ್ನುತ್ತಾ ಇನ್ನೊಬ್ಬ ಹೇಳಲು ಹೊರಟ. ಆದರೆ ಆತನನ್ನು ತಡೆದು ಇನ್ನೊಬ್ಬ "ನೀನು ಸುಮ್ನಿರ್ಲ; ನಾನೇಳ್ತೀನಿ. ನಿನಗೆ ಗೊತ್ತಾಗೋಲ್ಲ" ಎನ್ನುತ್ತಾ ವಿಷಯ ಹೇಳಿದ:

"ನೋಡಿ ಸಾರ್ ಅವತ್ತು ನಡೆದದ್ದು ಇಷ್ಟೆ: ನಿಮ್ಮಣ್ಣ ಈ ಮರಗಳನ್ನೆಲ್ಲಾ ಮಾರಿದ ವಿಷಯ ನಿಮ್ಮವ್ವನಿಗೆ ಗೊತ್ತಿರಲಿಲ್ಲವಂತೆ. ನಾವೆಲ್ಲಾ ಮರ ಕಡಿಯೋಕೆ ಬಂದ ದಿನ ಅವಳಿಗೆ ಗೊತ್ತಾಗಿ ಅವಳು 'ನಾನು ನೆಟ್ಟು ನೀರು ಹೂಯ್ದು ಸಾಕಿ ಬೆಳೆಸಿದ ಮರಗಳ ನನ್ನ ಕಣ್ಮುಂದೆ ಕಡಿಯಂಕ್ಕೆ ನಾನು ಬಿಡುವುದಿಲ್ಲ. ನೀವು ಅವುಗಳ ಕಡಿಯೋದಾದ್ರೆ ಮೊದ್ಲು ನನ್ನ ಕಡಿದು, ಆಮೇಲೆ ನನ್ನ ಮರಗಳನ್ನ ಕಡಿದುಕೊಂಡು ಹೋಗಿ, ಅಂತ ನಮ್ಮ ತಡೆದಳು. ಅಷ್ಟರಲ್ಲಿ ನಿಮ್ಮಣ್ಣ ಚಂದ್ರಣ್ಣ ಬಂದು 'ಬಾರವ್ವ ಇನ್ನು ಸಾಕು ನಿನ್ನ ಗೋಳು' ಅನ್ನುತ್ತಾ ಅವಳ ರಟ್ಟೆ ಹಿಡಿದು ಎಳೆದರು. ಆಗ ಅವರು ಎಳೆದ ಆ ರಭಸಕ್ಕೆ ನಿಮ್ಮಪ್ಪ ಮಾರುದ್ದ ಹೋಗಿ ಬಿದ್ದರು. ಅಷ್ಟೇ ನೋಡಿ, ಅವತ್ತು ನಡೆದದ್ದು".

ಇನ್ನೊಬ್ಬ "ಅವಳು ಬಿದ್ದದ್ದೇ ಒಂದು ನೆಪ ಆಯ್ತು ನೋಡಿ. ಅದೆಲ್ಲಿತ್ತೋ ಅವಳಿಗೆ ಕಾಯಿಲೆ ತೊಡಿಕೊತ್ತು ನೋಡಿ" ಎಂದ.

"ಅವಳು ಬಿದ್ದಾಗಲೇ ಆಕೆಯ ರಟ್ಟೆ ಮುರಿದಿರಬೇಕು" ಎಂದ ಮತ್ತೊಬ್ಬ. ಅವ್ವ ನೆಲಕ್ಕೆ ಬಿದ್ದು ವಿಲಿವಿಲಿ ಒದ್ದಾಡಿದ್ದನ್ನು ಕಣ್ಣಿಗೆ ಕಟ್ಟುವಂತೆ ಮಗದೊಬ್ಬ ಬಣ್ಣಿಸಿದ.

ಆಮೇಲೆ ಅವರು ಮರಗಳನ್ನು ಸುಗಮವಾಗಿ ಕಡಿಯುವುದಕ್ಕೆ ಆರಂಭಿಸಿ

ದ್ದನ್ನು ಆತ ತಿಳಿಸಿದ. ಕಳೆದ ಹದಿನೈದು ದಿನಗಳಲ್ಲಿ ನಡೆದುಹೋಗಿರುವ ಸಂಗತಿಗಳನ್ನೆಲ್ಲಾ ಅವರು ವಿವರಿಸುತ್ತಿದ್ದಾಗ ದುರ್ಗದ ಕಡೆಯಿಂದ ಅವರ ಯಜಮಾನ ಬರುತ್ತಿದ್ದದ್ದನ್ನು ಗುರುತಿಸಿದರು. ಆತ ಹತ್ತಿರ ಬರುತ್ತಲೇ ಅವರೆಲ್ಲರ ಮೇಲೆ ರೇಗಿದ. ಅವರೆಲ್ಲಾ ನಿಂತು ಸುಮ್ಮನೆ ಕಾಲ ಹರಣಮಾಡುತ್ತಿದ್ದಾರೆಂದೂ, ನನಗೆ ಏನೇನೋ ವಿಷಯವನ್ನೆಲ್ಲಾ ಹೇಳುತ್ತಿದ್ದಾರೆಂದೂ ಆತನಿಗೆ ಮನವರಿಕೆಯಾದಂತಿತ್ತು. ಆ ಕೂಲಿಯವರೆಲ್ಲಾ ಆಮೇಲೆ ಮರಕಡಿಯುವ ತಂತಮ್ಮ ಕೆಲಸದಲ್ಲಿ ತೊಡಗಿದರು.

ಆ ಸಣಕಲ ಯಜಮಾನ ನನ್ನನ್ನು ಗಮನಿಸಿದರೂ ಎಷ್ಟೋ ಹೊತ್ತಿನ ಮೇಲೆ ನನ್ನನ್ನು ಕಂಡವನಂತೆ "ಚಂದ್ರಣ್ಣನ ತಮ್ಮ ಅಲ್ಲವೆ ? ಯಾವಾಗ ಬಂದ್ರಿ ?" ಎಂದ. ನಾನು ಅಸಮಾಧಾನದಿಂದಲೇ "ಬೆಳಿಗ್ಗೆ, ಅಲ್ಲಾ ಮಧ್ಯಾಹ್ನ" ಎಂದೆ. "ದುರ್ಗದಲ್ಲಿ ನಿಮ್ಮಣ್ಣ ಚಂದ್ರಣ್ಣ ಮಧ್ಯಾಹ್ನ ಸಿಕ್ಕಿದ್ದ. ನಿಮ್ಮವ್ವನಿಗೆ ಔಷಧಿ ಹಾಕಿಸಲು ಕಣ್ಬಟ್ಟರ ಕರೆದುಕೊಂಡು ಬರೋದಿಕ್ಕೆ ಕೊಡಪತ್ರಿಗೆ ಹೋಗ್ತಾ ಇದ್ದಾ" ಎಂದವನೇ "ನಿಮ್ಮವ್ವನಿಗೆ ಈಗ ಹೇಗಿದೆ ?" ಅಂದ ಆತ.

ಅವನೊಡನೆ ಮಾತನಾಡಲು ನನಗೆ ಅಸಹ್ಯ ಅನ್ನಿಸಿದ್ದರಿಂದ ನಾನು ಅಸಹನೆಯಿಂದಲೇ "ಹಾಗೇ ಇದೆ" ಎನ್ನುತ್ತಾ ಕುಳಿತಲ್ಲಿಂದ ಎದ್ದು ಮನೆಕಡೆಗೆ ಹೆಜ್ಜೆ ಹಾಕಿದೆ.

ಅವ್ವ ನೆಟ್ಟು ಬೆಳೆಸಿದ ಆಕೆಯ ಮುದ್ದುಮರಗಳನ್ನೆಲ್ಲಾ ಅವರು ಕಡಿದು ರಾಶಿಗಟ್ಟಿದ್ದರು. ಸುಮಾರು ಹತ್ತು ಎಕರೆ ಖುಷ್ಕಿ ಹೊಲದಲ್ಲಿದ್ದ ವಿವಿಧ ಜಾತಿಯ ಮರಗಳನ್ನೆಲ್ಲಾ ನೆಲಸಮ ಮಾಡಿದ್ದರು ಆ ಜನ. ಸೋಮಾರಿ ಅಣ್ಣನ ಅಜ್ಞಾನದ ತಿಳಿವಳಿಕೆಗೆ ಅವ್ವನ ಪ್ರೀತಿಯ ಸಾಕುಮರಗಳು ಆಹುತಿಯಾಗಿದ್ದವು. ಅವುಗಳಲ್ಲಿ ಅವ್ವ ತನ್ನ ಪ್ರಾಣ ಇಟ್ಟುಕೊಂಡಿದ್ದಳು ಎಂಬುದು ನನಗೆ ಬಾಲ್ಯಕಾಲದಿಂದ ಗೊತ್ತಿದ್ದ ಸಂಗತಿಯಾಗಿತ್ತು.

ನಾನು ಚಿಕ್ಕವನಾಗಿದ್ದಾಗ ಅವ್ವ, ಅಪ್ಪನ ಬೋಳು ಹೊಲದಲ್ಲಿ ಮರಗಳನ್ನು ನೆಟ್ಟು ಚಿಗುರೊಡಿಸಿದ್ದು, ಮರವಾಗಿಸಿದ್ದು ನನಗೆ ನೆನಪಿದೆ. ಬೀರೇದೇವರ ಗುಡಿಯ ಹತ್ತಿರ ಇದ್ದ ಆಲದ ಮರಕ್ಕೆ, ಬಸುರಿ ಮರಕ್ಕೆ ಕೊಂಬೆಗಳನ್ನು ಕಡಿಯಲು ಚಿಕ್ಕಂದಿನಲ್ಲಿ ನನಗೆ ಕಾಲುಗಳಿಗೆ ಮೆಟ್ಟಲು ಕೊಟ್ಟು ಮರ ಹತ್ತಿಸುತ್ತಿದ್ದಳು. ಕೆಳಗಿನಿಂದ ಆಕೆ ತೋರಿದ ರೆಂಬೆಗಳನ್ನು ಕಡಿದು ನಾನು ಇಳಿಯುವಾಗ ಆಕೆ ತನ್ನ ಕೈಗಳಿಂದ ಆತು ಕೊಂಡು ನನ್ನ ನೆಲಕ್ಕೆ ಇಳಿಸಿಕೊಳ್ಳುತ್ತಿದ್ದಳು. ಆಗ ನಾನು ರಟ್ಟೆಗಾತ್ರದ ಹುಡುಗ. ನಾನು ಕಡಿದ ರೆಂಬೆಗಳನ್ನು ಅವ್ವ ಹೊಲದ ಬದಿನ ಮೇಲೆ ಸರಿಯಾಗಿ, ಕ್ರಮವಾಗಿ ಗುಂಡಿ ಕೀಳಿಸಿ ನೆಟ್ಟು, ಅವಕ್ಕೆ ಬೀರೇದೇವರ ಗುಡಿಯ ಹಿಂದಿನ ಅಂಕೋಲೆ ಮರದಿಂದ ಮುಳ್ಳುಗಳನ್ನು ಕಡಿದು ತರಿಸಿ ಬೇಲಿ ಕಟ್ಟಿಸುತ್ತಿದ್ದಳು. ಮೈಲಿ ದೂರವಿದ್ದ ಬಾವಿ

ಯಿಂದ, ಬೇಸಿಗೆಯ ಕಾಲದಲ್ಲಿ ನೀರು ಹೊತ್ತು ತಂದು ಹೂದು ಅವುಗಳನ್ನು ಕಾಪಾಡು ತ್ತಿದ್ದಳು. ಇವುಗಳ ಜೊತೆಗೆ ಆಕೆ ಹತ್ತಿ, ಹಲಸು, ಹೊಂಗೆ, ಬೇವು, ಅರಳಿ ಹೀಗೆ ಥರಾವರಿ ಮರಗಳನ್ನು ಬೆಳೆಸಿ ಅಪ್ಪನ ಹೊಲವನ್ನು ಸುಮಾರು ಇಪ್ಪತ್ತೈದು ವರ್ಷ ಗಳಲ್ಲಿ ಒಂದು ಬೃಹತ್ ತೋಪುಮಾಡಿದ್ದಳು. ತನ್ನ ಮಕ್ಕಳಿಗಿಂತ ಒಂದು ಕೈ ಮಿಗಿ ಲಾಗಿ ತಾನು ನೆಟ್ಟ ಮರಗಳನ್ನು ಪೋಷಣೆ ಮಾಡಿದ್ದು ಊರಿಗೆಲ್ಲಾ ತಿಳಿದಿತ್ತು. ಆಲ, ಬಸುರಿ, ಅತ್ತಿ ಹಣ್ಣಿನ ಕಾಲದಲ್ಲಿ ಅಲ್ಲಿ ಸೇರುಯುತ್ತಿದ್ದ ಎಷ್ಟೋ ಪಕ್ಷಿಸಂಕುಲಕ್ಕೆ ಸಂಖ್ಯೆ ಇರಲಿಲ್ಲ, ಹೆಸರುಗಳಿರಲಿಲ್ಲ. ನಮ್ಮ ಮನೆಯ ದನಗಳು ಬೇಸಿಗೆಯಲ್ಲಿ ಅರಳಿಸೊಪ್ಪನ್ನು ತಿಂದು ಸಂತೃಪ್ತಿ ಪಡೆಯುತ್ತಿದ್ದವು. ಆಡುಗಳಿಗೆ ಆಲ, ಬಸುರಿ ಮರದ ಸೊಪ್ಪು ಹಿತವಾಗಿರುತ್ತಿತ್ತು. ಆ ಮರಗಳ ನೆರಳಿನಲ್ಲಿ ಅದೆಷ್ಟು ಜನ ದಾರಿಹೋಕರು, ಕುರಿದನ ಕಾಯುವವರು ಬೇಸಿಗೆಯ ತಾಪವನ್ನು ತಂಪುಮಾಡಿಕೊಂಡಿದ್ದರೋ ಲೆಕ್ಕವಿಲ್ಲ. ಹೊಂಗೆಯ ಮರಗಳಲ್ಲಿನ ಹೂವಿನಲ್ಲಿ ದುಂಬಿಗಳು ಹಿತವಾದ ಸಂಗೀತದ ಹೊನಲನ್ನೇ ಹರಿಸಿದ್ದವು. ಅವುಗಳಿಂದ ಉದುರುತ್ತಿದ್ದ ತರಗು ರಾಶಿಗಟ್ಟಲೆಯಾಗಿ ಅದು ಅಪ್ಪನ ಗದ್ದೆಗೆ ಗೊಬ್ಬರವಾಗುತ್ತಿತ್ತು.

ಆದರೆ ಅಣ್ಣ ಅವುಗಳ ನೆರಳಿನಲ್ಲಿ ರಾಗಿ ಫಸಲು ಫಲಿಸುತ್ತಿಲ್ಲ ಎಂಬ ಕಾರಣ ವನ್ನಿತ್ತು ಅವುಗಳನ್ನು ನೆಲಸಮ ಮಾಡಲು ಹೊರಟಿದ್ದು ಅಪ್ಪನ ಹೃದಯಕ್ಕೆ ಬೆಂಕಿ ಇಟ್ಟಂತಾಗಿತ್ತು. ಅಪ್ಪ ಇದ್ದಾಗಲೂ ಆ ಮರಗಳು ಇದ್ದವು. ಅಪ್ಪ ಸತ್ತು ಮುರ್ನಾಲ್ಕು ವರ್ಷವಾಗಿದೆ ಅಷ್ಟೆ. ಆಗ ಅಪ್ಪ ಅಲ್ಲಿ ಬೆಳೆಯುತ್ತಿದ್ದದ್ದು ಮಳೆ ಹೂದು ಚೆನ್ನಾಗಿ ಬೆಳೆಯಾದರೆ ಹತ್ತು ಖಂಡುಗ ರಾಗಿಯೇ. ಹಾಗಾದರೆ ಹೇಗೆ ಅಲ್ಲಿ ಫಸಲು ಫಲಿಸುತ್ತಿಲ್ಲ ಎಂಬುದು ಮಾತ್ರ ರಹಸ್ಯವಾಗಿತ್ತು. ಅಣ್ಣ ಅಷ್ಟೆಲ್ಲಾ ಮರಗಳನ್ನು ಅಷ್ಟೊಂದು ಅಗ್ಗವಾಗಿ ಮಾರಿರುವುದಕ್ಕೆ ಅಣ್ಣ ಮತ್ತು ಆ ಯಜಮಾನನ ನಡುವೆ ಏನೋ ಗುಟ್ಟಿನ ವ್ಯವಹಾರ ನಡೆದಿರಬೇಕು ಅನ್ನಿಸಿತು.

ಮರ ಕಡಿಯುವವರಿಗೂ ಅವು ಅದೆಷ್ಟು ಲಾರಿಗಳಾಗುತ್ತವೆ ಎಂಬುದರ ಬಗ್ಗೆ ಅಂದಾಜು ಇದ್ದಂತಿರಲಿಲ್ಲ. ದೊಡ್ಡ ದೊಡ್ಡ ದಿಮ್ಮಿಗಳನ್ನು ಕಳೆದು ಕೊಂಬೆರೆಂಬೆಗಳೇ ಸುಮಾರು ಇಪ್ಪತ್ತು ಲಾರಿಗೂ ಹೆಚ್ಚು ಸೌದೆಗಳಾಗುವಂತಿತ್ತು. ಅಣ್ಣ ಮಾಡಿರುವ ಆ ಕೆಲಸದ ಬಗ್ಗೆ ನನ್ನಲ್ಲಿ ಅತೀವವಾದ ವ್ಯಸನವೂ, ಕೋಪವೂ ಉಂಟಾಯಿತು. ವಿಷಯ ಮೊದಲೇ ಗೊತ್ತಾಗಿದ್ದರೆ ಹೇಗಾದರೂ ಮಾಡಿ ಮರಗಳನ್ನು ಕಡಿಯುವುದನ್ನು ನಿಲ್ಲಿಸ ಬಹುದಿತ್ತು. ಆದರೆ ಈಗ ಉಳಿದಿರುವುದೊಂದೇ ಬಾಕಿ ಎಂದರೆ ಸಾಯುತ್ತಾ ಮಲ ಗಿರುವ ಅಪ್ಪನನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವುದು. ಆದರೆ ಆ ಮರಗಳಲ್ಲಿ ತನ್ನ ಜೀವಪಕ್ಷಿಯನ್ನು ಮುಡಗಿಕೊಂಡಿದ್ದ ಅಪ್ಪ ಬದುಕುತ್ತಾಳೆಯೇ? ಬದುಕಿದರೂ

ಮೊದಲ ಹಾಗೆ ಲವಲವಿಕೆಯಿಂದ ಇರುತ್ತಾಳೆಯೇ ? ಎಂಬ ಅನುಮಾನಗಳು, ಪ್ರಶ್ನೆಗಳು ನನ್ನಲ್ಲಿ ಉಂಟಾಗಿದ್ದವು.

o o o o

ಮುಸ್ಸಂಜೆ ತುಂಬಿಸಿಕೊಂಡು ನಾನು ಮನೆಗೆ ಬಂದಾಗ ದನ ಕಾಯಲು ಹೋಗಿದ್ದ ಅತ್ತಿಗೆ ಆಗಲೇ ಬಂದಿದ್ದಳು. ಅವಳ ಐದಾರು ವರ್ಷದ ಮತ್ತು ಮೂರುವರ್ಷದ ಮಕ್ಕಳೆರಡೂ ಆಟವಾಡುತ್ತಿದ್ದವು. ಅವುಗಳ ಹಿಂದೆ ಆಗಲೇ ಆಕೆ ಮೂರನೆಯ ಮಗುವಿಗೆ ತುಂಬುಗರ್ಭಿಣಿ. ಕೊಡವತ್ತಿಗೆ ನಾಟಿವೈದ್ಯರನ್ನು ಕರೆದು ತರಲು ಹೋಗಿದ್ದ ಅಣ್ಣ ಅವರ ಜೊತೆಗೆ ನಾನು ಮನೆಗೆ ಬಂದ ಮೇಲೆ ಇಳಿದ. ನನ್ನನ್ನು ಕಂಡು ಯಾವಾಗ ಬಂದೆ ಎಂದು ವಿಚಾರಿಸಿದ. ನಾಟಿವೈದ್ಯ ಕಣ್ಬಟ್ಟರು ನಾಲ್ಕೈದು ದಿನದ ಕೆಳಗೆ ಬಂದು ಅವ್ವನ ಕೈಗೆ ಬ್ಯಾಂಡೇಜು ಹಾಕಿ ಔಷಧಿ ಕೊಟ್ಟು ಹೋಗಿದ್ದರಂತೆ. ಮತ್ತೆ ಅವರು ನಿನ್ನೆ ದಿನವೇ ಬರಬೇಕಾಗಿತ್ತಂತೆ. ಆದರೆ ಆದಿನ ಅವರು ಬರಲಿಲ್ಲವಾದ್ದರಿಂದ ತಾನೇ ಇಂದು ಕರೆದುಕೊಂಡು ಬರಲು ಹೋಗಿದ್ದಾಗಿ ನನಗೆ ಎಲ್ಲಾ ಒಪ್ಪಿಸಿದ. ಆತನ ಹೇಳಿಕೆ ಕೇಳಿಕೆಯಲ್ಲಿ ನನಗೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಆತ ಇತ್ತೀಚಿಗೆ ಕೆಲವು ಕೆಟ್ಟ ಸಹವಾಸಗಳಿಗೆ ಬಿದ್ದಿದ್ದಾನೆಂದು ಕೇಳಿದ್ದೆ. ಅದರಿಂದ ಆತ ಸುಳ್ಳು ಹೇಳುವುದನ್ನು ಸಹಜ ಗುಣವನ್ನಾಗಿ ಮಾಡಿಕೊಂಡಿದ್ದಾನೆ ಅನ್ನಿಸಿತ್ತು. ನಾನು ಆತನನ್ನು ಯಾಕೆ ಹೀಗೆ ಮಾಡಿದೆ ಎಂದು ಕೇಳುವ ಯೋಚನೆ ಮಾಡಲಿಲ್ಲ. ಅದಕ್ಕೆ ಆತ ಸರಿಯಾದ ಉತ್ತರ ಕೊಡುವ ಸ್ಥಿತಿಯಲ್ಲಿಯೂ ಇಲ್ಲ ಎಂಬುದು ನನಗೆ ಅರಿವಾಗಿತ್ತು. ಆತ ಏನು ಹೇಳಿದರೂ ಅದಕ್ಕೆ ನಾನು ಒಂದನ್ನೂ ಪ್ರತಿಕ್ರಿಯಿಸದೆ ಸುಮ್ಮನೆ ನಡುಮನೆಯಲ್ಲಿ ಕುಳಿತೆ.

ಅವ್ವ ಮೂಲೆಯಿಂದ ತನ್ನ ನೋವಿನ ದನಿ ತೆಗೆದು "ಹೊಲದತ್ತಿರ ಹೋಗಿದ್ದೇನೋ" ಎಂದು ನನ್ನನ್ನು ಕೇಳಿದಳು.

"ಹೋಗಿದ್ದೆ" ಎಂದೆ ನಾನು.

"ನೋಡ್ದೇನೋ ಏನು ಮಾಡಿದ್ದಾರೆ ಆ ಚಂಡಾಲರು" ಎಂದಳು ಅವ್ವ.

"ನೀನಿನ್ನು ಸುಮ್ನಿರವ್ವ. ಆಗೋದು ಆಗೋಯ್ತು" ಎಂದೆ, ಆಕೆಗೆ ಸಮಾಧಾನವಾಗಲಿ ಎಂದು. ನಡುವೆ ಅಣ್ಣ ಬಾಯಾಕಿ ನನ್ನನ್ನು ಉದ್ದೇಶಿಸಿ:

"ಏನೋ ಆಕಾಶನೇ ಕಳಚಿ ಮೈಮೇಲೆ ಬಿದ್ದಾಂಗಾಡ್ತಾಳೆ. ಹೇಳಪ್ಪ ನೀನಾದ್ರೂ, ಓದಿದ್ದೀಯಲ್ಲಾ, ಮರಗಳ ಕೆಳಗೆ ಫಸಲಾಗ್ತದ ಅಂತಾ" ಎಂದ.

"ನೀನೆಲ್ಲಿ ಹುಟ್ಟಿದೋ ನನ್ನ ಹೊಟ್ಟೇಲಿ ? ಶಕುನಿ ಇದ್ದಂಗೆ ನೀನು.... ಎನ್ನುತ್ತಾ ಅವ್ವ ಅಣ್ಣನನ್ನು ಹಿಗ್ಗಾಮುಗ್ಗಾ ಬೈಯತೊಡಗಿದಳು. ನನ್ನನ್ನು ಕುರಿತ

"ಹೊಲದಲ್ಲಿ ಒಂದು ಮರವನ್ನಾದ್ರು ಬುಟ್ಟಿದ್ದಾರೇನೋ, ಶಾಸ್ತ್ರಕ್ಕಾದ್ರು ಆ ನೀಚರು" ಎಂದು ಕೇಳಿದಳು.

ಹೊಲದಲ್ಲಿ ಒಂದು ಮರವನ್ನೂ ಉಳಿಸಿರಲಿಲ್ಲವೆಂಬುದರ ಸತ್ಯ ನನಗೆ ಗೊತ್ತಿದ್ದರಿಂದ ನಾನು ಆಕೆಗೆ ಉತ್ತರಿಸಲಾಗಲಿಲ್ಲ.

ಅಡಿಗೆ ಮನೆಯಿಂದ ಅತ್ತಿಗೆ ಅವ್ವನ ಮಾತಿಗೆ ಎಟುಕಿಸಿಕೊಂಡರು. "ಹದಿನೈದು ದಿನಗಳಿಂದ ಇವಳದು ಇದೇ ರಾಗ ಆಗೋಯ್ತು" ಎಂದು ಅತ್ತಿಗೆ ಗೊಣಗಿದ್ದು ಅವ್ವನಿಗೆ ಕೇಳಿಸಿತು. ಆಗ ಅವ್ವ ಅತ್ತಿಗೆಗೆ "ಇವಳು ಮಂಥರೆ ಇದ್ದಂಗೆ ಕಣೋ ; ಗಂಡ ಮಾಡಿದ್ದಕ್ಕೆಲ್ಲಾ ಸೈ ಅಂತಾಳೆ ; ಚೆಂಬೇಲಿ, ಯಾವ ಸೀಮೇಲಿ ಬಿದ್ದಿದ್ಲೋ ಗಂಡನ ಕಾಣ್ದೆ" ಎಂದು ತರಾಟೆಗೆ ತೆಗೆದುಕೊಂಡಳು.

ಕಣ್ಭಟ್ಟರು "ನಿನ್ನ ಕಾಯಿಲೆ ವಾಸಿ ಆಗ್ಬೇಕೋ ಬ್ಯಾಡವಮ್ಮ" ಎನ್ನುತ್ತಾ ಅವ್ವನಿಗೆ ರೇಗಿ ಆಕೆಯ ಸುಮ್ಮನಿರಿಸಲು ಯತ್ನಿಸಿದರು.

"ನನ್ನ ಕಾಯಿಲೆ ವಾಸಿ ಆದ್ರೇನು ? ಆಗದೆ ಇದ್ರೇನು ಬಿಡಿ ಸ್ವಾಮಿ !" ಎಂದಳು ಅವ್ವ.

"ಅಂಗಂದ್ರೆ ಹೆಂಗವ್ವಾ, ಇನ್ನು ಮೇಲೆ ಸುಮ್ನಿರವ್ವ" ಅಂದೆ ಕೊನೆಗೆ ನಾನೇ.

"ನಾನು ಇದ್ರೇನು ? ಸತ್ರೇನು ? ಬಿಡೋಅತ್ತ" ಎಂದು ಅವ್ವ ಗಳಗಳ ಕಣ್ಣೀರು ತಂದುಕೊಂಡಳು.

o o o o

ಬೆಳಿಗ್ಗೆ ಎದ್ದು ಕೆರೆ ಕಡೆಗೆ ನಾನು ಹೊರಟಾಗ "ನಾನೂ ಬರ್ತೀನಿ ಇರ್ರಿ" ಎನ್ನುತ್ತಾ ನನ್ನ ಹಿಂದೆಯೇ ಬಂದರು ಕಣ್ಭಟ್ಟರು. ಇಬ್ಬರೂ ದಾರಿಯುದ್ದಕ್ಕೂ ಅವ್ವನ ಕಾಯಿಲೆಯ ಬಗ್ಗೆ, ಅಣ್ಣ ಎಸಗಿರುವ ಕಾರ್ಯದ ಬಗ್ಗೆ, ಕಣ್ಭಟ್ಟರ ಸಾಂಸಾರಿಕ ತಾಪತ್ರಯಗಳ ಬಗ್ಗೆ ಮಾತನಾಡುತ್ತಾ, ನಾನು "ಕಣ್ಭಟ್ಟರ ನಮ್ಮವ್ವನ ಕಾಯಿಲೆ ಗುಣವಾಗುತ್ತದ ಭಟ್ರೆ ?" ಎಂದು ಕೇಳಿದೆ.

"ಅದರ ಬಗ್ಗೆ ನೀವು ಅನುಮಾನವನ್ನೇ ಇಟ್ಕೋಬೇಡಿ" ಎಂದರು ಭಟ್ಟರು.

"ಅನುಮಾನ ಅಲ್ಲ ; ಇಲ್ಲಿ ಆಗದೆ ಇದ್ರೆ ಬೆಂಗಳೂರಿಗೆ...."

"ಬೆಂಗಳೂರಿಗೆ ಕರೆದುಕೊಂಡು ಹೋಗ್ಬೇಕು ಅಂತೀರಾ ?"

"ಹೌದು. ಕರೆದುಕೊಂಡೋಗಿ ಯಾರಿಗಾದ್ರು ಆರ್ಥೋಪಿಡಿಸನ್ ಸರ್ಜನ್‌ಗೋ, ನ್ಯೂರಾಲೋಜ್ ಸರ್ಜನ್‌ಗೋ ತೋರಿಸೋಣ ಅಂತ ಯೋಚಿಸಿದ್ದೀನಿ"

"ಹಣ ಹೆಚ್ಚಾಗಿದ್ರೆ, ಕರೆದುಕೊಂಡು ಹೋಗಿ. ನನ್ನ ಅಭ್ಯಂತರವೇನೂ ಇಲ್ಲ" ಎಂದು ಭಟ್ಟರು ಯಾಕೋ ಖಿನ್ನರಾದರು.

"ನಿಮ್ಮ ಬಗ್ಗೆ ನನಗೆ ಅನುಮಾನದಿಂದ ಅಲ್ಲ ಭಟ್ರೆ" ಎಂದೆ.

"ಈ ಕಣ್ಬಟ್ಟರ ಕೈಯಲ್ಲಿ ಫೈಲ್ ಆಗಿರೋದು ಇದುವರೆಗೂ ನನ್ನ ಸರ್ವಿಸ್‌ನಲ್ಲಿ ಈ ಸುತ್ತಳ್ಳಿಯಲ್ಲಿ ಎಲ್ಲೂ ನಾನು ಕಂಡಿಲ್ಲ" ಎಂದು ಭಟ್ಟರು ಬೀಗಿದರು.

"ನಿಮ್ಮ ಖ್ಯಾತಿಯ ಬಗ್ಗೆ ನಾನು ಕೇಳಿದ್ದೀನಿ. ಕೆಲವು ಜನಗಳಿಂದ".

"ಮತ್ತೆ ಯಾಕೆ ನನ್ನ ಮೇಲೆ ಇನ್ನೂ ತಮಗೆ ಅನುಮಾನ"

"ಅನುಮಾನದ ಪ್ರಶ್ನೆ ಅಲ್ಲ ಭಟ್ರೆ, ಈಗಿನ ಕಾಯಿಲೆಗಳು ಹೀಗೇ ಅಂಥ ಹೇಳಲು ಬರುವುದಿಲ್ಲ. ಭಯ ಅಷ್ಟೆ".

"ಅಪಾಯವಿಲ್ಲ ಬಿಡಿ. ಭಯಪಡಬೇಡಿ ನೀವು. ನಿಶ್ಚಿಂತೆಯಿಂದ ನೀವು ಇರಿ. ಅಪಾಯ ಇದ್ರೆ ನಾನೇ ಹೇಳ್ತಿದ್ದೆ. ನನ್ನ ಕೈಯಲ್ಲಿ ಇದು ಆಗೋದಿಲ್ಲ. ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಂಥ. ಅಂದರೆ ಇಷ್ಟಾಗಿಯೂ ಆಕೆಗೆ ಏನೂ ಆಗಿಲ್ಲ".

"ತಾವು ಅಷ್ಟು ಭರವಸೆ ಕೊಟ್ರೆ ಸಾಕು ಭಟ್ರೆ, ನನಗೆ".

"ಆಕೆ ಜೀವಕ್ಕೆ ಏನೂ ಅಪಾಯ ಇಲ್ಲ ಅಂತೀನಲ್ಲ ; ಏನಂದ್ರೆ ನನ್ನ ನಾಟಿ ಔಷಧಿ ವರ್ಕ್ ಮಾಡೋದು ಸ್ವಲ್ಪ ನಿಧಾನ ಅಷ್ಟೆ".

ಭಟ್ಟರು ವಿಷಯ ಬೇರೆ ಕಡೆಗೆ ತಿರುಗಿಸಿ ತಮ್ಮ ಇಬ್ಬರು ಹೆಂಡತಿಯರ ಕೆಲವು ಸಂಗತಿಗಳನ್ನು ಹೇಳಲು ತೊಡಗಿದರು. ಆದರೆ ಅವರ ಸಂಸಾರದ ಬಗ್ಗೆ ಕೇಳಲು ನನಗೆ ಆಸಕ್ತಿ ಇರಲಿಲ್ಲ.

"ನಾನು ಹೀಗೆ ನಿಮ್ಮನ್ನು ಬಿಡಿಸಿ ಬಿಡಿಸಿ ಕೇಳ್ತಾ ಇದ್ದೀನಿ ಅಂಥ ತಾವು ಬೇಸರ ಪಟ್ಕೋಬೇಡಿ ಭಟ್ರೆ"

"ಅದಕ್ಕೆ ಏಕೆ ಬೇಸರ ಮಾಡಿಕೊಳ್ಳಲಿ ಬಿಡಿ ;"

"ನಮ್ಮವ್ವನಿಗೆ ನಾಳೆದಿನ ಹೆಚ್ಚುಕಮ್ಮಿ ಆದರೆ ಜನ 'ಅವಳನ್ನ ಬೆಂಗಳೂರಿಗೆ ಕರೆದುಕೊಂಡು ಹೋಗಿ ತೋರಿಸಿದ್ದರೆ ಬದುಕುತ್ತಿದ್ದಳು. ಖರ್ಚಾಗುತ್ತೆ ಅಂಥ ಮಕ್ಕಳು ತೋರಿಸಿಲಿಲ್ಲ' ಅಂಥ ನಾಳೆದಿನ ನನ್ನ ಬೈಯ್ಯಬಾರದು ನೋಡಿ ; ಅದ್ಕೇ...."

"ನೀವು ಹೇಳುವುದೂ ಸರಿಯೇ !"

"ನಮ್ಮ ಅಣ್ಣ ಹಣ ಕೊಡ್ಲಿಲ್ಲ ಅಂಥ ನೀವು ಉದಾಸೀನ ಮಾಡಬೇಡಿ. ಎಷ್ಟೇ ಖರ್ಚಾಗಲಿ, ನಾನು ಕೊಡ್ತೀನಿ. ಆ ಬಗ್ಗೆ ತಾವು ಏನೂ ಸಂಶಯ ಇಟ್ಕೊಳ್ಳಬೇಡಿ ಎಂದೆ.

"ಆಯ್ತುಬಿಡಿ. ನಾನು ಇನ್ನ ಒಂದುವಾರ ನಮ್ಮೂರಿಗೆ ಹೋಗೋದೇ ಇಲ್ಲ ಇಲ್ಲೇ ಇದ್ದು ಬಿಡ್ತೀನಿ" ಎನ್ನುತ್ತಾ ಭಟ್ಟರು ಕೆರೆಯಲ್ಲಿ ಮುಖ ಕೈ ಕಾಲು ತೊಳೆದ ಸೂರ್ಯನಿಗೆ ನಮಸ್ಕಾರ ಮಾಡುತ್ತಾ ಬಾಯಲ್ಲಿ ಮಂತ್ರ ಪಠಿಸತೊಡಗಿದರು.

o o o o

ನಾನು ಊರಿಗೆ ಬಂದು ಒಂದು ವಾರವಾಯಿತು. ಅವ್ವನ ಕಾಯಿಲೆ ಗುಣವಾಗುವಂತೆ ಕಾಣಲಿಲ್ಲ. ಕಣ್ಬಟ್ಟರು ಒಂದು ವಾರದಿಂದ ನಮ್ಮ ಮನೆಯಲ್ಲೇ ಇದ್ದು ಅವ್ವನ ಕಾಯಿಲೆಗೆ ಶುಶ್ರೂಷೆ ಮಾಡಿದರು. ಅವ್ವನ ಬೆಂಗಳೂರಿಗೆ ಕರೆದೊಯ್ಯಲು ನಾನು ಶ್ರಮಿಸಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಆಕೆ ತನಗೆ ಏನೂ ಆಗಿಲ್ಲವೆಂದು, ತಾನು ಬೆಂಗಳೂರಿಗೆ ಬರುವುದಿಲ್ಲವೆಂದು ಹಠಹಿಡಿದಳು. ಆದರೆ ಆಕೆ ತನಗೆ ಏನೂ ಆಗಿಲ್ಲವೆಂದು ಎಷ್ಟೇ ಹೇಳಿದರೂ ತಾನು ನರಳುವುದನ್ನು ಮಾತ್ರ ನಿಲ್ಲಿಸಿರಲಿಲ್ಲ. ಅದರಿಂದ ನನಗೆ ನೆಮ್ಮದಿ ಬಂದಿರಲಿಲ್ಲ. ಅಣ್ಣ ಆಕೆ ಸರಿಯಾಗಿಯೇ ಇದ್ದಾಳೆಂದು ಹೇಳಿದ. ಕಣ್ಬಟ್ಟರು ತಾವು ತಮ್ಮ ಊರಿನಿಂದ ಬಂದು ಆಗಲೇ ವಾರವಾಯಿತೆಂದು, ಮನೆಕಡೆ ಏನಾಗಿದೆ ಎಂಬುದನ್ನು ಹೋಗಿ ನೋಡಿಕೊಂಡು ಮುಂದಿನವಾರ ಬರುವುದಾಗಿ ಹೇಳಿ, ನನ್ನಿಂದ ಹಣ ಪಡೆದು ತಮ್ಮ ಊರಿಗೆ ತೆರಳಿದರು.

ಆಮೇಲೆ ನಾನು ಬೆಂಗಳೂರಿಗೆ ಹೋಗುತ್ತೇನೆಂದು ಅವ್ವನಿಗೆ ಮೆಲ್ಲಗೆ ಹೇಳಿದೆ. ಆದರೆ ಆಕೆ ಕಣ್ಣೀರು ಸುರಿಸಿದಳು. ತನ್ನ ಈ ಪರಿಸ್ಥಿತಿಯಲ್ಲಿ ಬಿಟ್ಟು ಹೋಗುತ್ತೀಯಾ ಎಂದು ಪ್ರಶ್ನಿಸಿದಳು. ತನ್ನ ಹಿರಿಮಗ, ಹಿರಿಸೊಸೆ ಮೇಲೆ ಶಾಪ ಕರೆದಳು. ತನಗೆ ಹೆಣ್ಣುಮಕ್ಕಳು ಇಲ್ಲದರ ಬಗ್ಗೆ ಕೊರಗಿದಳು. ಆಕೆಯ ಮತ್ತೆ ಬೇಸರ ಪಡಿಸಲು ನನಗೆ ಮನಸ್ಸು ಒಪ್ಪಲಿಲ್ಲ.

ನನಗೆ ನನ್ನ ಅಧಿಕಾರಿ ರಜಕೊಡುವುದಿಲ್ಲವೆಂಬುದು ನನಗೆ ಗೊತ್ತಿದ್ದರೂ ಪುನಃ ಒಂದುವಾರ ರಜೆಯನ್ನು ಕೊಡಬೇಕೆಂದು ಆಫೀಸಿಗೆ ತಿಳಿಸಿ ಪತ್ರ ಬರೆದೆ.

ಹೊಲದಲ್ಲಿ ಕಡಿದು ರಾಶಿಹಾಕಿದ್ದ ಮರಗಳನ್ನೆಲ್ಲಾ ಆಗಲೇ ಲಾರಿಯಲ್ಲಿ ಸಾಗಿಸಿದ್ದರು. ಹೊಲದಲ್ಲಿ ನೆರಳೆಲ್ಲಾ ಮಾಯವಾಗಿತ್ತು. ಕಡಿದ ಮರದ ಬುಡಗಳು ನೆಲ ಸಮವಾಗಿದ್ದವು.

ಅವ್ವ ನಡುನಡುವೆ ಮರಗಳ ಬಗ್ಗೆ ವಿಚಾರಿಸುತ್ತಲೇ ಇದ್ದಳು. ನಾನು ನಿತ್ಯ ನಡೆಯುತ್ತಿದ್ದ ಆ ಸಂಗತಿಗಳನ್ನೆಲ್ಲಾ ಆಕೆಗೆ ವಿವರಿಸುತ್ತಲೇ ಇದ್ದೆ.

ಒಂದು ದಿನ ಅವ್ವ ತನ್ನನ್ನು ಹೊಲದ ಹತ್ತಿರ ಕರೆದುಕೊಂಡು ಹೋಗಬೇಕೆಂದು ತನ್ನ ಬಯಕೆಯನ್ನು ನನ್ನ ಮುಂದಿಟ್ಟಳು.

ನನಗೆ ದಿಗಿಲಾಗಿ ಸುಸ್ತಾಗ್ತದೆ ಬೇಡ ಅಂದೆ ಆಕೆಗೆ. ಆದರೆ ಆಕೆ ಹಠ ಹಿಡಿದಳು. ತಾನು ನಡೆಯುವುದಾಗಿ, ತನ್ನ ಕಾಲುಗಳಿಗೆ ಏನೂ ಆಗಿಲ್ಲವೆಂದು ಮನೆಯಲ್ಲಿ ಎದ್ದು ಓಡಾಡಿ ತೋರಿಸಿದಳು. ಆಕೆಯ ಅಭಿನಯ ಮಾಂತ್ರಿಕನನ್ನೊಬ್ಬನಂತಿತ್ತು.

ಆದರೆ ಆಕೆಯ ರಟ್ಟೆಗೆ ಮೂಗೇಟು ಬಿದ್ದಿದೆ ಎಂಬುದು ನನಗೆ ಗೊತ್ತಿತ್ತು.

ಮೂಳೆ ಮುರಿದಿಲ್ಲ, ಮುರಿದಿದ್ದರೆ ಇಷ್ಟೊತ್ತಿಗೆ ಆಕೆಯ ರಟ್ಟೆ ಇನ್ನೂ ಊದುಕೊಳ್ಳುತ್ತಿತ್ತು ಎಂಬುದು ನನಗೆ ತಿಳಿದಿತ್ತು.

ಅದಕ್ಕಿಂತ ಹೆಚ್ಚಾಗಿ ಆಕೆ ಏಕೆ ಮಾನಸಿಕವಾಗಿ ಅಸ್ವಸ್ಥಳಾಗಿರಬಾರದು ಅಂದುಕೊಂಡಿದ್ದೆ.

ಅವ್ವ ಹೊಲದ ಹತ್ತಿರ ಕೋಲೂರಿಕೊಂಡು ನಡೆದುಬಂದಳು. ನಾನು ಆಕೆಯ ಸಂಗಡ ನಡೆದೆ. ಆಕೆ ಹೊಲದ ಹತ್ತಿರ ತೆವುರಿ ಮೇಲೆ ಕೂರುತ್ತಾ "ಇದೆಯಾ ನನ್ನ ಹೊಲ ?" ಎಂದು ಕೇಳಿದಳು. ನನಗೆ ದಿಗಿಲಾಯಿತು.

"ಹೌದು ಕಣವ್ವ. ಇದೇ ನಮ್ಮ ಹೊಲ" ಅಂದೆ.

"ನೀನು ನನ್ನ ಹೊಲದ ಹತ್ತಿರ ಕರೆದುಕೊಂಡು ನಡೆ ಅಂದ್ರೆ, ಸ್ಮಶಾನದ ಹತ್ತಿರ ನನ್ನ ಕರೆದುಕೊಂಡು ಬಂದಿದ್ದೀಯಾ ?" ಎನ್ನುತ್ತಾ ದೊಣ್ಣೆ ಎತ್ತಿಕೊಂಡು ನನ್ನ ಓಡಾಡಿಸಿಕೊಂಡು ಬಂದಳು. ನಾನು ಆಕೆಗೆ ಅದೇ ನಮ್ಮ ಹೊಲ ಅಂಥ ಹೇಳಿ ಆಕೆಯನ್ನು ಸಮಾಧಾನದ ಸ್ಥಿತಿಗೆ ತರುವ ಹೊತ್ತಿಗೆ ನನಗೆ ಸಾಕು ಅನ್ನಿಸಿತು. ಆಕೆ ನಡುನಡುವೆ ಕೇಳುತ್ತಿದ್ದ ನೂರಾರು ಪ್ರಶ್ನೆಗಳಿಗೆ ಉತ್ತರಿಸಲಾಗದೆ ಆಕಾಶವನ್ನು ನಿಟ್ಟಿಸುತ್ತಾ ನಿಂತಿದ್ದೆ.

ಅವ್ವ ಹೊಲದಲ್ಲಿ ಕೂರಲು ಬಿಸಿಲಿಗೆ ಪರಿತಪಿಸಿದಳು. ತನ್ನ ನೆಲದಲ್ಲಿ ನೆರಳು ತಡಕಿದಳು. ತನ್ನ ಮರಗಳ ತಂಪು ಹುಡುಕಿದಳು. ಹುಚ್ಚಿ ಥರ ಗೋಳಾಡಿದಳು. ಅಣ್ಣನ ಮೇಲೆ ಹಿಡಿಹಿಡಿ ಶಾಪ ಹಾಕಿ, ಕಡಿದವರು ಕಟುಕರೆಂದು ಜರಿದಳು. "ನಿನಗೆ ಏನೂ ಅನ್ನಿಸುವುದೇ ಇಲ್ಲವೆ ?" ಎಂದು ನನ್ನ ಪ್ರಶ್ನಿಸಿದಳು.

ಕೂತಿದ್ದವಳು ಎದ್ದು "ಬಾ" ಎಂದು ನನ್ನ ಕರೆದು ನಮ್ಮ ಹೊಲದ ಹತ್ತಿರ ಇದ್ದ ಬೀರೇದೇವರ ಗುಡಿಯ ಹತ್ತಿರ ನಡೆದಳು. ನಾನು ಅವ್ವನ ಸೆರಗ ಹಿಡಿದು ಕಂದನಂತೆ ಹಿಂಬಾಲಿಸಿದೆ.

ಬೀರೇದೇವರ ಬಾಗಿಲಿಗೆ ಬಂದು ಕೈಮುಗಿದು ಅಡ್ಡಬಿದ್ದು ಎದ್ದು ಎದುರಿಗೆ ಇದ್ದ ಆಲದಮರಕ್ಕೆ, ಬಸರಿ ಮರಕ್ಕೆ ಕೈತೋರಿಸುತ್ತಾ ನನಗೆ ಹೇಳಿದಳು.

"ಮರ ಹತ್ತಿ ನಾಲ್ಕು ಕೊಂಬೆ ಕಡಿ".

ನಾನು ತಬ್ಬಿಬ್ಬಾಗಿ ನಿಂತೆ.

"ಏನು ನೋಡ್ತಿಯಾ ? ನೀನು ಚಿಕ್ಕಂದಿನಲ್ಲಿ ಮರಹತ್ತಿ ಕಡಿದಿದ್ದ ಮರೆತು ಬಿಟ್ಟಾ ? ಹತ್ತು ಕಡಿ" ಅಂದಳು, ತನ್ನ ನಡುವಿನಲ್ಲಿ ಸಿಕ್ಕಿಸಿದ್ದ ಕುಡುಗೋಲನ್ನು ನನ್ನ ಕೈಗೆ ಇಡುತ್ತ. ಆ ಕುಡುಗೋಲು ಮಾತ್ರ ಯಾವಾಗಲೂ ಅವಳ ನಡುವಿನಲ್ಲೇ ಇರುತ್ತಿತ್ತು.

ಪಂಜಿ ಎತ್ತಿಕಟ್ಟಿ ಆಗತಾನೆ ಚಿಗುರೊಡೆಯುತ್ತಿದ್ದ ಬಸುರಿ ಮರ ಹತ್ತಿ ನಾಲ್ಕೈದು ಕೊಂಬೆ ಕಡಿದು ಕೆಳಗೆ ಇಳಿದೆ. ಮತ್ತೆ ಆಲದ ಮರಕ್ಕೂ ಹತ್ತಿಸಿ ನಾಲ್ಕು ಕೊಂಬೆ ಕಡಿಸಿದಳು.

ಕಡಿದ ಕೊಂಬೆಗಳನ್ನು ಹೊತ್ತು ಹೊಲದ ಹತ್ತಿರ ತಂದು ಹಾಕಿದೆ. ಗುಂಡಿ ತೋಡಲು ಮನೆಗೆ ಹೋಗಿ ಹಾರೆ ತರಲು ಕಳುಹಿಸಿದಳು. ನಾನು ಒಂದೇ ಓಟಕ್ಕೆ ಹೋಗಿ ಒಂದೇ ಓಟಕ್ಕೆ ಹಾರೆ ತಂದೆ. ನಾನು ತರುವ ಹೊತ್ತಿಗಾಗಲೇ ಅವುಗಳನ್ನೆಲ್ಲಾ ಎಲ್ಲೆಲ್ಲಿ ನೆಡಬೇಕೆಂದು ಅವ್ವ ಗುರುತು ಮಾಡಿದಳು. ಆಕೆ ಗುರುತು ಮಾಡಿದ್ದ ಕಡೆಯೆಲ್ಲಾ ಗುಂಡಿಕಿತ್ತು ಕೊಂಬೆಗಳನ್ನೆಲ್ಲಾ ನೆಟ್ಟೆ.

ಹುಲ್ಲುಮೆದೆಯಲ್ಲಿಟ್ಟಿದ್ದ ಗಡಿಗೆಯಿಂದ ನೀರು ತರುವುದಾಗಿ ಹೇಳಿ ಅವ್ವ ಕಟ್ಟೆ ಕಡೆಗೆ ಹೊರಟಳು. "ನಾನು ನಿನ್ನ ಕೈಯಲ್ಲಿ ಆಗುವುದಿಲ್ಲ. ಬೇಡ ಸುಮ್ಮನೆ ಕೂರು. ನಾನು ತಂದು ಹಾಕ್ತೀನಿ" ಎಂದೆ.

ಆದರೆ ಅವ್ವ ತನ್ನ ರಟ್ಟೆಯನ್ನು ಮೇಲಕ್ಕೆ ಎತ್ತಿತೋರಿಸಿ "ನೋಡು. ನನ್ನ ರಟ್ಟೆಗೆ ಏನೂ ಆಗಿಲ್ಲ; ಹೇಗಾಡ್ತದೆ!" ಎನ್ನುತ್ತಾ ಅತ್ತ ಇತ್ತ ತಿರುಗಿಸಿದಳು.

ಅವ್ವನ ಬಿದ್ದುಹೋಗಿದ್ದ ರಟ್ಟೆ ಮ್ಯಾಜಿಕ್ ಥರ ಆಡುತ್ತಿತ್ತು. ನನಗೆ ಒಂದೂ ಅರ್ಥವಾಗದೆ ಅವ್ವನನ್ನೇ ನೋಡುತ್ತಾ ಮೂಕನಾಗಿ ನಿಂತಿದ್ದೆ.

●

## ಅಹಿಂಸಾ ಚಪ್ಲಿಯ ಐಯ್ಯಪ್ಪ

ಡಾ|| ಅರವಿಂದ ಮಾಲಗತ್ತಿ

ಕಥೀಯಲ್ಲರ್ರೀ ದೈವ ಇದು
ನಮ್ಮೂರ ವ್ಯಥೆ ಐತಿ ಕೇಳಿ
ಮೋಟಾರಿಳಿದು ಕಾಲಿಟ್ಟರ ಊರೊಳಗ
ಮುಳ್ಳ ಅಳಕದಂಗ ಅಳಕತದ ನನ್ನ ಎದಿಯಾಗ
ಎಲ್ಲ ಏರುದ ಮನದಾಗ
ಗಾಂಧಿ ಬೀದಿಯು ಕಲ್ಲಪುತ್ಥಳಿದು
ವರ್ಷಕ್ಕೊಮ್ಮೆ ಹೊಳದೇ ಹೊಳೆವುದು ಬಲುಕರುದು
ಬಾಳಾಚಾರಿ ಹೆಸರು ಇರುವುದು

---

ಡಾ|| ಅರವಿಂದ ಮಾಲಗತ್ತಿ, ರೀಡರ್, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ
ಮಂಗಳಗಂಗೋತ್ರಿ-575199

ಸತ್ತ ದನಾ ಪೊತ್ತಂಗ ಹೊತ್ತು ತಂದರು ನಾಲ್ಕು ಜನಾ ಸೇರಿ
ಅಯ್ಯಯ್ಯಪ್ಪೋ ಎಂದಳುತ್ತಿದ್ದರು ಕೇರಿ ಜನರು ಸೇರಿ
ಹೆಸರು ಯಾವುದು, ಅಳುವುದ್ಯಾವುದು ಗುರುತ್ಸದಾಂಗಿತ್ತೆಲ್ಲಾ ಅಲ್ಲಿ.
ಅಳು ಬಂದವ್ರು 'ರೊಂಯ್' ಅಂತ ಅತ್ತೇ ಅತ್ರಲ್ಲಿ
ಅಳಲಾಗ್ದೋರು ಬಾಯಿ ಬಿಗಿಹಿಡ್ದು ಅಳುವ ನುಂಗತ್ತಿದ್ರು
ನೀಲಕಂಠನಂಗ ಕಪ್ಪನ ಮೋತ್ಯಾಗ ಇಸಾ ಇಳಿದಿತ್ತು, ಮಾರಿ ಹಸರಗಟ್ಟಿತ್ತು
ಏನ ಮನ್ಸ್ಯಾ ಇದ್ದ, ಏನಾಗಿ ಹೋದ ಎಂದಂದೇ ಅಸುವರೆಲ್ಲಾ
ಸಿಂಬಳೇರಿಸಿ ಅಳುವ ಸುಂಗಿ ನುಂಗಿ ತಾ ಕಣ್ಣೊರ್ಸವರೆಲ್ಲಾ

●
●

ಎ ಊರಿನೊಳಗ ಸರದಾರ ಅಂವ ಏನಂಗಡೆಂವ್ರಂದು ?
ಎಷ್ಟು ಜೋಡು ಅವು ಮಿನಮಿನ ಮಿಂಚಿ ಮುಳಗತಿದ್ದು ದಿನಕ
ದಾರಿದಾರಿಯಂಲೆ ಹೋಗು ಬರುವ ಮಂದಿ ನಿಂತ ನೋಡತ್ತಿದ್ದು
ಎಷ್ಟು ಎತ್ತರಂದಿ ಗಡ್ಡಿಕಾಲ್ಮರಿ ತರಾತರಾ ಅವು
ಮೆಟ್ಟು ನಡದರ ಮೆರ್‌ಮೆರ್‌ಂತ ಪದಾ ಹಾಡುವು
ಮಟ್ಟಿಯೊಳಗ ಏಸು ನಮೂನಿ ಅವು, ಒಂದಾ ಎರಡಾ ಮೂರಾ ?

ಕರ‍್ರಗ–ಕೆಂಪಗ, ಸಾದಾ–ಮುಂಗಿ, ಚುಂಕ್ಕಿ–ಚಂದ್ರ ಮುರಕಾ
ಮೆಟ್ಟು ನಡದರ ಕಾಲಾಗ ಅವು ಅವಯಿಲ್ಲಂತ; ನಾವ, ಹೊಳೊಳ್ಕಿ ನೋಡ್ಬೇಕು
ತಾನು ಸಲಾಮು ಹಾಕಂವ; ಮುಗಾ ಹದುಳ ಮಾಡಂವ
ಹೆಂಣ್ತಿ ಹೊಲ್ಗಿ ಹಾಕೋಳು; ಮಂಗ್ಳ ಬಣ್ಣ ಹಚ್ಚೋಳು
ಸೊಸಿ ಅಚ್ಚ ಹಾಕೋಳು; ಗೆಣ್ತಿ ಎಲೆ ತಿನ್ನೋಳು
ಹತ್ತು ನಮೂನಿಯು ಹತ್ತು ಕೆಲ್ಸದು; ಹಂಚಿಕೊಳ್ಳೋರು ಮನಿಮಂದಿ ಹತ್ತು
ಹಂಚಿಕಂಳ್ಳವ್ರು, ಹಂಚಿಕೊಳ್ಳವ್ರೇ, ಹಸಿಮಣಿಯುಂಗ ಬದುಕುಳ್ಳೊರೋ
ಸುತ್ತ ಮುಂತ್ತಿಲ್ಲ ಹತ್ತೂರಾಗ, ಅಂವ ಸರದಾರನಂಥಾಂವ
ಯಾರನಬೇಕು ಚಮ್ಮಾರಂತ; ತುಂಬು, ಚಲುವಿನ ಚಂದ್ರಾಮ !

ಹೀಂಗ; ಬಣ್ಣಕ್ಕ ಬಣ್ಣ–ಬಣ್ಣಾ ಹಚ್ಚಿ ಹೇಳುತ್ತಿದ್ದನೋ ಡ್ಬೋ ರ ಆಮ್ಮಣ್ಣ
ಬಾಳೆ ಅಂದರ ಹೀಂಗಿತ್ತಂತ ಮ್ಯಾಗಿನ ಮನಿಯು ಸುರಪೂರೈಯ್ಯಪ್ಪಂದ.

ಏನಗಾಳಿ ಹೊಕ್ಕು ಗಾಳಿಯಾದನೋ ? ಯಾವ ಗಾಳಿದು ಬಂದು ಸೇರಿತೋ ?
ಗಾಳಿಯೊಳಗ ಧೂಳಿಯಾದನೋ ಗಾಳಿಪಟವಾಗಿ ಮ್ಯಾಲೆ ಏರಿದ್ನೋ

ಏರಿದ ಮನ್ಸ್ಯಾ ಇಳಿಲಿಲ್ಲ ಕೆಳಕ್ಕೋ, ಹಡೆಬಿಚ್ಚಿ ತಾ ಆಡೇ ಆಡಿದ
ಸೂತ್ರ ಹಿಡ್ದವ್ರು ಗುಡಿಯನಾದರೋ, ಸೂತ್ರ ಬಿಟ್ರವ್ರು ಕಳಸನಾದರು
ಬಳತ ಮುಚ್ಚಿದಂಗ, ಮುಚ್ಚಿ ಹೋಗ್ಯಾದೊ ಅರ್ತವ್ರರ ಬಾಯಿ ನಮ್ಮಣ್ಣ
ಬೆಳಕಿಂಡಿ ಮುಚ್ಚಿದ್ಹಂಗ, ಮುಚ್ಚಿ ಹೋಗ್ಯದೊ ನೋಡ್ದವ್ರು ಕಣ್ಣು ನಮ್ಮಣ್ಣ
ಹಿಂತಾದ್ರಾಗೂ ಇದ್ದನೊ ಒಬ್ಬ ದಸ್ಸ ನಂಬರಿ ಹುಸೇನಸಾಬ.

ಊರಂದರ ಕ್ಯಾರೇನಲ್ಲ, ಅಬ್ಬಬ್ಬ ಅಂದರೆ ಏಳ್ಳೆವತ್ಮನಿ
ಇನೆಚ್ಚಂದ್ರ ಆರರ್ವತ್ಮನಿ, ಚಾರು ಚೂರು ಎಣಿಸಿ ಇಟ್ಟರ ಒಂದ್ನೂರವತ್ತಂಗಡಿ
ಅದರಾಗೊಂದು ಚಪ್ಪಲಿ ಅಂಗಡಿ, ಅಂಗಡಿಯಂದರ ಹೆಸರಿಗೆ ಅಂಗಡಿ ಹೇಳಂವದೇನಲ್ಲ
ಕಲ್ಲಮ್ಯಾಲ ಕಲ್ಲಿಟ್ಟ ಕಟ್ಟಿದಲ್ಲ, ಸುಣ್ಣ ಬಣ್ಣ ಹಚ್ಚಿ ಕಣ್ಣ ಬರ್ದದ್ದಲ್ಲ
ತಟ್ಟಿ-ತಟ್ಟಿ ಕಟ್ಟಿ ಮಾಡಿಟ್ಟಂಗಡಿ, ಅದರಾಗೊಂದು ಉದ್ದನೆ ಬಾಕು
ಕುಂತರೆ ಸಾಕು ಸಂಗೀತ ಕಛೇರಿ ಆರಂಭ, ಸರ್ವಾಧಿಕಾರಿಗಳ್ ಅಲ್ಲಿದ್ದ್ರಪ್ಪ ತಿಗಣಿ ತಿಮ್ಮಪ್ಪ
ಇದ್ದಿದ್ರಾಗ ಜೋಡು ಹೊಸುವು ಹತ್ತಾರು ನಮೂನಿ, ಥಳಕ್ ಬಳಕ್ ಹೊಳಿತ್ತಿದ್ದುವಪ್ಪ
ಬಣ್ಣಕ್ಕ ಬಣ್ಣ; ಬಣ್ಣ ಹಚ್ಚಿ. ಶ್ಯಾರದಾಗಿನ ದೊಡ್ಡಂಗಡಿಯ್ಹಂಗ ಹೇಳಿ ಹೇಳತ್ತಿದ್ರು
ಅದೇ ಊರಿನ ಹುಸೇನಸಾಬ, ಅದೇ ಊರಿನ ಅಮ್ಮಣ್ಣ, ಅದೇ ಕೇರಿಯಿ ಹತ್ತಿರ ಮಂದೆಲ್ಲ.
(ಇದೇ ರಾಗದ್ದು ಇವ್ರಂಗಡಿ, ಅವ್ಕೇನ ಕನಸ್ಸಿನ ಬಣ್ಣದ ಕಣ್ಣ ಕಡಿಮಿರಲಿಲ್ಲ)
ದೊಸ್ತಿ ಮಾತು ಅಂತಾರ್ಥ್ಹಂಗ, ನನ್ನಂಗಡಿ ನನ್ನ ತಿಳಿದೇನೋ ಅಂತಿದ್ದ ಐಯ್ಯಪ್ಪ
ಸುತ್ತಲೂರನ್ಯಾಗ ಚಮ್ಮಾರ ಮಂದ್ಯಾಗ, ನನ್ನಂಗಡಿ ಮಿಗಿಲೋ ಮಿಗಿಲು ಎನ್ನುವ ಮಾತು ಒಳಗಿನದು
ಹಿಗ್ಗತ್ತಿದ್ದನೋ ಹಿರಿಹಿರಿಹಿರಿ ಹಿರಿಕಾಯ್ಹಂಗ, ತನ್ನ ಬಳ್ಯಾನ ಕಾಯಿ ಕಂಡಾಗ
ಪೆರವರವರ ಬಳ್ಯಾಗ ಕಾಯಿ ಕಂಡ್ಯಾಗ, ಹಣ್ಣಾಗತ್ತಿದ್ದನೋ, ಸುಟ್ಟ ಬದನಿ ಕಾಯ್ಹಂಗ

ಈ ಊರಿಗಿ ಬರಾಗ, ಡ್ಪೋರ ಅಮ್ಮಣ್ಣ ಬಂದಿದ್ದ ತನ್ನ ಸರೋಬಳಗೆಲ್ಲ
ಒಂಟೆತ್ತಿನ್ಯಾಲಿ ಹೆಳುವ ಬರುವಾಹಂಗ, ಮೂರಂಚಂಜೆಲೆ ಬಂದಿಳಿದಿದ್ದ
ತಾನ ಹುಗದಿದ್ದ ನೆಲದಾಗ ಮಂಕ್ಕ ಮಣ್ಣಿನ ಹರ್ವಿಯೊಂದ
'ಕರಿ'ಬಂ ಮಾಡಿ ಮಾಡಿ ತಗದಿಡತ್ತಿದ್ದ, ಐದರ ಮ್ಯಾಲೆಂದು
ಸಣ್ಣದ ಹರಳು ಅಮರಿ ಚಕ್ಕಿ ಹರಳುಪ್ಪು ಸವಳಾ, ಮ್ಯಾಲಿ ಮೆತ್ತತ್ತಿದ್ದ ಕಾಳಸರ

ಹೀಂಗ ಏನೆಲ್ಲಾ ಹಾಕಿ, ಯಾರು ಮಾಡದ್ಹಂಗ ಮಾಡಿದತ್ತಿದ್ದಾ ಚರ್ಮದ ಮಾಲೆಲ್ಲ
ಅಪ್ಪ ಮಾಡಿದ್ದು ಇದs ಕೆಲಸ, ತಾತ ಮುತ್ತಾತ ತಲೆಮಾರೆಲ್ಲ ಮಾಡಿದಿದೇ ಕೆಲ್ಸ
ಬಿಟ್ರ ಮುಂದಿನ ಜಲ್ಮಕ್ಕ ಹಂದ್ಯಾಗಿ ಹಂಟಾ ದು ಖರೆ ಅನ್ನೋ ಅಂಬೋಣ
ಕಣ್ಣ ಮುಂಚ್ಚಿ ತಾ ಕಣ್ಣ ತೆರೆದ್ಹಂಗ, ರಾತ್ರಿ ಹೋಗಿ ತಾ ಹಗಲಾದ್ಹಾಂಗ
ಆ ಮಂದಿ ಜಗದಾಗ ಬದಲಾಗಿ ಹೋಗಿದ್ದ ಡ್ಹೋರ ಅಮ್ಮಣ್ಣ ಇದ್ದಕ್ಕಿದ್ಹಾಂಗ
ನೆಲದಾನ ಹರ್ವಿ ಕಿತ್ತೋಗದಿದ್ದ, ಕರಿಯು ಗಚ್ಚಿನ ಕೊತ್ತಾಕಟ್ಟಿಸಿದ್ದ ಸಾsಲಕ
ಅಪ್ಷಬಿದ್ದರೂ ಓವಾಳು, ಒಳಗಿಳಿವಳದರೂ ಓದಾಳು, ಅಂಕಿಲಿ ಓವಲ್ಲ ಎರಡಲ್ಲ
ಮೂರು

ಸಂತ್ತ ಮುತ್ತಿನ ಹತ್ತೂರಾಗ, ಇವ್ನ ಕೈ ಹಿಡಿಯೋರು ಯಾರಲ್ಲಿ ?
ಸಸಿ ಹೋಗಿ ಗಿಡವಾಗಿದ್ದ, ಗಿಡಾ ಹೋಗಿ ಮರವಾಗಿದ್ದ, ಏನು ತಂಪದು ಮರದಡಿಗಿ
ಮಂತ್ಯಾರ್ದಾಗ ಮನ್ಸ್ಯಾಂತ ಗುರ್ತಿಸಿ ಕೊಂಡಿದ್ದ.
ಕೇರ್ಯಾಗಂತೂ ಊರ ಸೂರ್ಯ ಇವ್ನ ಆಗಿದ್ದ

ಎತ್ತ ಎಮ್ಮಿಯಂ ತೊಗಲು, ಕ್ವಾಣ, ಆಕಳಂ ತೊಗಲು ಯಾವುದು ಸಿಕ್ಕರೂ ಸರಿಯುವಗ
ಹತ್ತ ಊರಿನ ತೊಗಲೆಲ್ಲ, ಬಂದ ಬೀಳುತ್ತಿದ್ದು ಕರಿ ಕೊತ್ತಕ್ಕ
ಇದ ನೋಡಿ ನೋಡಿ ಡ್ಹೋರ ಮಂದಿ, ಮುಟು ಮುಟು ಉಗುಳಂ ನುಂಗತ್ತಿದ್ದರು
ಮನಿಯಂವರೆಲ್ಲ ದುಡೆವ್ರು, ಮೈ ಕೈ ಮುರ್ದು ಮನೆಯಂಗಳದಾಗ
ನಿಟ್ಟೊಟ್ಟವ್ರು ತೊಗಲಿನದು, ಪಡಸಾಲ್ಯಾಗ ಎಣಕಿಲ್ದ
ಮಂಟ್ಟಿಯಂ ತೊಗಲು ಗೊಬ್ಬಿಯಂ ತೊಗಲು ಜಗ್ಗದ ತೊಗಲು ಜತ್ತಿಗೆ ತೊಗಲಂ
ಕಾಲ್ಮರಿ ತೊಗಲಂ ಏಸೋಂದವು ತರಾ ತರಾ, ಎಲ್ಲಾ ಬ್ಯಾರೆ ಬ್ಯಾರೆ
ಎನ್ಹಾಕಿ ಮಾಡವ್ರು ? ಎನ್ಹಾಕಿ ತೀಡವ್ರು ? ಏನಗುಟ್ಟೊ ಅವ್ರೆ ಬಲ್ಲುರು.
ತಂಟೆಯಂ ಬಿಚ್ಚಿ ಓಟಕ್ಕ್ಸ್ನದಿಲ್ಲ, ಕಲಿಯಂ ಬೇಕೊ ಗುಟ್ಟಿನ ಗತ್ತು ಇವುರ್ರಿಂದ
ಎನವಿಂದುಂಪ್ಪೋ ತೊಗಲೆನದು, ಹಿಡಿದರ ಕೈಯಾಗ ಅಳ್ಳಿ ಹಿಡಿದ್ಹಾಂಗ
ಏನದ್ರ ಹೊಳ್ಪು; ಆದ್ರಾಗ, ಮಕಾ ನೋಡ್ಕಂಡು ಕರಾಪತಿದ್ಹಾಂಗ
ಏನದ್ರ ಬಣ್ಣ ಅದರ್ದು: ನೆನಿಯಿಡು ನೀ, ಕುದ್ಸಿ ನೋಡಿ ನೀ, ಬಣ್ಣೋದರ ವಾಪಸ್ !
ಹಂಚಪ್ಪ ? ಹೀಗಿದ್ದಾಗ ತೊಗಲಿನ ಮಾಲು ಬಿದ್ದಾವ್ರು ಯಾರಲ್ಲಿ
ದುಡ್ಡ್ಯಾಡದುಂಡ್ಡು ಹೆಚ್ಚಾದರೂ ನಗತಾ ಕೊಂಡು ಹೋಗ್ತಾವ್ರು
ಮ್ಯಾಲೆ, ಮತ್ತ ಬರ್ತಿವೆಂತ, ಸಲಾಮು ಹೊಡೆವ್ರು !

●
●

ಬಿಳಿಮಾರಿಯುಂವ ಹೆಣ್ಣಿನ ಮೂಗಂವ ಕಟುಂಗರ ಹುಸೇನಸಾಬ
ಕರಿಯುಂದಾಡಿಯುವಂ ಕರಿ ಜಾಕೀಟಿನವ ಪಟಾಪಟ್ಟಿ ಲುಂಗ್ಯಾಂವ

ಓಂದಿನ ಮಾತಿದು, ಹಿಂದಿನ ಕಲಿಯಿದು ಹೊಳ್ಳ ನೋಡಿದರ ಕರಿನೆರಳ್ಹಂಗ
ಅಣ್ಣ–ತಮ್ಮ ನಾಲ್ಕು ಮಂದೆವ್ರು, ಏರಾ ಇಳುವಿಕೆ ಜಗಳ ಅಂಗಳದಾಗ
ಊರೊಡಧರು, ಕೇರೊಡದರೊ ಹಂಚಿಕೊಳ್ಳುವಾಗ ಗುಲ್ಲೆದ್ದರೊ
ಯಾವ ಊರಾಗ ಯಾವ ಹಳ್ಯಾಗ ಯಾವ ಕೇರ್ಯಾಗ ಯಾವ ಮನಿಯಾಗ
ಹೆಚ್ಚ ಖಂಡ ತಾ ಮಾರೆ ಮಾರುದು ರಾಶಿ ರೊಕ್ಕ ಬಳ್ದುಕೊಳ್ಳದು
ಗೊತ್ತು ಅವ್ರಗಿ ಯಾಪಾರದ ಗತ್ತು, ಹಂಚಕ್ಯಾಗಿತ್ತೇನೇನೋ ಕರಾಮತ್ತು
ಅಣ್ಣ ತಮ್ಮರೊಳು ಜಗಳೊ ಜಗಳ, ಅದೇ ಕೇರಿ ಬೇಕು ಅದೇ ಓಣಿ ಬೇಕು
ಅವೇ ಊರು ಬೇಕು ಅದೇ ಹಳ್ಳಿ ಬೇಕು, ಸಿಗುವುದ್ಹ್ಯಾಂಗ ಒಬ್ಬರಿಗೆಲ್ಲಾ ?
ಮನಿಗಿಹಿರೀಮಗಾ ಹುಸೇನಿ, ಊರು ಬಿಟ್ಟನೊ ಕೇರಿ ಬಿಟ್ಟನೊ ಅಳುವಳಂತ,
ಬಂದಿಳಿದನೊ ಯಾರು ಗೊತ್ತಿಲ್ಲದ ಈ ಊರಿಗಿ, ಆಗ ಬಲು ಇದು ಸಣ್ಣ ಹಳ್ಳಿ
ದೂಕಿದರೆ ಅದು ಕಾಲು ಮುರಿದುಕೊಂಡು ನೆಲಕ್ಕುರುಳುವದನ
ಒಣಗಿದ ಕಳ್ಳಿ ಕಟ್ಟಿಗಿಯ್ಹಂಥಾದನ ಇಂದೋ ನಾಳೊ ಸತ್ಹೋಗು ದನ
ಹತ್ತು ಸಾರಿ ಎತ್ತು ಹತ್ತು ಸಾರಿ ಬಿತ್ತು, ಮನಿಗಿ ತರುವಸಕ
ದನವೊಂದು ಕೊಯ್ದ್ರ ಮೂರು ದಿನಾ ಬೇಕು ಪೂರಾ ಮಾರಾಟ್ಕ
ಕತ್ತಲಾದರ ಖಂಡ ಮೆತ್ತಗಾಗುತ್ತಿತ್ತು, ಬಾಸಿವಾಸನೆ ಮನಿತುಂಬತ್ತಿತ್ತು
ಹೇಂಡತಿ ತಾನುಂ ತಲೆಯುಂ ಮ್ಯಾಲ ಹೊತ್ತು, ಮಾರಿ ಬರುವರೊ ನಾಲ್ಕು ಹಳ್ಯಾಗ
ಉಳ್ದ ಖಂಡ ನೀರೊಡ್ದುಯಿಡುಂವರು ಬಾಸಿಖಂಡ ದಾನಕ್ಕ
ದಾನ ತಂದವ್ರು ತೊತ್ತಿನಾಳಂಗಳು, ಬೆಳ್ಳಬೆಳತನಕ
ಇಂತಿದ್ದ ಹುಸೇನಿ ಎಂತಾಗಿ ಹೋಗಿದ್ದ; ಅದೇ ಊರಾಗ ಎರಡಂಗಡಿ ತಗದಿದ್ದ
ಕೊಯ್ಯುತ್ತಿದ್ದನೋ ಬಂದೊಂದ ಸಂತಿಗಿ ಎರಡೆರಡು ಎತ್ತು
ಪರವೂರವ್ರಿಗ್ಗಿ ಇದ್ದೂರವ್ರಿಲ್ಲಿ ಆಗಿದ್ದನೀತ 'ಹುಸೇನಸಾಹೇಬ್'
ಈ ಮೂರ ಮಂದ್ಯಾಗ ಧಂದೆಯ ಮಾತ್ಯೈತಿ, ಧಂದೆಕ ಧಂದೆ ಕೂಡ್ತ್ಯೈತಿ
ಧಂದಕ ಮಿಗಿಲಾಗಿ ದೋಸ್ತಿಯು ಬೆಳದ್ಯೈತಿ. ಅದು ಬಿಡಸದ ಕೊಂಡ್ಯೈತಿ
ಈ ಮೂವರೊಳಗ ಯಾರಿಗೆ ಯಾರೂ ಸಾಬರೂ ಅಲ್ಲ, ಸಾಹೇಬ್ರು ಅಲ್ಲ, ಖೂನ್ಯೈತಿ
ಹೋಗೊ ಬಾರೋ ಅನ್ನು ಮನಿಯಾಗ, ಅಕ್ಕ–ಅಣ್ಣ: ಕಾಕ–ಮಾವ ಮಾತ್ಯೈತಿ
ಮಾತು ಮಾತಿನ್ಯಾಗ ಮಂಥನ್ಯೈತಿ, ಮಂಥನದ ನಡುವೆ ಬೆಣ್ಯೈತಿ

ಬೆಣ್ಣಿಯೊಳಗ ಕೂದಲ್ಬಂದರೂ, ಬೆಣ್ಣಿ ಹತ್ರದ್ಹಂಗ ಕಡಿಗ್ಯೆತಿ
ಯಾಕಂದರ ಅದು ದೊಸ್ತಿಯ ಮಾತ್ಯೆತಿ, ಬಿಡಸದ ಬೆಸಗ್ಯೆತಿ
ಬಿಡಸಾಕ ಹೋದವ್ಗ ದಂಸಮನಿ ಅಲ್ಲಿ ಕಾದ ಕುಂತ್ಯೆತಿ
ಅಂಥ ಗೆಣತನ ಈ ಮೂರ ಮನಿಯಾಗ ಬಿದ್ದ ಸಂದ್ಯತಾ

ತೂರಿ ಬಂತು ಗಾಳಿ ಮೊದಮೊದಲು
ಊರ ಮರದ ಮ್ಯಾಲಿ
ಸೂಸಲದರಡಿಗೆ ಮೋಹದ್ಹೊನಲು
ಏಸೊಂದು ದಿನದ ಮ್ಯಾಲಿ
ಜೊಂಪಿಗೆ ಜೊಂಪಾಗಿ ತೂಗ್ಯಾವ ಕೊಲಿ
ಸೊಂಪಿಗೆ ಸಂಪಾಗಿ ಹಾಡ್ಯಾವ ಅಲ್ಲಿ
ಗುಂಗಿಗೆ ದುಂದಾಗಿ ದುಂದಿಗೆ ಮಂದಾಗಿ
ಮರ್ರ್ಯಾವ ಮೈಯು ಮನಸಿನಾ ಕನಸ
ಊರಿನ ಮಾತಲ್ಲ ಮನಿಯುನ ಮಾತಲ
ಸೇರಿ ಸಂದುವು ದೇಶೆಂಬ ಕೋಶ

●
●

ಏನು ಗದ್ದಲದು ಏನು ಸಡಗರದು ಹರಿಜನರ ಕೇರ್ಯಾಗ ವಾಲಗ
ಮದುವೆಂತ ತಿಳದರ ಆ ಮಾತ ಸುಳ್ಳು, ಜಾತ್ರೆಂತ ತಿಳಿದರ ಮೊದಲ ಸುಳ್ಳು
ಯಾರೂ ಸತ್ತಿಲ್ಲ ಯಾರೂ ಹುಟ್ಟಿಲ್ಲ ಇದ್ದ ಜನರೆಲ್ಲ ಎದ್ದು ನಿಂತಿದ್ರು
ಕೆಳ ಜನರಾದರೂ ಏನಂತ ? ನಾವೂ ಮನುಷ್ಯಾರಂತ
ಅಂಥವರಿಂಥವ್ರು, ಮಕ್ಕಳಲ್ಲ ನಾವು ಹರಿಯ ಮಕ್ಕಳಂತರ
ಗಾಂಧಿ ತಾತನ ತತ್ವಕ್ಕ, ಗೋಪಾಲಚಾರಿಯ ಪುಂಗಿಯ ನಾದಕ್ಕ.
ಏಳು ರೂಪಾಯಿ ಸಂಬಳದವರು ಆ ಊರ ಗೋಪಾಲಚಾರಿ ಮಾಸ್ತರು
ಜನ ಸೇವಾಕ ಹೆಸರಾದವರು, ಜನಕಾಗಿ ಎಲ್ಲಾ ಕಳಕೊಂಡವರು
ಗಾಂಧಿ ತತ್ವಕ ಮನಸೋತವರು, ಅಳ್ಯಾಗಿ ಎಣ್ಣಿ ಇಂಗಿದವರು

ಹರಿಜನ ಕೇರಿಗೆ ಕಾಲಿಟ್ಟವರು, ಬ್ರಾಹ್ಮಣನೆಂಬುದ ಮರ್ರ್ಯೋದವರು
ರಾತ್ರಿ ಸಾಲೆ ತಗದವರು, ಎಂಟುದಿನದ ಬಾಳ ಹಳೆ ಪತ್ರಿಕೆ ಓದ್ಹೇಳವರು
ರಾಟಿ ನೂಲವರು, ಖಾದಿ ತೊಡುವವರು, ಆ ಊರಿಗೆ ಗಾಂಧಿ ಆಗಿ ನಿಂತವರು


ಶೂದ

ಉಣ್ಣುವದು ಮನಿಯಾಗ, ನೀರುಗುಳುವದು ಹರಿಜನ ಕೇರ್ಯಾಗ
ಹೆಚ್ಚೇನೇಳುದು ಅವರಿಪ್ರನೆಂಟು, ಕರಿವರು, ಅವರಿಗೆ ಹರಿಜನ ಗೋಪಾಲಚಾರಿ
ದೊಡ್ಡ ದೊಡ್ಡೋರು ದನಿ ಎತ್ತದಾಗ ಧಣಿಗಳ ಬಾಲ ತೊಡಿಯಾಗಿತ್ತು
ಗೊಪಾಲಾಚಾರಿಯು ಪುಂಗಿನಾದಕ ಮರುಳಾಗಿತ್ತೋ ಊರ ಜನ ಅಂತೆ ಕೇರಿ ಜನ
ಆಣೆ ಭಾಷೆ ಹಾಕಿ ಸಡ್ಡೋಡ್ದು ನಿಂತರು ತತ್ವಕ ತತ್ವ ಕಾಯಾಕ
ಅವರೊಳಗಿದ್ದರು ಮೂರು ಜನಾ ಐಯ್ಯಪ್ಪ ಅಮ್ಮಣ್ಣ ಹುಸೇನಿ

ನಾ ಹೊಲೆಯ ಎನ್ನಲಾರೆ ನಾ ಮಚ್ಚಿಗನೆನ್ನಲಾರೆ
ನಾ ಹೆಂಡ ಕುಡಿಯಲಾರೆ ನಾ ಖಂಡ ತಿನ್ನಲಾರೆ
ನಾ ರಾಟೆ ಹಿಡಿಯುವೆ ನಾ ಪಾಟಿ ಹಿಡಿಯುವೆ
ನಾ ಕ್ಷೌರ ಮಾಡುವೆ ನಾ ಭಂಗಿ ಬಳಿಯುವೆ
ನಾ ಜೀವಂತ ದನಗಳ ಕಡಿಲಾರೆ
ನಾ ಆ ದನಗಳ ಚರ್ಮ ಹಿಡಿಲಾರೆ
ನಾ ಆ ಚರ್ಮದಿ ಚಪ್ಪಲಿ ಹೊಲಿಲಾರೆ
ನಾ ಆ ಚರ್ಮದ ಚಪ್ಪಲಿ ತೊಡಲಾರೆ

ದಿನ ಬೆಳಗಾದರೆ ಹಲ್ಲುಜ್ಜಬೇಕು
ದಿನಕ್ಕೊಮ್ಮೆ ಮೈ ಸ್ವಚ್ಚ ನೀ ತೊಳಿಬೇಕು
ಇರು ಸೀರೆ ಧೋತಿ ನಿತ್ಯಾ ತ್ವೊಳದುಡಬೇಕು
ಮನಿ ಕುಂಬಿಯ ಮ್ಯಾಲೆ ಈ ಧ್ವಜ ಇಡಬೇಕು

ದೇಶಕ ಬಂದರ ಸ್ವತಂತ್ರ ಎಲ್ಲರಿಗೆಲ್ಲಾ ಮುಟ್ಟತಾರಂತ
ಅವ್ರ ಮನಿಯಾಗ ನಾವುಣ್ಣುವದು ನಮ್ಮನಿಯಾಗ ಅವ್ರು ಉಣ್ಣುವುದು
ಶೀಲ ಎಂಬುದು ನೀರಿಗಿಲ್ಲಂತ ಎಲ್ಲರಿಗೆಲ್ಲಾ ಒಂದೇ ಅಂತ
ಯಾರು ಹೆಚ್ಚ ಅಲ್ಲ ಯಾರು ಕಮ್ಮಿಯಲ್ಲ ಮನಸೆಲ್ಲ ಒಂದೇ ಅಂತ

ಶಾಸ್ತ್ರದ ಮಾತಿದು ಹೇಳುತ ಹೋದರೆ ಹನುಮನ ಬಾಲ ಬೆಳ್ಗೊವುತ್ತ ಹೋಗುದು
ಅಣ್ಣಾ ಏನಿದು ಮಾತು ಏನಿದು ಕೃತಿಯೆಂದು ಬೆಕ್ಕಸ ಬೆರಗಾಗದಿರು ತಮ್ಮಾ
ಆಣೆ ಹಾಕು ಮುನ್ನ ನಾಲಿಗೆ ಕಚ್ಚಿದ ಕಟುಗರ ಹುಸೇನೊಂದು ಮೂಲೆಯಲಿ
ಆಣೆ ಹಾಕಿದೋರು ಉಗುಳು ನುಂಗಿ ನುಂಗಿ, ಕಾಲ ತಿರುಗಿದ್ಹಾಂಗ ಖಂಡ ತಿಂದರು.
ತಟ್ಟಿ ಮರಿಯಲಿ ಗ್ಯಾಡಿ ಮರಿಯಲಿ ಕಣ್ಣ ಮರಿಯಲಿ ಹೆಂಡ ಕುಡಿದರು

ಬಟಾ ಬಯಲಿನಲಿ ಮಹಾನೋಡಿ ನೋಡಿ ಮರ್ತ್ಹೋದ್ವಂಗ ಮರ್ತಬಿಟ್ಟರು ಕೆಲವರು
ಉಗುಳು ನುಂಗಿ ತಾ ಮಕಾ ನೋಡಿದರೆ ಆಚಾರು–

ಹೊಟ್ಟೆ ಪಾಡೆಪ್ಪ ದುಡಿವ ಮೈ ತಂದಿ
ಅದು ಬಿಟ್ಟರ ತಿನ್ನುಣ್ಣುದ್ಕ ನಮಗೇನೈತಿ,
ಸಣ್ಣನ ಕೂಸಿಗಿ ಮನ್ನಿಸಿ ಉಣಸಾಕ
ಹೈನಿಲ್ಲ ತಂದಿ ಮನಿಯಾಗ
ತೊಳ್ದು ತೊಳ್ದು ಉಡುವಾಕ–ತೊಡುವಾಕ
ಅರಿವಿಲ್ಲ ತಂದಿ, ಹೊತ್ತಿಲ್ಲ
ಶುಚಿಯಾಗಿರಬೇಕು ನೀವ್ಹೇಳುದು ಸರಿ ತಂದಿ.
ದಿನ ಬೆಳಗಾದರೆ ಮೈ ಮಣ್ಣಾಗು ಕೆಲಸ
ಮನೆ ಸೇರಿದರೆ ದೀಪ ಹಚ್ಚುವ ಕೆಲಸ
ತಂದೆ ನೀವು ದೊಡ್ಡವರೆಪ್ಪ–ನಾವು ಸಣ್ಣವರೆಪ್ಪ
ನಿಮ್ಮಂಗ ನಾವು ಇರುವುದಂದರ ಹ್ಯಾಂಗಾದೀತು ತಂದಿ
ಆ ದೇವ್ರುರ ಉರುದಾನು ಕಿಡಿಯಾಗಿ ಕಾರ್ಯಾನು
ನಾವು ಸುಟ್ಟು ಬೂದಿಯಾದೇವು ತಂದಿ
ಐಯ್ಯಪಮ್ಮಣ ಉಳ್ಳವರು ತಂದಿ
ಅವ್ರುಂಗ ನಾವು ಮಾಡದ್ರ ಉಪವಾಸಿರ್ರಿ ತಂದಿ

●
●

ಇದ್ದರಿರಬೇಕು ಇಂಥ ಶಿಷ್ಯರು ತತ್ವಕ್ಕೆ ತತ್ವ ನೆಚ್ಚಿ ನಡಿಯೋರು
ನಾನೆಟ್ಟಿರುವ ಹತ್ತು ಸಸಿಯಲಿ ಎರಡಾದರೂ ದಕ್ಕಿದುವಲ್ಲ
ದುಃಖ ಒಂದೆಡೆ ಸಂತಸೊಂದೆಡೆ ಗೋಪಾಲಚಾರಿಯರಿಗೆ
ಹೀಗಿದ್ದಾಗ ಒಂದು ದಿನಾ ಬಿತ್ತೊಂದು ಕನಸು, ಆ ಗಿಡದ ಮ್ಯಾಲಿ ಮನಸು

ಹುಸೇನಿಯ ಖಮೇಲಿ ಎದುರು ಹತ್ತಾರು ದಿನಗಳ ಕಟ್ಟಿ ಹಾಕಿದ್ರು
ಕಟ್ಟಿಗೆ ಹಿಡಿದು ಓಡಿ ಹೋದವ್ರ ದಿನಗಳ ಕುಣಿಕೆ ಬಿಚ್ಚಿ ಬಿಚ್ಚಿದ್ರು
ಗುಡ್ಡದಕಡೆಗೆ ದನಾ ಓಡಿಸಿ ಹೋಳ್ಳಿ ನೋಡಿದ್ರು, ಅವೇ ದನಗಳು ಗೂಟಕ್ಕ !
ಕಟ್ಟಿಗೆ ಎತ್ತಿ ವಂತ್ತೆ ಹೊಡೆದರೂ ಏಳಲೊಲ್ಲು ಈ ಸೊಳಕ್ಯಾ ದನಗಳು
ಇಂದೋ ನಾಳ್ಯೋ ಸಾಯುವ ದನಗಳು ಹಾಕತ್ತಿದ್ದವು ಸಾವಿನ ವೆಂಲುಕು
ಪೆಟ್ಟು ಬಿದ್ದರಿಲ್ಲ, ಬಾಲ ಮುರ್ದರಿಲ್ಲ ಕದಲಲ್ಲಿಲ್ಲ ಗೆರಿಯ

ಕೈಯು ಸೋತ ಹೋದು, ಕಣ್ಣ ಬೆಳ್ಳಗಾದು ಎಚ್ಚರಾಯಿತು ಆಚಾರ್ಯರಿಗೆ
ಕನಸಿನ ಪರಿಯು ಹರ್ದ ಹೋಯಿತೊ, ಕಟ್ಟಿದ ಗುಡಿಗೆ ಗೊರಲ ತುಂಬಿತೊ.
ಜೊತೆಗಿದ್ದಾವರೆಲ್ಲ ಬಿಟ್ಟುಹೋದ್ರೆಂಬ ಸಂಕಟ ನೋಡಿವರಿಬ್ಬರಿಗಿ
ಊರ ಜನಾ ಇವ್ರು ಬಾಳ ದೊಡ್ಡವ್ರು, ಇವ್ರ ಮಾತಿಗೆ ಬೆಲೆಕೊಡದಿದ್ದರೆ ಏನಂದಾರು
ಜನರೆಲ್ಲ ?
ಅವ್ರು ನೋಡಿದ್ರ ಊರ ಮ್ಯಾಗಿಲೋರು, ನಮ್ಮ ಕೇರ್ಯಾಗ ತೊಗಲಿನ ಕೆಲ್ಸ ಕಲಿವರು!
ಎಂಥಾ ಮಂದಿ ? ಏನು ಮಾತು ? ಅವ್ರಗಿ ಬೆಲೆ ಕೊಡದಿದ್ದರ ನಾವ್ಯಾರು ? ನಮ್ಮ
ಬಾಳ್ಯಾವ್ದ ?
ಎನ್ನುವ ದುಗುಡ ಮನ್ದಾಗ, ಹಕಳಿಯು ಮ್ಯಾಲಿ ಹಕಳಿ ಬಂದರೂ—ಕಿತ್ತೊಗೆವರೊ
ಐಯ್ಯಪಾಮ್ಮಣ
ಬಂದ ಜನಕೆಲ್ಲ ತರಬೆ ನಿಲ್ಲಿಸಿ ಆಣೆ–ಭಾಷೆ ಕೇಳಿ ಮಾತ ಹಿಡಿಯಂವ
ಸತ್ತ, ದನದ ತೊಗಲು ಇದ್ದರ ಹೊರ್ಸಿ ಮನಿಯೊಳಗ ಕಳ್ಸಂವ
'ಬಿಸಮಿಲ್ಲಾ' ಮಾಡಿದ ತೊಗಲು ಇದ್ದರ ಹೊರ್ಸಿ ಹೊಳ್ಳಿ ಅವ್ರ ಮನಿಗಿ ಕಳ್ಸಂವ
ತೊಗಲು ಹೊತ್ತುಕೊಂಡು ಮನಿಗಿ ಹೋಗವ್ರು, ಏನೋ ಬೈದರು ಏನೋ ಅಂದರು
ಡ್ವೋರ ಅಮ್ಮಣ್ಣ ಕೇಳಿ ಕೇಳಿಯೂ ಕೇಳಿಕೇಳದ್ಹಂಗ, ಲೆಕ್ಕಕ್ಕಿಲ್ಲದ್ಹಂಗ ಸುಮ್ಮನಿರುವ
ಹಸಿದೊಗಲ ತಂದವ್ರು ಹೀಂಗ ಹೊಳ್ಳಿ ಹೋದರ, ಒಣದೊಗಲು ಕೊಳ್ಳವ್ರು,
ಮತ್ತೊಂದು ರೀತಿ
ಪೆಸರ ಹೇಳಿ ಅವ್ರು ತೊಗಲ ಕೇಳಿದರ ಇಲ್ಲೆಂಬುವದೊ ನಾಲಿಗೆ ಈಗ
ಹೊಸೊಂದು ನಮೂನಿಯ ತೊಗಲು ಮಾಡುತ್ತಿದ್ದ ಏನು ಬ್ಯಾನಿ ಬಂತು ಇವ್ಗ ಎನ್ನುವರ
ಸತ್ತ ದನಗಳಾ ಹಸಿದೊಗಲುಗಳು ನಿತ್ಯ ಬರುವಲ್ದು ಮಾಡುವುದೇನೆಂಬುವ ದುಗುಂಡ
ಬಂದ ತೊಗಲುಗಳೊ ತೆಳ್ಳಗೆ–ಮೆಳ್ಳಗೆ ಹಡುಪ–ಹರುಬ ಏನು ಸುಖ ಇಲ್ಲ
ಸುಣ್ಣ ಹಾಕಿ ಅವು ನೆನಿಯಲಿಟ್ಟರ, ಮರುದಿನದೊಳಗ ತಾತಾನು ತೂತು ತೊಗಲುಗಳು
ಬಂದ ಗಿರಾಕಿಯುಲ್ಲಾ ಮಾರಿಗಿ ಹೊಡದ್ಹಂಗ ತೊಗಲೆಸ್ತು ಹೊಗ್ವರು ಮೈಮ್ಯಾಲಿ
ಇಂಥ ತೊಗಲೆಗಿ ಯಾರು ಕೊಡುವರೊ ನೀ ಹೇಳಿದಷ್ಟು ರೊಕ್ಕ ?
ಇಂಥಾ ಮನಸ್ಯಾ ಹ್ಯಾಂಗ ಇದ್ದಾ ? ಹೀಂಗ್ಯಾಕಾದನೊ ಎನುವರು ಬೆನ್ನಿಗ್ಯೊ
ಕೊಟ್ಟರು ಉತ್ತರ ಇನ್ಯಾರೊ ; ಇಟ್ಟರು ಪ್ರಶ್ನೆ ಇನ್ಯಾರೊ :
ಯಾರೊ ಗಾಂಧಿಯಂಬೋರು ಇದ್ದಾರಂತ, ಅವ್ರು ಹೀಂಗ ಮಾಡಬೇಕಂತ ಹೇಳ್ಯಾರಂತ
ಯಾರಪ್ಪ ಗಾಂಧಿ ಹ್ಯಾಂಗಿದ್ದಾನು ? ಎಂಥಾಮೋಡಿ ಮಾಡಿ ಬಿಟ್ಟಾನೋ ?
ದೇವರ ದೂತ ಗಾಂಧಿಯಂಥ, ಅವ್ರು ಹೋದಲೆಲ್ಲಾ ಜನಾಸಾಗರ ಸಾಗರಂತ

ಹ್ಯಾಂಗ ಇದ್ದಾನಂ ಮನಸ್ಯಾ ಅಂವಾ ನೋಡಬೇಕು ನಾವೊಮ್ಮೆ
ಬಟಲ ದೊತ್ತ್ಯಾಂವ ಬಗರಿಗಣ್ಣಿನವ ನೆಟ್ಟನ ಮೂಗಿನ ಚಲುವಂತ
ನಡದಾಗ ದುಪಟಿ ಹೆಗಲಿಗಿ ದೂಲಾ ಸೊಂಟಕ ಗಡಿಯಾರ ಕಟ್ಟ್ಯಾತಾನಂತ
ಕಾಡಚಪ್ಪಲಿ ನಾಡ ಚಡ್ಡಿ ಹಿಡ್ದ ಬಡಾಬಡಾಬಡಾ ನಡಿಯೂವಂತ

ಬಂದ ಗಿರಾಕಿಯಂಲ್ಲಾ ಮಾರ್ಗಿಯಂಗಂದ್ಹಂಗ ಅಂದು ಹನ್ನೊಂದು ಮಾತನಾಡಂತ ಹ್ಯಾದಾಗ

ಊರವರಲ್ಲಾ ಮನಿಯಂವರೆಲ್ಲಾ ಮೂಗ ಮಂರ್ದ ತಾ ಆಡಿಕೊಳ್ಳುವಾಗ
ಹಸಿತೊಗಲಿಲ್ಲದೆ ಕರಿಯಂತಗಿಯಂಲು ಹಳೆಯಂ ಹರ್ವಿತಾ ಮತ್ತ ಹೂಳಿದಾಗ
ಒಡದ ಕುರುಮ್ಯಾಲಿ ಕ್ಯಾರ ಹಾಕಿತಾ ಗರಗರಗರ ತಿರುವಿದ್ದಾಂಗ ಆಗಿತ್ತಾಮ್ಮಣ್ಣಗ
ಸಂದಸಂದೆಲ್ಲಾ ಇಳದ ಹೋದವೋ ಕೀಲಕೀಲಯುಲ್ಲಾ ಖಾಲೆಯಾದವೂ ತಡಿಯಲಾಗ ಲೆಲ್ಲ ಕಡಿತನಕ

ಸಂಳ್ಳ ಆಡಿದರ ನಾಲಿಗ್ಹಿಡಿಯಂಂವ ಹೊರಗೆಳದುತಾ ಬರಿಯು ಹಾಕಂವ
ಆಣೆ ಮಾಡಿದ, ಭಾಷೆ ಕೇಳದ ಹಸಿದೊಗಲ ಕೊಳ್ಳುವನೊ ಅವ್ಮಣ್ಣ
ಆಣೆ ಹಾಕಿ ಹಾಕಿ ಭಾಷೆ ಮಾಡಿ ಮಾಡಿ ತೊಗಲ ಮಾರುವನೊ ಅಮ್ಮಣ್ಣ

ಇಂಥದೆ ಗೋಳಂ ಐಯ್ಯಪ್ಪಂದಂ, ಹೆಸರಿಗಿ ಬ್ಯಾರೆ ಮಂಖವಾದಕ
ಜೀವಹೋದರೂ ಹೋಗಲೆನ್ನವ ಮಾಡಿದ ಆಣೆ ಬಿಡಲೊಲ್ದಂವ

'ಕೊಟ್ಟ ಭಾಷೆಗೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು....'

ಜನಗಳ ಬಾಯಿಂಗೆ ಹೊಲಗಿ ಹಾಕುತ್ತಿದ್ದ, ಇಂಥ ಕಥಿ ಹೇಳ್ಹೇಳಿಂವ
ಆಣೆ ಮಂರ್ದವ್ರರ್ದ ಮಾತು ಹೋಯಿತಂ, ಚಡ್ಡಿ ದೋಸ್ತಿ ಕಲಕಾಯಿತೊ
ಹತ್ತತ್ತು ಬಾರಿ ಆಣೆ ಹಾಕಿಸಿ ತೊಗಲ ತಂದರೂ, ಮುಳ್ಳ ಅಳುಕಿದ್ಹಂಗ ಅಳುಕುವದು ಎದಿಯಾಗ

ಬಿಟ್ಟು ಬಿಟ್ಟನು ಅಮ್ಮಣ್ಣನ ಗೆಣತನ ನಾಲ್ಕದಿನದಾಗ, ಅವ್ನ ಯಾಪಾರ ಬೆಳದಾಗ

ಸತ್ತ ದನಗಳ ಸ್ವತಃ ತಾನ ಹುಡುಕಿದ, ಹಿಂದಿನ ಕಾಯಕ ತಾನ ಸುರು ಮಾಡಿದ
ಕರಿಮಾಡುಂವ ಹರವಿಯು ಹೂಳಿ, ಹಸಿದೊಗಲ ಹಾಕಿ ತೊಗಲ ತಗದನೋ
ಸತ್ತ, ದನಾ ಬಂದರೆ ಕೆಲಸ ಸಾಗುವುದು, ಬಾರದಿದ್ದರೆ ಸಾವಿನ ಸುದ್ದಿಗೆ ಕಾವುದು
ಹೀಗಿತ್ತೈಯ್ಯಪ್ಪನ ಜೀವನ ಗತ್ತು, ಬಾಯಿ ತೆಗೆದರೂ ತತ್ವದ ಮಾತು

ಏನೋ ಅಂದರೂ ಏನೇ ಬೈದರೂ
ಐಯ್ಯಪ್ಪ ಮುಸಿ ಮುಸಿ ನಗುತ್ತಿದ್ದ ಮೀಸ್ಯಾಗ

ಎಂಥ ಚಪ್ಪಲವು ಖರೀಏರ್ಯಾವು
ಏನ ತೊಗಲಿದು ಬಾಳಕೆಲ್ಲದ್ದು
ಉಳ್ಳಿಪರಿಯಾಂತ ಕಾಲ್ಮುರಿಬ್ಯಾಡ ಅಡಗದ್ದ ಬೇಕಂದರ
ಒಡಲ ಕಟ್ಟಿ ಅಲ್ಲೆ ತೂರಿ ಬಿಟ್ಟನೊ–ಏನೋ ಅಂದರೂ....

ಮನಸ್ಗಿ ಬಂದ ಚಪ್ಪಲಿ ಸಿಗದ
ಬಂದ ಗಿರಾಕಿಯಲ್ಲಾ ಹೊಳ್ಳಿ ಹೋದವೋ
ತೊಗಲಿನ ಚಪ್ಪಲೋ ತೂತಿನ ದೋಸೆಯು ಚಪ್ಪಲೆಂದರ
ವೇದಾಂತ ಹೇಳಿದ ಐಯ್ಯಪ್ಪ–ಏನೋ ಅಂದರೊ....

ತತ್ವ ಹೇಳಿದರ ಹೊಟ್ಟೆ ತುಂಬದೋ
ಹೀಂಗ ಹೆಂಡರು ಮಕ್ಕಳು ಮಾರಿ
ಕಮ್ಮಿನ ಬಾಳಿ ಕಳಕೊಂಡ ಹ್ವಾದಿ ಮ್ಯಾಕ ಮಾರಿ ಮಾಡೇಂದರ
ಕಥಿಯಂ ಕಟ್ಟಿ ತಾ ಕಥೆಯು ಹೇಳದ ಐಯ್ಯಪ್ಪ : — ಏನೋ ಅಂದರೊ --

ವಂಗಾ ಬೈದನೊ ಹೆಂಡ್ತಿ ಬೈದಳೊ
ಸೊಸಿ ಅಂದಳೊ ಮಗಳಂದಳೊ ಪೂರಾ
ಕೈಲಾಗದಿದ್ರ ಮಾಡಿತಿನ್ನರಿ ನಿಮ್ಮದ ನೀವಂದ
ತತ್ವದ ಮಾತ್ಹೇಳುತ ಮೂಲ ಕೆದಕಿದ ಐಯ್ಯಪ್ಪ–ಏನೋ ಅಂದರೋ–

●
●

ಯಾರೊಬ್ಬರು ಸುದ್ದಿ ತಂದರೊ, ಗಾಂಧಿತಾತ, ಬರ್ತಾರಂತ ಹೀರೇಶ್ಯಾರದಾಗ
ಓಗ್ಸ್ಗಿ ಓಗ್ಗಿ ಕೆಲಯೋಧರ್ಗಿ ನಡದಿತ್ತು ತಯಾರಿ ಶ್ಯಾರಸವಾರ್ಗಿ
ಮನ್ಸನ್ಯಾಗ ಮುಂಡಿಗಿ ಕಡ್ದನು. ಚಮ್ಮಾರ ಐಯ್ಯಪ್ಪ ಸುಂದ್ದ್ಯಾಗ
ಎಲ್ಲಿಯು ಹಿರೇಶ್ಯಾರ ಎಲ್ಲಿಯು ತನ್ನೂರು ತಗಿ ಹೋಗಲಾಗದು ತನಗೆಂದ
ಚಿಕ್ಕಿಗಿ ಚಿಂತಿ ಚಿಂತಿಯಾಗಿ ತಾ ಚಿಂತಿಕಾಡಿತೊ ಮನದಾಗ
ಹಕಿಕತ್ತಿನ್ಯಾಗ ಹಕಲತ್ ಹುಡುಕಿದ ಮಸಲತ್ತಾಯಿತು ಮನದಾಗ
ಬೆಂಕಿಗೆ ಬಿದ್ದ ಕಾಳಿನೊಳಗೂತಾ ಅರಳಿಬಿಟ್ಟನೋ ಅರಳಾಗಿ

ಆಚಾರ್ಯರಿಗೂ ಗಾಂಧಿತಾತಗೂ ಬಗಲ ದೋಸ್ತಿಯಂತ ತಿಳಿದಿದ್ದ
ಮುಟ್ಟಿದ್ರ ಮಾಸಿ ಹೊಗಬೇಕು, ತೊಡ್ಡದ ಕಾಲಾಗ ತಗದಿಡಬೇಕು
ನೋಡವು ಕಣ್ಣ ಕುಕ್ಕಿರ ಬೇಕು, ಬಾಯಾಗ ಜೊಲ್ಲು ಇಳಿದಿರಬೇಕು
ಅಂಥ ಚಪ್ಪಲಿ ತಂದ ಇಟ್ಟನೋ ಆಚಾರ್ಯರ ಮುಂದ, ನಾಚಿಕೆಯಿಲ್ಲಾ ಅವನ್ಸಿಂದ
ಕೈಯು ಮುಗ್ಧ ಬಿನತಿಯಂ ನಿಟ್ಟ, ಅಡ್ಡ ಬಿದ್ದು ಜನ್ಮ ಪಾವನ ಮಾಡ್ಬೇಕಂದಾ –
ಸತ್ತ ದನಾ ಹುಡ್ಕಿ ಹೊತ್ತ ನಾನತಂದ. ಕರಿ ತಗ್ಸ್ವೇಗ್ದ ತೊಗಲು
ಆದಾಂಜನ್ಯಾಗ ಅಳ್ಸಿಯಿಟ್ಟು ಮಾಡಿನ್ರಿ ಇವುತಂದಿ, ಅಂಥಿಸಾ ಚಪ್ಪಲಿ ದೇವ್ರು ಗಿ
ನೀವ ಮೆಡ್ಸಬೇಕು ಕೈಯಾರೆ ಅವ್ರುಕಾಲೊಳ್ಳ. ಏನಗ ಬರಲಾಗದು ತಂದಿ
ನಮ್ಮದು ಅವರದು ದೋಸ್ತಿ ಬಾಳ ಗೊತ್ತೈತ್ತೆಲ್ಲ ನಿನಗ
ಅವ್ರ ಪತ್ತರ ಬಂದು ನಾಲ್ಕ ದಿನಾ ಆಯ್ತು, ಉತ್ತರ ಹಾಕಿಸಿ ನಿನ್ನೆರ
ನಾವು ಹೊಕ್ಕಿವಿ ನೀನು ಬಾ, ಖರ್ಚಿನ ಮಾಡಿ ನೋಡುದ ಬ್ಯಾಡ
ಮಲ್ಲಿಗ್ಗೂ ಏನಂಗ ಮುಖಾ ಅರಳಿತೋ, ಬತ್ತಿದ ಜೀವ ಬಲವಾಗಿತ್ತೊ,
ಬಟಾಬಯನ್ಯಾಗ ಗೊಮ್ಮಟ ನಿಂತ್ಹಂಗ ಎದ್ದು ಹೊಂಟಿನವ ಗಾಳ್ಯಾಗ
ಹೋಗು ಬರುವರ್ಗಿ ಕರ್ದ ಹೇಳಿದ ಗಾಂಧಿ ಬರುವ ಸುದ್ದಿ ತಾ ಹೋಗು ಸುದ್ದಿ
ಹೋಗು ರಾತ್ರಿಲಿ ಮಲಗಿದ ಕಾದೆಲಿ ಕಂಡನೊಂದು ಕನಸಾ, ಬೆಳ್ಳನ ಬಿಳಿಮುನ್ನ
ತುಂಟು ಹಂದ್ರುದಾಗ, ಗಾಂಧಿ ತಾತನ ಪಕ್ಕದಿ ಕುಳಿತು ತಾನೂ ನಗುತ್ತಿದ್ದ
ಆಗೊಮ್ಮೆ ಈಗೊಮ್ಮೆ ಇವನಿಗೆ ಹತ್ತರ ಕರ್ದು : ಗಾಂಧಿ ಕಿವಿಯಾಗ ಏನೇನೋ ಹೇಳಂತಿ
ತಲಿಯುಸವರ್ಸಿ ಬೆನ್ನ ಚಪ್ಪರ್ಸಿ ಗಾಂಧಿ ಅಪ್ಪಿದ್ದ, ಸ್ವರ್ಗಕ್ಕಿನ್ನು ನಾಲ್ಕ ಗೇಣು ಬಾಕಿ ಅಂ

ಕೌದ್ಯಾಗಿಂದ ನಗುತಾ ಎದ್ದನೋ ಐಯ್ಯಪ್ಪ ಮರುದಿನ ಮುಂಜಾನೆ
ಮೂಡಲ್ಹರಿಯುವಾಗ ಕಂಡ ಕನಸಿದು, ಚಾಚು ತಪ್ಪದೆಂದ, ಹೊನ್ನಗೆರೆಯಕಂಡ
ಶ್ಯಾರಕ್ಕ ಪಯಣ ಊರವ್ರಜೋಡಿ, ಸಾಗಿತ್ತೋ ಖೋಡಿ, ಅದರಾಗೂ ವೋಡಿ
ಮುಂದ ಮುಂದಕ ಊರಿನ ಮಂದಿ, ಹಿಂದ ಹೊಂಟಿದ್ದ ಕೊನೆ ಮನುಷ್ಯನಾಗಿ ಐಯ
ಸರಭರ ಸರಭರ ನಡಗ್ಯಾಗ, ಚಪ್ಪಲಿ ಹಿಡಿದಿದ್ದ ಬಗಲಾಗ
ಶ್ಯಾರೇನದೂರ ಇನ್ಯಾಗ, ವಯಸ್ಸ ಮರ್ತಿದ್ದಯ್ಯಪ್ಪಗ
ಶ್ಯಾರ ಬಂದಿತೋ ಹತ್ತಿರ, ಜನಾ ಆಗ್ಯಾದೊ ಸಾಗರ
ಏಸೊಂದು ಜಾತರಿ ಏಸೊಂದ ದೇವ್ರ ನೋಡಿದ್ಯಾ, ಅಲ್ಲಿರಲಿಲ್ಲ ಈ ಪರಮಂದಿ
ಛೇ ಕಾಲಿಡಲಾಕೂ ಜಾಗಿಲ್ಲ, ಇರುವಿ ಹೋಗಾಕೂ ದಾರಿಲ್ಲ ಏನಬಳಗದ ಸರುವಲ್ಲ



ಶ.

ಅಂತ ದೇವರ ಇವನಿರಬೇಕು, ದೇವರ ಅವತಾರ ನಿಜವಿರಬೇಕೊ ಅಂದಿದ್ದ ಐಯ್ಯಪ್ಪ
ಓರಳಿ ನೋಡಾಕ ಜಾಗಿಲದಾಂಯ್ತು, ಅತ್ತಿಂದಿತ್ತ ಇತ್ತಿಂದತ್ತ ವತ್ತಾವತ್ತಿ ಹೆಚ್ಚಾಯ್ತು
ಓಡಿಲಿ ಬಂದವ್ರು, ಊರ ಮುಂದೆವ್ರು ಕಾಣವಲ್ಲರು ಕಣ್ಣಿಗಿ!
ಂಗಾಬಲವೇ ಅಡಗಿದ್ಹಂಗಾಯ್ತು, ಮುಂದಿನ ಜನವೇಕಾಣ್ದಂಗ ಆಯ್ತು
ಾಗಿದವರಷ್ಟೊ ಎಷ್ಟೊಂದು ? ಒಬ್ಬರಿಬ್ಬರೋ ಮೂವರು ! ಗಾಂಧಿ ಬಂದರೊ ಗಾಂಧಿ
ಬಂದರೊ
ಾರತ ಮಾತೆಯು ಮಣ್ಣಿನ ಪುತ್ರ ಮಹಾತ್ಮಾಜಿಕಿ ಜೈ, ಭಾರತ ಮಾತಾಕಿ ಜೈ
ಇಲ್ಲಿ ಬಂದರೊ ಗಾಂಧಿ ಯೆಂದರೊ, ನನಗ ನೀ ಒತ್ತ ನಿನಗ ನಾ ಒತ್ತ ಎಂಥಾ ಒತ್ತಾ
ವತ್ತಿ
ಕೇಳಸಲ್ಲದು ಕೇಳಸಲ್ಲದು ನೋಡಸಲ್ಲದು ಕಾಣ ಸಲ್ಲದು ಅಂಥ ಕಿತ್ತಾಟ!
ಂಗಲಿನ ಚಪ್ಪಲಿ ಬಿದ್ದು ಹೋದುವ್ರ, ಯಾವ ಮಾಯಲಿ ಮಾಯಾದವ್ರೊ
ಹುಡುಕಿ ಹುಡುಕುತಾನ ಐಯ್ಯಪ್ಪ. ಚೀರ ಚೀರತಾನ ಐಯ್ಯಪ್ಪ
ಒಂದೋ ಎರಡೋ ಏಸೊಂದು ಕಾಲು ಏಸೊಂದು ಚಪ್ಪಲಿ ನೆಲದಾಗ
ಅಲ್ಲಿ ಹುಡುಕಿದ ಇಲ್ಲಿ ಹುಡುಕಿದ, ಅವ್ರು ಕಾಲ ಇವ್ರು ಕಾಲ ಓಡ್ದ
ಅವರಿವ್ರ ಕಾಲಾಗ ತಾ ಮಣ್ಣಾದ, ಅಹಿಂಸಾ ಚಪ್ಪಲಿ ಸಿಗಲಿಲ್ಲ
ತಾನು ಕಳ್ದ ಹೋದ, ಗಾಂಧಿ ಕಳ್ದ ಹೋದ, ಊರ ಜನರ್ದು ಮೊದ್ಲ ಕಳ್ದ ಹೋದ್ರು
ಟಾಬಯಲಿನಲಿ ಮಟಾ ಮಾಯಾದ್ರೊ, ಏಸೊಂದು ಚಪ್ಪಲಿ ನೆಲದಾಗ!

## ದಾಂಪತ್ಯದ ಮೂರು ಮುಖಗಳು

೧

ನನ್ನ ನಿನ್ನ ನಡುವೆ
ಬಾಲ್ಯದ ನೆನಪುಗಳು
ಕಪ್ಪೆಗೂಡಿನ
ಒದ್ದೆ ಮರಳ ಕಣಗಳು
ಮನೆಯಾಟದ ಕ್ಷಣಗಳು.

ನನ್ನ ನಿನ್ನ ನಡುವೆ
ಎದೆಯ ಭಾವ ಧಿಕ್ಕರಿಸುವ
ಎರಡು ಅಹಂಗಳು

[illegible], 68[illegible], 4ನೇ ಬ್ಲಾಕ್, [illegible], ಬೆಂಗಳೂರು-560011

ಸೋಲು ಗೆಲುವು ತಿಳಿಯದ
ಅರ್ಥವಿಲ್ಲದ ಸಮರ ಪಾಳಯಗಳು

ನನ್ನ ನಿನ್ನ ನಡುವೆ
ಪ್ರೀತಿ ಸಂತೃಪ್ತಿಗಳ
ಮೇರೆ ಮೀರಿ
ಅಸಹಾಯಕತೆಯ ಕೊಂಡಿಗಳು.

ನನ್ನ ನಿನ್ನ ನಡುವೆ
ರಾಗ ದ್ವೇಷಗಳ
ಬಂಧನಗಳು.

೨

ಎದೆಯ ಹುಣ್ಣ ಮೇಲೆ ನೀನು
ನಿನ್ನ ತುಟಿಗಳೂರಿ ಎಲ್ಲ ನನ್ನ
ನೋವು ವಿಷಬಾಧೆಗಳನ್ನು ಹೀರಿ
ಧಮನಿಗಳಲ್ಲಿ ಹೊಸ ರಕ್ತದ ಹರಿವು

ಕಾಲನ ಕೈವಾಡದ ನೋವುಂಡ
ಮುಖದ ನೂರೆಂಟು ಸುಕ್ಕುಗಳ
ಕಲೆಗಳನ್ನು ಅಳಿಸಿ ನಿನ್ನ ಕೈಗಳು

ಹೊಸ ಜೀವಕ್ಕಾಗಿ ತಪಿಸಿ
ನಿನ್ನ ಸತ್ವ ಹೀರಿ,
ನನ್ನ ಹರಿದ ವೈಮನಸ್ಸು
ಹೊಲಿಯುವೆ ನಾನು

೩

ತಲೆಯಲ್ಲಿ ಬೆಳ್ಳಿ ಕೂದಲು
ಒಡಲು ಸಡಿಲು
ಕೈ ತುಂಬ ಗೆರೆಗಳು
ಹಣೆಯಲೆದ್ದು ಕಾಣುವ ಚಿಂತೆ ಅಲೆಗಳು.

ಜೋತ ಮೊಲೆ ಸೋತ ತುಟಿ

ನಿದ್ದೆ ಬಯಸುವ ಕಣ್ಣು
ಪುಳಕಗೊಳ್ಳದ ಮೈ
ಬೇಡವೆನ್ನದ ವಿಧೇಯ ಮನಸ್ಸು

ನೀನನುತ್ತೀಯೆ
ನನಗಿಂತ ಯಾರೋ ಮೇಲೆಂದು
ನನ್ನ ಸುಕ್ಕುಗಳು ನಗುತ್ತವೆ
ಹುಚ್ಚ ನೀನೆಂದು.

—ಪ್ರತಿಭಾ ನಂದಕುಮಾರ್



# ಕನಸಿಗೊಂದು ಕಣ್ಣು

## ನನ್ನ ಕನಸುಗಳೇ ಹೀಗೆ...

ನನ್ನ ಕನಸುಗಳೇ ಹೀಗೆ ಎಂದು ಹೇಗೆ ಬರೆಯಲು ಪ್ರಾರಂಭಿಸಲಿ ಎಂದು ಕಳೆದ ನಾಲ್ಕೈದು ದಿನಗಳಿಂದ ತಲೆಕೆಡಿಸಿಕೊಂಡಿದ್ದೇನೆ. ಮನುಷ್ಯನ ಸಣ್ಣತನ ಆದರ ಸುತ್ತಲೂ ನಡೆಯುವ ಕ್ರಿಯೆಯ ಬಗ್ಗೆ ಯೋಚಿಸಿ ಶಬ್ದಗಳಲ್ಲಿ ಹಿಡಿದಿಡಲು ಆಗದೆ ನರಳಿದ್ದೇನೆ. ಆದರೂ ಬಹಳ ದಿನಗಳ ನಂತರ ಒಂದಷ್ಟು ಹುಚ್ಚುತನದಿಂದ ಬರೆಯುವ ಕ್ಷಣದಲ್ಲಿ ಒಂದದ್ದನ್ನೆಲ್ಲ ದಾಖಲು ಮಾಡುವ ಹಂಬಲದಿಂದ ಬರೆಯುತ್ತಿದ್ದೇನೆ.

ಕಳೆದ ಹದಿನಾರು ವರ್ಷಗಳಲ್ಲಿ 'ಶೂದ್ರ' ನಾನಾ ಪಾಠಗಳನ್ನು ಕಲಿಸಿದೆ. ಆ ಪಾಠಗಳು ಪ್ರಿಯವೂ ಹೌದು ಅಪ್ರಿಯವೂ ಹೌದು. ಆದರೆ ಗಾಂಧೀಜಿ ಅರ್ಥಮಾಡಿಸಿದಂತೆ: ಮನುಷ್ಯನ ಸಣ್ಣತನಗಳ ನಡುವೆ ನುಗ್ಗುವಾಗ ಸಿಗುವ ಅನುಭವ ಅವನ ಒಳ್ಳೆಯತನಗಳಿಂದ ಅಲ್ಲ. ಇದರರ್ಥ ಎಲ್ಲರೂ ಸಿನಿಕರಾಗಿರಲಿ ಎಂದು ಆಶಿಸುತ್ತಿಲ್ಲ. ನಾವು ಆಶಿಸಲಿ ಅಥವಾ ಆಶಿಸದಿರಲಿ ಅದರ ಗುಣಾತ್ಮಕತೆ ನಿಯಂತವಾಗಿಯೇ ಇರುತ್ತದೆ. ಸಾವು ಬದುಕಿನ ನಡುವೆ ಇರುವ ಮನಸ್ಸು ಘರ್ಷಿಸುವಂತೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಚಿಸಿದರೆ 'ನಾನೂ' ಸಿನಿಕನಿರಬಹುದು. ಹಾಗೆ ಆದಾಗಲೆಲ್ಲ ಒಂಟಿಯಾಗಿ ಕೂತು ಅತ್ತಿದ್ದೇನೆ. ಪಾಪ ಪ್ರಜ್ಞೆಯನ್ನು ನಿಜವಾಗಿಯೂ ಎದುರಿಸು

ವುದು ಕಷ್ಟ. ಯಾಕೆಂದರೆ ಎಷ್ಟೋ ಬಾರಿ ನಮ್ಮ ಖುಷಿಗಾಗಿ ಸಿನಿಕರಾಗುವುದು ಜಾಸ್ತಿ. ಮೂಲಭೂತಗುಣದಿಂದಲ್ಲ. ಇಂಥ ಸಂದರ್ಭದಲ್ಲಿಯೇ ಬೇರೆಯವರನ್ನು ಛೇಡಿಸಿ ನಕ್ಕು ಆನಂದಪಟ್ಟಾಗ; ಅದರ ಪಕ್ಕದಲ್ಲಿಯೇ ದುಃಖ, ವ್ಯಥೆ ಮತ್ತು ವಿಷಾದ ಕಾದಿರುತ್ತದೆ ಎಂದು ಮಾನಸಿಕವಾಗಿ ಬೇರೂರಿರುವುದರಿಂದ. ಯಾಕೆಂದರೆ, ಚಿಕ್ಕಂದಿನಲ್ಲಿ ದೊಡ್ಡಪ್ಪ 'ತುಂಬ ನಗಬೇಡೋ' ಎಂದು ಹೇಳಿದ ಮಾತು ಈಗಲೂ ಹಚ್ಚಹಸಿರಾಗಿದೆ.

ನಮ್ಮೆಲ್ಲ ಸಿನಿಕತನಗಳು ಬರುವುದು ನಮ್ಮಲ್ಲಿಯ ದೌರ್ಬಲ್ಯತೆಯಿಂದ. ಎಲ್ಲ ವನ್ನು 'ಗೆಲ್ಲಬಲ್ಲೆ', ಎಲ್ಲರ ಹತ್ತಿರ 'ಸಂವಾದ' ಇಟ್ಟುಕೊಳ್ಳಬಲ್ಲೆ ಎಂಬ ದಾರ್ಢ್ಯತೆ ಬರುವುದು ನಮ್ಮ ಅಂತಃಶಕ್ತಿಯಿಂದ. ಅಂಥ ವ್ಯಕ್ತಿತ್ವದ ಪರಾಕಾಷ್ಠತೆ ನನಗೆ ಗೋಚರಿ ಸುವುದು ಗಾಂಧೀಜಿಯವರ ಬದುಕಿನಲ್ಲಿ. ಆದ್ದರಿಂದಲೇ ನಾನು ಸೋತಾಗಲೆಲ್ಲ ಗಾಂಧೀಜಿಯ ಮುಂದೆ ನಿಲ್ಲುತ್ತೇನೆ. ಯಾಕೆಂದರೆ ನಮ್ಮಂಥ ನಾಸ್ತಿಕ ವ್ಯಕ್ತಿತ್ವಕ್ಕೆ ಗಾಂಧೀಜಿ ದೇವರಾಗಿರುತ್ತಾನೆ. ಈ ಅರ್ಥದಲ್ಲಿಯೇ ನಮ್ಮನ್ನು ನಾವು ಕಂಡುಕೊಳ್ಳು ವುದಕ್ಕೆ ನಮಗೊಬ್ಬ ಬೇಕು. ಆಣೆ–ಪ್ರಮಾಣಗಳು ಬಂದಿದ್ದು ಕೂಡ ತಾತ್ಕಾಲಿಕ ಅಸ್ತಿತ್ವವನ್ನು ಗಟ್ಟಿಮಾಡಿಕೊಳ್ಳಲು. ಇಲ್ಲದಿದ್ದರೆ ಮನುಷ್ಯ ಯಾವುದನ್ನು ಹಿಡಿದು ಕೊಂಡು ನೇತಾಡಬೇಕು? ಅವನ ಬದುಕು ಹೊಟ್ಟೆ–ಬಟ್ಟೆ, ಮನೆ–ಮಠ ಮತ್ತು ಮೋಜುಗಳ ಚೌಕಟ್ಟಿನಲ್ಲಿಯೇ ಸುತ್ತಿರುವುದಿಲ್ಲ. ಅದನ್ನು ಮೀರಿಯೇ ಎಲ್ಲಾ ಸಂಬಂಧ ಗಳು ತೆಕ್ಕೆಗೊಂಡಿರುತ್ತವೆ. ಹಾಗಾದರೆ ನಾವು ಯಾರನ್ನು ಕೇಳಿ ಬದುಕಬೇಕು? ಯಾರನ್ನು ಮೆಚ್ಚಿಸಲು ಬದುಕಬೇಕು? ಈ ಎಲ್ಲ ಪ್ರಶ್ನೆಗಳ ನಡುವೆಯೂ ಒಂದು ಮೆಚ್ಚುವಂಥದ್ದು ಇರುತ್ತದೆ ಅಲ್ಲವೆ? ಅದೇ ಅಲ್ಲವೇ ನಮ್ಮನ್ನು ಪುಳಕಿತಗೊಳಿಸು ವುದು? ಎಂಬ ಆತ್ಮೀಯ ಪ್ರಶ್ನೆ ನನ್ನ ಮುಂದೆ ಸದಾ ಇದೆ. ಈ ಪ್ರಶ್ನೆ ಜೀವಂತ ವಾಗಿರುವುದು ನಾನು ಕಂಡುಕೊಂಡ ವ್ಯಕ್ತಿತ್ವಗಳಿಂದ. ನನಗೆ ಲೋಹಿಯಾ ಸಿಗದಿದ್ದರೆ ವಾಸ್ತವವಾಗಿ ಗಾಂಧೀಜಿ ಅರ್ಥವಾಗುತ್ತಿರಲಿಲ್ಲ. ಯಾಕೆಂದರೆ ಗಾಂಧೀಜಿಯವರನ್ನು ಗ್ರಹಿಸುವುದು ಹಾಗಲ್ಲ–ಹೀಗೆ ಎಂದು ತಿಳಿಸಿದವರು. ಈ ಪರಿಧಿಯಲ್ಲೇ ಯಾರನ್ನೇ ಆಗಲಿ ನಾನು ಓದುವುದು; ಅವರನ್ನು ಒಂದು ಬರವಣಿಗೆಯಲ್ಲಿ ಉಲ್ಲೇಖಿಸಲು ಅಥವಾ ಬರೆಯಲು ಅಲ್ಲ. ನಾನು ಬೆಳೆಯಬೇಕಾಗಿದೆ. ಅಷ್ಟರಮಟ್ಟಿಗೆ ನಾನು ಸ್ವಾರ್ಥಿ ಎಷ್ಟೋ ವರ್ಷಗಳ ಹಿಂದೆ ಜೆ. ಕೃಷ್ಣಮೂರ್ತಿಯವರು ಲಾಲ್‌ಬಾಗಿನ ಶತಮಾನೋ ತ್ಸವ ಭವನದ ಕಿಕ್ಕಿರಿದ ಜನರ ನಡುವೆ ಭಾಷಣದಲ್ಲಿ ಒಂದು ಮಾತು ಹೇಳಿದರು. ಮನುಷ್ಯರ ಎಲ್ಲಾ ಸಣ್ಣತನಗಳ ಮಧ್ಯೆ ಬದುಕುವುದನ್ನು ಕಲಿಸು ಎಂದು. ಇಂ[illegible] ಪ್ರಶ್ನೆಯನ್ನು ನಾವೆಲ್ಲ ಕೇಳಿಕೊಂಡಾಗ ಸಂವಾದ ಹುಟ್ಟುತ್ತದೆ. ಭಿನ್ನಾಭಿಪ್ರಾಯ ಎಂದಿಗೂ ಮನಸ್ತಾಪವಾಗಿ ಬೆಳೆಯುವುದಿಲ್ಲ, ಮನಸ್ಸು ಜಿಗುಟಾಗುವುದಿಲ್ಲ. ಯಾ[illegible]

ವರೆ ನಾವೆಲ್ಲ ಪರ್ಫೆಕ್ಟ್ ಎಂದು ತಿಳಿದಾಗಲೆಲ್ಲ ಸತ್ತಿರುತ್ತೇವೆ. ಈ ಪರ್ಫೆಕ್ಟನ್ನು ಮುಂದುವರೆಸುವುದೇ ಸಿನಿಕತನ ಎಂದುಕೊಂಡಿದ್ದೇನೆ.

ನನಗೆ 'ಕನಸಿಗೊಂದು ಕಣ್ಣು' ಕಾಲಂ ಯಾಕೆ ಬೇಕಾಯಿತು ಎಂಬುದನ್ನು ವಿವರಿಸುವುದು ಕಷ್ಟ. ಆದರೆ ಅದು ನನಗೆ ಬೇಕಾಗಿತ್ತು. ನನ್ನೆಲ್ಲ ಹುಚ್ಚು ಮನಸ್ಸನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಡಬೇಕಾಗಿತ್ತು. ಬದುಕು ಯಾರ ಸ್ವತ್ತೂ ಅಲ್ಲ. ಅವನ ಪಾಡಿಗೆ ಅವನು ಬದುಕಬೇಕು. ಆದರೆ ಎಲ್ಲರ ಬದುಕೂ ಸಜೆಸ್ಟೀವ್ ಆಗಬೇಕೆ ವಿನಹ ಆರ್ಡರ್ ಆಗಬಾರದು ಎಂಬುದೇ ನನ್ನ ಮೂಲಭೂತ ಧೋರಣೆ. ವ್ಯಕ್ತಿಗತ ಸಂಬಂಧದ ದೃಷ್ಟಿಯಿಂದ ಸ್ವಲ್ಪ ಹೆಚ್ಚಾಗಿ ಆತ್ಮರತಿ ಅನ್ನಿಸಿದರೂ ಇದನ್ನು ಗೌರವಿಸುತ್ತೇನೆ. ಆದರೆ ಇದೇ ಆತ್ಮರತಿ ಘೋಷಣೆಯಾದರೆ ಕೊಳಕಾಗಿರುತ್ತದೆ. ಕನ್ನಡಿಯಲ್ಲಿ ನೋಡಿಕೊಳ್ಳಲು ಸಾಧ್ಯವಾಗದಷ್ಟು. ನಮ್ಮನ್ನು ಅನುಸರಿಸುವ ನಾಯಿಯೂ ಸಹ ಆತ್ಮೀಯತೆಯನ್ನು ಬಯಸುತ್ತದೆ ವಿನಹ ಆಜ್ಞೆಯನ್ನಲ್ಲ. ಮೊನ್ನೆ ರಸ್ತೆಯಲ್ಲಿ ಒಂದು ದೃಶ್ಯವನ್ನು ಕಂಡೆ; ಮಗುವೊಂದು ಮಣ್ಣಲ್ಲಿ ಆಡುತ್ತಿತ್ತು. ಹುಚ್ಚಿ ಹೊಯ್ದು ಮಣ್ಣು ಕಲಸುತ್ತಿತ್ತು. ದಾರಿಹೋಕನೊಬ್ಬ "ಥೂ ಕತ್ತೆ, ಬುದ್ಧಿಯಿಲ್ಲವಾ, ಹಾಕ್ತೀನಿ ನೋಡು" ಎಂದು ಕೊನೆಯ ಶಬ್ದ ಮುಗಿಯುವ ಮುನ್ನವೇ ಆ ಮಗು ತಾನು ಕಲಸುತ್ತಿದ್ದ ಮಣ್ಣಿನಿಂದಲೇ ಅವನ ಮುಖಕ್ಕೆ ರಪ್ಪನೆ ರಾಚಿತ್ತು. ಆಗ ನಾನಂದು ಕೊಂಡೆ; ಒಂದುವೇಳೆ ಆ ಮಗುವಿಗೆ ಆ ರೀತಿ ಹೇಳುವ ಬದಲು, "ನೋಡು ಮರಿ, ಆ ರೀತಿ ಆಡಬಾರದು" ಎಂದು ತಲೆ ನೇವರಿಸಿ ಹೇಳಿದ್ದರೆ ಅದು ಕೈಹಿಡಿದು ಒಂದಷ್ಟು ದೂರ ಬಂದು ಟಾಟಾ....ಹೇಳುತ್ತಿತ್ತು ಅನ್ನಿಸಿತು. ಇಲ್ಲಿ ನಮ್ಮನ್ನು ಅನುಸರಿಸುವ ನಾಯಿ ಬೇರೆ ಅಲ್ಲ ಮಗು ಬೇರೆ ಅಲ್ಲ. ಇವೆಲ್ಲ ಬರೆಯುವುದಕ್ಕೆ 'ಕನಸಿಗೊಂದು ಕಣ್ಣು' ಬೇಕಾಯಿತು. ಒಂದೆ ಕಾಲಂ ಇಲ್ಲದಿದ್ದಾಗ, ಶೂದ್ರದ ಪ್ರಾರಂಭದ ದಿನಗಳಲ್ಲಿ ಕೊರವ, ಖದೀಮ, ಪಾಪಿ, ಪರದೇಶಿ ಮುಂತಾದ ಹೆಸರುಗಳಲ್ಲಿ ಬರೆಯುವಾಗ ನಾನೊಬ್ಬ ಪರಕೀಯ ಅನ್ನಿಸುತ್ತಿತ್ತು. ನೇರವಾಗಿ ಬರೆದಾಗಲೇ ನಿಜವಾಗಿಯೂ ಖುಷಿ ಇರುವುದು. ಇತ್ತೀಚಿನ ದಿನಗಳಲ್ಲಿ ಕಾವ್ಯನಾಮಗಳೆಲ್ಲ ನಾಪತ್ತೆಯಾಗುತ್ತಿರುವುದು ಈ ರೀತಿಯ ಕಂಡುಕೊಳ್ಳುವಿಕೆಗೆ ಇರಬಹುದು. ಕಾವ್ಯನಾಮದ ಜಾಗದಲ್ಲಿ ತಮ್ಮ ಹಳ್ಳಿಗಳ, ತಮ್ಮ ಮನೆತನಗಳ ಹೆಸರು ಸೇರಿಕೊಳ್ಳುತ್ತಿದೆ. ಇದಕ್ಕೆಲ್ಲ ಅವರ ಪರವೇ ಅವರ ಕನಸುಗಳಿರುತ್ತವೆ. ಕೊನೆಗೂ ಅವನ್ನು ಬಿಡಿಸಿ ಹೇಳಬೇಕಾದವನು ನಾನಲ್ಲ.

ಹೌದು 'ಕನಸಿಗೊಂದು ಕಣ್ಣು' ಮುಕ್ತವಾಗಿ ಬರೆಯುವುದನ್ನು ಕಲಿಸಿತು. ಅದೊಂದು ನನ್ನ ದಿನಚರಿಯಾಯಿತು. ಈ ದೃಷ್ಟಿಯಿಂದ ಕನಸಿಗೊಂದು ಕಣ್ಣು

ಒಂದು ಕಾಲಂ ಅಲ್ಲ. ಅಂಕಣ ಬರಹ ಅಲ್ಲ. ಈ ಶೀರ್ಷಿಕೆಗಾಗಿ ತಲೆಕೆಡಿಸಿಕೊಂಡ ದಿನಗಳೇ ಜಾಸ್ತಿ. ಶೂದ್ರದ ಓದುಗರು ಅಭಿಮಾನದಿಂದ ಸ್ವೀಕರಿಸಿದಾಗ ಪುಳಕಿತನಾದೆ. ಈ ಪುಳಕಿತತೆಯಲ್ಲಿ ಅಲ್ಲಿ ಸಂಭವಿಸಿದ ದೋಷಗಳನ್ನು ತಿದ್ದಿಕೊಳ್ಳಲಾಗಲಿಲ್ಲ. ಹೀಗೆ ತಿದ್ದಿಕೊಳ್ಳದ್ದಕ್ಕೆ ಮತ್ತೊಂದು ಕಾರಣವೆಂದರೆ ಸಂಯಮದಿಂದ ಬರೆದವುಗಳಲ್ಲ. ಕಾಲದ ಅಭಾವದಿಂದ ಬರೆದವುಗಳು. ಒಮ್ಮೆಯೂ ನನ್ನ ಬರವಣಿಗೆಯನ್ನು ಹಿಂದಿರುಗಿ ಓದಿ ಕೊಂಡವನಲ್ಲ. ಯಾಕೆಂದರೆ ದೋಷಗಳ ಬಗ್ಗೆ ಸೆನ್ಸಿಟೀವ್ ಆಗುತ್ತೇನೆ ಎಂಬ ಗಾಬರಿ ಸದಾ ಇದ್ದುದರಿಂದ. ಬಹಳಷ್ಟು ಬಾರಿ ನಮ್ಮ ಸಣ್ಣಪುಟ್ಟ ದೋಷಗಳು ನಮ್ಮನ್ನು ಅರ್ಥಮಾಡಿಕೊಳ್ಳಲು ಗುಣಾತ್ಮಕವಾಗಿಯೇ ಇರುತ್ತದೆ.

ಇಷ್ಟೆಲ್ಲ ಬರೆಯುತ್ತಿರುವುದು ಒಂದು ಮುಖ್ಯ ಕಾರಣಕ್ಕಾಗಿ. 'ಜಾಗೃತಿ ಸಾಹಿತ್ಯ ಸಮಾವೇಶ'ಕ್ಕಾಗಿ ತಲೆಕೆಡಿಸಿಕೊಂಡಾಗ ವಿಚಿತ್ರ ಅನುಭವಗಳು. ಶೂದ್ರದ ಈ ಹದಿನಾರು ವರ್ಷಗಳ ಚರಿತ್ರೆಯಲ್ಲಿ ಒಕ್ಕೂಟ, ಬೂಸಾಪ್ರಕರಣ, ತುರ್ತುಪರಿಸ್ಥಿತಿ, ಸಮಕಾಲೀನ ವಿಚಾರವೇದಿಕೆ ಮತ್ತು ಬಂಡಾಯ ಚಳುವಳಿ, ಗೋಕಾಕ್ ಚಳವಳಿ ಕೆಲವು ಪಾಠಗಳನ್ನು ಕಲಿಸಿದವು. ಅಥವಾ ನೆನಪುಗಳನ್ನು ಬೆಳೆಸಿದವು. "ನಿಮ್ಮ ಧೋರಣೆ ನಮಗೆ ಇಷ್ಟವಾಗಲಿಲ್ಲ ಎಂದು ಹೇಳದೆ; ಶೂದ್ರವನ್ನು ಇನ್ನು ಮುಂದೆ ಕಳಿಸಬೇಡಿ" ಎಂದು ಬರೆದಾಗ ಪೆಚ್ಚಾಗುತ್ತಿದ್ದೆ. ಈಗಲೂ ಪೆಚ್ಚಾಗುತ್ತೇನೆ. ಚರ್ಚೆಗೆ ಬರದೆ ಹಿಂದಿನ ಬಾಗಿಲಿನಿಂದ ಅಭಿಪ್ರಾಯಗಳಿಗೆ ಮನಸ್ತಾಪದ ಕುಮ್ಮಕ್ಕು ಕೊಡುವುದ ರಿಂದ. ಪ್ರತಿಯೊಂದು ಹೋರಾಟದ ಸಮಯದಲ್ಲೂ ಆರೋಗ್ಯಪೂರ್ಣವಾಗಿ ಪ್ರತಿ ಕ್ರಿಯಿಸದಿದ್ದಾಗ ಹಿಂಸೆಯಾಗುತ್ತದೆ. ಅದರಲ್ಲೂ ವ್ಯಕ್ತಿಗತವಾಗಿ ಅಥವಾ ಜಾತೀ ಯತೆಯ ದೃಷ್ಟಿಯಿಂದ ಸ್ವೀಕರಿಸಿದಾಗ ಭಯವಾಗುತ್ತದೆ. ಇಂದಿಗೂ ನಾವು ನಮ್ಮ ನಮ್ಮ ಜಾತಿಯವರ ಪರವಾಗಿ ಮಾತಾಡುವುದು ಅಪರಾಧ ಎಂದು ತಿಳಿಯುವುದಿಲ್ಲ. ಹೀಗಾದರೆ ನಾವು ಯಾವ ರೀತಿಯ ಜಾತ್ಯಾತೀತರು. ಯಾವುದೇ ಚೌಕಾಸಿಯ ಮೂಲಕ ಹಿರೇಮಠರನ್ನಾಗಲಿ, ಹಾ.ಮಾ. ನಾಯಕರನ್ನಾಗಲಿ ಸ್ವೀಕರಿಸಬೇಕಾಗಿಲ್ಲ. ಹಿರೇ ಮಠರವರು ಕೆ. ಎಸ್. ನರಸಿಂಹಸ್ವಾಮಿ ಮತ್ತು ಬಿ.ಸಿ. ರಾಮಚಂದ್ರಶರ್ಮರಿಗಿಂತ ಒಳ್ಳೆಯ ಕವಿ ಎಂದಾಗ ಗೇಲಿಯಾಗುತ್ತದೆಯೇ ವಿನಹ ಸಂವಾದವಾಗುವುದಿಲ್ಲ. ನಂತರ 'ಕನಸಿಗೊಂದು ಕಣ್ಣು'ವಿಗೆ 1985ರ 'ಸಂಕೀರ್ಣ' ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದ್ದಕ್ಕೆ ಅದನ್ನು ನಾಯಕರ 'ಸಂಪ್ರತಿ'ಗೆ ಹೋಲಿಸಿ ಮಾತಾಡಿದಾಗ, ಹೇಳಿಕೆ ಕೊಟ್ಟಾಗ ಷಾಕ್ ಆಯಿತು. ಅದರ ಜೊತೆಗೆ 'ಕನಸಿಗೊಂದು ಕಣ್ಣು' ಕೃತಿಯಲ್ಲಿ ಏನಿದೆ ? ಅಲ್ಲಿಇಲ್ಲಿ ಸಾರಾಯಿ ಕುಡಿದಿರುವುದು ಇದೆ ಎಂದು ಬರೆದ ಗೆಳೆಯರೂ ಇದ್ದಾರೆ. ಆದರೆ ನನಗೆ ಪ್ರಶಸ್ತಿ ಬರುವುದಕ್ಕೆ ಎಂದೂ ರಾಜಕೀಯ ಮಾಡಿ

ದವನಲ್ಲ. ಆದರಲ್ಲೂ ಹತ್ತಾರು ಕೃತಿಗಳ ನಡುವೆ ಬೇರೆಬೇರೆ ಪ್ರಕಾರಗಳಲ್ಲಿ ಬಂದ ಪ್ರಶಸ್ತಿ ಮಾತ್ರ‌ಅದು. ಮತ್ತೊಂದು ಮುಖ್ಯವಿಷಯವೆಂದರೆ ಸಾರಾಯಿಯ ಬಗ್ಗೆ ಒಂದು ಮಾತು. ಸಾರಾಯಿಯ ಮೂಲಕ ಕಾಳಿಂಗರಾವ್ ರೀತಿಯ ಕಲಾವಿದರು ಪರಿಚಯವಾದರು. ಆದು ಒಂದು ಜೀವನಾನುಭವ ಮಾತ್ರ, ಅದೇ ಅಂತಿಮವಲ್ಲ. ನಮ್ಮ ಪಾಡಿಗೆ ನಾವು ಬದುಕುವುದು ಮುಖ್ಯ. ಯಾರ್ಯಾರನ್ನೋ ಮೆಚ್ಚಿಸುವುದಕ್ಕೆ ನಮ್ಮ ಅನುಭವವನ್ನು ಮುಚ್ಚಿಟ್ಟು ನಾವ್ಯಾಕೆ ಬರೆಯಬೇಕು? ನಮ್ಮ ಸುತ್ತಲೂ ಇರುವ ನಾನಾ ವೈವಿಧ್ಯತೆಗಳನ್ನೆಲ್ಲ ನಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆ. ಒಬ್ಬ ಸಂಗೀತಗಾರನನ್ನು ಕಂಡಾಗ, ನಟನನ್ನು ಕಂಡಾಗ, ಆಟಗಾರನನ್ನು ಕಂಡಾಗ, ಉತ್ತಮ ರಾಜಕಾರಣಿಯನ್ನು ಕಂಡಾಗ ಅವರಲ್ಲಿ ನಮ್ಮನ್ನು ಗುರ್ತಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆಗ ಸಾಮಾನ್ಯ ಕುಡುಕ ನಮ್ಮ ಗೆಳೆಯನಾದರೆ ತಪ್ಪೇನು? ನಮ್ಮ ಮಧ್ಯಮ ವರ್ಗದ ಜನ ನಮ್ಮ ಸುತ್ತಲೂ ನಾನಾ ಲೋಕಗಳಿವೆ ಎಂಬುದನ್ನು ಪರಿಭಾವಿಸುವುದೇ ಇಲ್ಲ. ಅದೇ ಥಳಕು–ಬಳುಕಿನ ಗೆಳೆಯರು. ಎಂದಿಗೂ ಮತ್ತೊಬ್ಬನನ್ನು ಒಳಗೆ ಬಿಟ್ಟುಕೊಳ್ಳುವುದೇ ಇಲ್ಲ. ಹೊಸಬರು ಹತ್ತಿರ ಬಂದಾಗಲೆಲ್ಲ ನಮ್ಮ ಮಧ್ಯಮ ವರ್ಗದ ಆಸ್ತಿಯನ್ನು ದೋಚಿಕೊಂಡುಹೋಗುವರೆಂಬ ಭೀತಿಯಿಂದ ನರಳುತ್ತಿರುತ್ತೇವೆ. ಆದ್ದರಿಂದಲೇ ಶ್ರೇಷ್ಠವಾದದ್ದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದಿಲ್ಲ. ಅದರ ವಿರುದ್ಧ ಗುಂಪು ಕಟ್ಟುತ್ತಾರೆ. ತಮ್ಮ ಕುತ್ತಿಗೆಗೆ ತಮ್ಮ ದುಡ್ಡಿನಿಂದಲೇ ಹಾರ ತರಿಸಿ ಸನ್ಮಾನ ಮಾಡಿಸಿಕೊಳ್ಳುತ್ತಾರೆ.

ಹೌದು ನನ್ನ ಕನಸುಗಳೇ ಹೀಗೆ. ನಮ್ಮ ನಾಜೂಕಿನ ಮನುಷ್ಯರಿಗಿಂತ ಹುಚ್ಚರೇ ಪ್ರಿಯ. ಅವರಲ್ಲಿ ಜೀವನವಿರುತ್ತದೆ. ಪ್ರತಿಕ್ಷಣವೂ ನಮ್ಮ ಮುಂದೆ ಸಂಘರ್ಷವನ್ನಿಟ್ಟಿರುತ್ತಾರೆ. ನಮ್ಮ ಬದುಕು ಮತ್ತು ಬರವಣಿಗೆ ಹುಟ್ಟುವುದು ಇಲ್ಲಿ. ಹಾಗೆಯೇ ಯಾರೋ ಪೂಜಾರಿಗಳು ಜಾತಿವಾದಿಗಳಾದಾಗ ಹುಟ್ಟುವುದು ಪ್ರತಿಭಟನೆ. ಆದರೆ ನಮ್ಮ ನಡುವಿನ ಗೆಳೆಯರೇ ಜಾತಿವಾದಿಗಳಾದಾಗ ಹುಟ್ಟುವುದು ನೋವು ಮತ್ತು ವಿಷಾದ ಮಾತ್ರ. 'ಜಾಗೃತ ಸಾಹಿತ್ಯ ಸಮಾವೇಶ'ಕ್ಕೆ ಕೆಲಸಮಾಡಿದರೆಲ್ಲ ಕೆಲವರು ನಮ್ಮನ್ನು ಅಡಿಗರು ಕೊಂಡುಕೊಂಡಿದ್ದಾರೆ, ಲಂಕೇಶ್‌ರವರು ಕೊಂಡುಕೊಂಡಿದ್ದಾರೆ, ಅನಂತಮೂರ್ತಿಯವರು ಕೊಂಡುಕೊಂಡಿದ್ದಾರೆ ಎಂದು ಮೂದಲಿಸಿದ್ದಾರೆ. ಆದರೆ ಒಂದು ನೆಮ್ಮದಿಯ ಸಂಗತಿಯೆಂದರೆ: ಯಾವನೋ ಅಬಕಾರಿ ಕಂಟ್ರಾಕ್ಟರ್ ಮತ್ತು ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್ ಕೊಂಡುಕೊಂಡಿದ್ದಾರೆ ಎಂದು ಹೇಳಿಲ್ಲವಲ್ಲ. ಮತ್ತೊಬ್ಬ ಗೆಳೆಯರು ಆಜ್ಞೆ ಮಾಡಿದರು: ನೀವು ಸಾಹಿತ್ಯ ಪರಿಷತ್ತಿನ ಸದಸ್ಯರಲ್ಲ ನಿಮಗೆ ಅದರ ವಿರುದ್ಧ ಮಾತಾಡುವುದಕ್ಕೆ ಏನು ಅಧಿಕಾರವಿದೆ ಎಂದು. ಇಂಥ ಹಾರಿಕೆ ಮಾತುಗಳು

ಯಾರನ್ನೂ ಸಂವಾದಕ್ಕೆ ಬರಮಾಡಿಕೊಳ್ಳುವುದಿಲ್ಲ. ಮನಸ್ಸಿನ ಸುತ್ತ ಕತ್ತಲು ಕವಿಸುತ್ತಾರೆ.

25–2–90 —ಶೂದ್ರಶ್ರೀನಿವಾಸ್

# ವಿಮರ್ಶೆಗೆ ಬಂದ ಪುಸ್ತಕಗಳು

**ಪುರುಶೋತ್ತಮ**—ಕಾದಂಬರಿ, ಯಶವಂತ ಚಿತ್ತಾಲ, ಗೀತಾ ಬುಕ್ ಹೌಸ್, ಮೈಸೂರು, ಬೆಲೆ : 65ರೂ. ಚಿತ್ತಾಲರು ನಮ್ಮ ಮಹತ್ವಪೂರ್ಣ ಬರಹಗಾರರಲ್ಲಿ ಒಬ್ಬರು. ಛೇದ ಕಾದಂಬರಿಯ ನಂತರ ಬಂದಿರುವ ಬೃಹತ್ ಕಾದಂಬರಿ ಇದು. ತುಂಬ ಆಕಾಂಕ್ಷೆಯಿಂದ ಬರೆದ ಕಾದಂಬರಿ ಇದು. ಚಿತ್ತಾಲರಂಥವರು ಏನನ್ನು ಬರೆದರೂ ಓದುತ್ತೇವೆ ಅಲ್ಲವೆ ?

**ಕಾಲ**—ಕತೆಗಳು, ಜಯಪ್ರಕಾಶ ಮಾವಿನಕುಳಿ, ಸ್ಫಟಿಕ ಪ್ರಕಾಶನ, "ಶುಭವಾಗಲಿ" ಕಾಲೇಜು ರಸ್ತೆ, ಮೂಡುಬಿದಿರೆ–574197 ಬೆಲೆ : 20–00 ರೂ. ಈ ಸಂಕಲನದಲ್ಲಿ ಹದಿನಾರು ಕಥೆಗಳಿವೆ. ಈಗಾಗಲೇ ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿರುವ ಕಥೆಗಳು, ಸ್ವಲ್ಪ ನಾರ್ಸಿಸಸ್ ಮನೋಭಾವನೆಯವು, ಆದರೂ ಓದಬಹುದು.

**ಪ್ರಭವ**—ಕವನಗಳು, ನಾ. ಮೊಗಸಾಲೆ, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು–85, ಬೆಲೆ : 18–00 ರೂ. ಇದು ಮೊಗಸಾಲೆಯವರ ನಾಲ್ಕನೇ ಕವನ ಸಂಕಲನ. ಈಗಾಗಲೇ ಕಾವ್ಯದಲ್ಲಿ ಒಂದಷ್ಟು ಅರ್ಥಪೂರ್ಣ ಕೆಲಸವನ್ನು ಮಾಡುವುದರ ಮೂಲಕ ಕೆಲವು ಉತ್ತಮ ಕವನಗಳನ್ನು ನಮಗೆ ನೀಡಿದ್ದಾರೆ. ಈ ಸಂಕಲನದಲ್ಲಿ ಅಂಥ ಕೆಲವು ಉತ್ತಮ ಕವನಗಳನ್ನು ಓದಬಹುದು.

**ಪುಟ್ಟ ಗುಲಾಬಿ ಹೂವೆ**—ಕತೆಗಳು, ಆರ್.ಡಿ. ಹೆಗಡೆ, ಆಲ್ಮನೆ ಪ್ರಕಾಶನ, ಕಾನಗೋಡು ಅಂಚೆ, ಸಿರ್ಸಿ (ಉ.ಕ), ಬೆಲೆ 16–00 ರೂ. ಆರ್.ಡಿ. ಹೆಗಡೆಯವರು ನಮ್ಮ ನಡುವಿನ ಗಂಭೀರವಾಗಿ ಚಿಂತಿಸುವ ಲೇಖಕರು. ಇವರ ವೈಚಾರಿಕ ಲೇಖನಗಳು ನಮಗೆ ಈಗಾಗಲೇ ಪರಿಚಯವಾಗಿವೆ. ಸದ್ಯದ ಈ ಸಂಕಲನದ ಆರು ಕಥೆಗಳು ಅಷ್ಟೊಂದು ಮಹತ್ವಪೂರ್ಣವಾದ ಕಥೆಗಳಲ್ಲದಿದ್ದರೂ ಓದಿ ಸಂತೋಷ ಪಡಬಹುದಾದ ಕಥೆಗಳು. ಉತ್ತಮ ಕಥೆಗಳನ್ನು ಬರೆಯಬಲ್ಲರು.

**ಬದುಕು**—ಲೇಖನಗಳು, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ತರಬಾಳು ಪ್ರಕಾಶನ, ಸಿರಿಗೆರೆ–577541, ಬೆಲೆ : 12–00 ರೂ. ಇಲ್ಲಿಯ ಒಟ್ಟು ಹದಿನಾರು ಲೇಖನಗಳ ಮೂಲನೆಲೆ ಆರೋಗ್ಯಪೂರ್ಣವಾದ ಚಿಂತನೆ. ಎಲ್ಲಿಯೂ ಸಿನಿಕರಾಗದೆ ಆತ್ಮೀಯವಾಗಿ ಒಟ್ಟು ವಿಷಯವನ್ನು ನೋಡುತ್ತ ಹೋಗುತ್ತಾರೆ. ಆರಾಮವಾಗಿ ಓದುತ್ತಾ ಹೋಗಬಹುದು.

— ಸಿದ್ಧಾರ್ಥ

ಶೂದ್ರಕ್ಕೆ ಶುಭಾಶಯಗಳು

ವೈ. ಗೋಪಾಲರೆಡ್ಡಿ
ರಿಕ್ಕಿಗರು, ಬೆಂಗಳೂರು ದಕ್ಷಿಣ (ತಾ), ವ್ಯವಸಾಯೋತ್ಪನ್ನಗಳ ಮಾರಾಟ ಸಂಘ,
ಸಂಬ್ಬಯ್ಯ ಸರ್ಕಲ್, ಬೆಂಗಳೂರು–560 027

---

ಜಾಗೃತ ಸಾಹಿತ್ಯ ಸಮಾವೇಶಕ್ಕೆ ಶುಭಾಶಯಗಳು

ಶ್ರೀಧರ್ ಮತ್ತು ಶ್ರೀನಿವಾಸ್
(ವಿಕಸನ ಬಳಗ)

---

ಸುಮಂಗಲಿ ಸಿಲ್ಕ್ಸ್ ಅಂಡ್ ಸ್ಯಾರೀಸ್
ಧನಲಕ್ಷ್ಮಿ ಕಾಂಪ್ಲೆಕ್ಸ್, 8ನೇ ಮೈನ್,
ಎಂ.ಆರ್.ಸಿ.ಆರ್. ಲೇಔಟ್, ವಿಜಯನಗರ,
ಬೆಂಗಳೂರು–40

FNP/KRNU/72 No. M (2) PRB 211/73/74
SHOODRA Kannada Monthly

# ಗಾಂಧಿ ತತ್ವ ಚಿಂತನೆ ಮತ್ತು ವಿಕೇಂದ್ರೀಕರಣ

ಸಂಚಿಕೆ ಸಿದ್ಧವಾಗಿದೆ

ಮಾರ್ಚ್ 1990ರ ಸಂಚಿಕೆಯಲ್ಲಿ :

**ಡಾ॥ ಕೆ.ಎಸ್. ಕೃಷ್ಣಸ್ವಾಮಿ-ಡಾ॥ ಮುರಾರಿ ಬಲ್ಲಾಳ-ಕೆ. ಸತ್ಯನಾರಾಯಣ ಡಾ॥ ಡಿ.ಆರ್. ನಾಗರಾಜ್–ಕೆ.ಎಸ್. ನಾರಾಯಣಸ್ವಾಮಿ––ಪ್ರೊ. ವಿ.ಕೆ. ನಟರಾಜ್––ಸಿ. ನಾರಾಯಣಸ್ವಾಮಿ––ಡಾ॥ ಯು.ಆರ್. ಅನಂತಮೂರ್ತಿ ಜಾರ್ಜ್ ಆರ್ವೆಲ್ – ಪಿ. ಲಂಕೇಶ್ – ರಮೇಶ್‌ಕುಮಾರ್—ಜೆ.ಹೆಚ್. ಪಟೇಲ್ ಮುಂತಾದವರು.**

No less than the films of violence, the true American comedy, with or without music, is a thoroughly indigenous product. The purely visual comedy died with the last silent films of Chaplin. The purely verbal ones have no validity as films. So we are left with the ones that sought to combine the two. These to be really good, had to fulfil three main conditions; they had to be well written, they had to be well directed, and they had to be well acted.

**—Satyajit Ray**

M. Srinivas, Editor for Shudra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore-29